
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಲಾಲ್ ಸಲಾಂ
ಕಾಮ್ರೇಡ್
ಕೆ.ಎಂ.
ಶ್ರೀನಿವಾಸ್



ಸಂಪುಟ 13 | ಸಂಚಿಕೆ 40 | ಸೆಪ್ಟೆಂಬರ್ 30– ಅಕ್ಟೋಬರ್ 6, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com



ಹ್ಯೂಸ್ಟನ್‌ನಲ್ಲಿ ಮೋದಿ–ಟ್ರಂಪ್ ಶೋ

“ಮಾಧ್ಯಮಗಳ ವಿರುದ್ಧವೂ ಹೋರಾಟ ನಡೆಯಬೇಕಿದೆ”

– ರವೀಶ್ ಕುಮಾರ್





ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ವಿರುದ್ಧ

ಎಡಪಕ್ಷಗಳ ರಾಷ್ಟ್ರೀಯ ಸಮಾವೇಶ



ಕರ್ನಾಟಕ ಉಪಚುನಾವಣೆ ಮುಂದೂಡಿದ್ದೇಕೆ?

ಕಾರ್ಪೊರೇಟ್‌ಗಳಿಗೆ ಮತ್ತಷ್ಟು ಶ್ರೀಮಂತಿಕೆ-ಜನಗಳಿಗೆ ಇನ್ನಷ್ಟು ಸಂಕಟಗಳು-ಸಿಪಿಐ(ಎಂ) ಪೊಲಿಟ್‌ಬ್ಯುರೊ

"ಕಾರ್ಪೊರೇಟ್-ಕೋಮುವಾದಿ ನಂಟು ಭಾರತೀಯ ಜನತೆಯ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುತ್ತಿದೆ"

ಆರೆಸ್ಸೆಸ್-ಬಿಜೆಪಿ ಸರಕಾರ ಕಾರ್ಪೊರೇಟ್‌ಗಳಿಗೆ ಮತ್ತು ಸೂಪರ್ ಶ್ರೀಮಂತರಿಗೆ 1.45 ಲಕ್ಷ ಕೋಟಿ ರೂ.ಗಳ ಅಗಾಧ ರಿಯಾಯ್ತಿಗಳನ್ನು ಕೊಡಮಾಡಲು ಒಂದು ಸುಗ್ರೀವಾಜ್ಞೆಯ ಮೂಲಕ ಆದಾಯ ತೆರಿಗೆ ಕಾಯ್ದೆಯನ್ನು ತಿದ್ದುಪಡಿ ಮಾಡಿದೆ. ಇದಕ್ಕೆ ಮೊದಲು ರಿಯಲ್ ಎಸ್ಟೇಟ್ ಮತ್ತು ರಫ್ತು ವಲಯಕ್ಕೆ 70,000 ಕೋಟಿ ರೂ.ಗಳ ರಿಯಾಯ್ತಿಗಳನ್ನು ಕೊಡಲಾಗಿತ್ತು. ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳಿಂದ ಸ್ವಾಧೀನ ಪಡಿಸಿಕೊಂಡ 1.76 ಲಕ್ಷ ಕೋಟಿ ರೂ.ಗಳನ್ನು ಉದ್ಯೋಗಾವಕಾಶಗಳನ್ನು ನಿರ್ಮಿಸಲು ಮತ್ತು ಜನಗಳ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಲು ಸಾರ್ವಜನಿಕ ಹೂಡಿಕೆಗಳಿಗೆ ಬಳಸಿಕೊಳ್ಳುವ ಬದಲು ಈಗ ಅದನ್ನು ಕಾರ್ಪೊರೇಟ್‌ಗಳಿಗೆ ವರ್ಗಾಯಿಸಲಾಗುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಕೇಂದ್ರ ಸರಕಾರದ ಸಪ್ಟಂಬರ್ 20ರ ಕ್ರಮವೂ ಸೇರಿದಂತೆ ಇತ್ತೀಚಿನ ಆರ್ಥಿಕ ಕ್ರಮಗಳನ್ನು ಬಲವಾಗಿ ಟೀಕಿಸುತ್ತ ಹೇಳಿದೆ.

ಭಾರತದಲ್ಲಿನ ಪ್ರಸ್ತುತ ಆರ್ಥಿಕ ಹಿಂಜರಿತ

"ರಿಝರ್ವ್ ಬ್ಯಾಂಕಿನಿಂದ ತೆಗೆದುಕೊಂಡಿರುವ 1.76 ಲಕ್ಷ ಕೋಟಿ ರೂ.ಗಳನ್ನು ಸಾರ್ವಜನಿಕ ಹೂಡಿಕೆಗೆ ಬಳಸಬೇಕು, ಸೂಪರ್ ಶ್ರೀಮಂತರ ಪ್ರಯೋಜನಕ್ಕಲ್ಲ"

ಉಂಟಾಗಿರುವುದು ಬೇಡಿಕೆಯ ಕೊರತೆಯಿಂದಾಗಿ, ಅಂದರೆ ಜನಗಳಿಗೆ ತಮಗೆ ಬೇಕಾದ ವಸ್ತುಗಳನ್ನು ಖರೀಸುವ ಶಕ್ತಿ ಇಲ್ಲವಾದ್ದರಿಂದ. ಬಜೆಟ್ ಪ್ರಕಟಣೆಗಳನ್ನು ತಿರುಗುಮುರುಗುಗೊಳಿಸುವ ಪ್ರಯತ್ನಗಳಿಂದ ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಿಸಲು ಸಾಧ್ಯವಿಲ್ಲ. ಏಕೆಂದರೆ ಉತ್ಪಾದನೆಯಾಗುವ ವಸ್ತುಗಳನ್ನು ಕೊಳ್ಳಲು ಜನಗಳಲ್ಲಿ ಹಣವೇ ಇಲ್ಲ. ಜಾಗತಿಕ ಮಂದಗತಿ ಮತ್ತು ವಿಶ್ವ ವ್ಯಾಪಾರದಲ್ಲಿ ಒಂದು ಅಗಾಧ ಇಳಿಕೆಯಿಂದಾಗಿ ನಮ್ಮ ರಫ್ತುಗಳನ್ನು ಹೆಚ್ಚಿಸುವ ಯಾವುದೇ ನಿರೀಕ್ಷೆಯೂ ಹುಸಿಯಾಗುತ್ತದೆ.

ಸರ್ಚಾರ್ಜ್ ಮತ್ತು ಸೆಸ್ ಸೇರಿದಂತೆ ಕಾರ್ಪೊರೇಟ್ ತೆರಿಗೆಯ ಪ್ರಮಾಣವನ್ನು 34.94% ದಿಂದ 25.17%ಕ್ಕೆ ಇಳಿಸಲಾಗಿದೆ. ಇದು ಸುಮಾರು 10%ದಷ್ಟಾಗುವ ಒಂದು ಬೃಹತ್ ರಿಯಾಯ್ತಿ. ಅಲ್ಲದೆ, ಅಕ್ಟೋಬರ್ 1, 2019ರಿಂದ ಹೊಸ ಹೂಡಿಕೆಗಳನ್ನು ಮಾಡುವ ಕಂಪನಿಗಳು ಸರ್ಚಾರ್ಜ್ ಗಳೂ ಸೇರಿದಂತೆ ಕೇವಲ 17.01% ತೆರಿಗೆಗಳನ್ನು ತೆರುವ ಅವಕಾಶವನ್ನೂ ಕೊಡಲಾಗಿದೆ.

ಬಜೆಟಿನಲ್ಲಿ ಪ್ರಕಟಿಸಿದ್ದ ಬಂಡವಾಳ ಗಳಿಕೆಯ ಮೇಲೆ ಹೆಚ್ಚಿನ ಸರ್ಚಾರ್ಜನ್ನು ಹಿಂತೆಗೆದುಕೊಂಡು ವಿದೇಶಿ ಪೋರ್ಟ್ ಫೋಲಿಯೊ ಹೂಡಿಕೆದಾರರಿಗೆ ಪ್ರಯೋಜನವನ್ನು ಒದಗಿಸಲಾಗಿದೆ. ಇದು ಮೋದಿಯವರ ಅಮೆರಿಕಾ ಭೇಟಿ ಮತ್ತು ಅಮೆರಿಕಾ ಮತ್ತಿತರ ವಿದೇಶಗಳಿಂದ ಪೋರ್ಟ್ ಫೋಲಿಯೊ ಹೂಡಿಕೆದಾರರನ್ನು ಸಂತುಷ್ಟಗೊಳಿಸುವ ನಾಚಿಕೆಗೇಡಿನ ಪ್ರಯತ್ನದ ಹಿನ್ನೆಲೆಯಲ್ಲಿ ಬರುತ್ತಿದೆ ಎಂದು ಪೊಲಿಟ್ ಬ್ಯುರೊ ವಿಮರ್ಶಿಸಿದೆ.

ದೇಶದ ದುಡಿಯುವ ಜನಗಳಿಗೆ ಆತಂಕ ಹುಟ್ಟಿಸುವಂತೆ ಏರುತ್ತಿರುವ ನಿರುದ್ಯೋಗ, ಲೇ-ಆಫ್‌ಗಳು, ರಿಟ್ರೆಂಚ್ ಮೆಂಟ್ ಗಳು ಮತ್ತು ನಿಜ ಆದಾಯಗಳಲ್ಲಿ ತೀವ್ರ ಇಳಿಕೆಯ ಒಂದು ಸನ್ನಿವೇಶದಲ್ಲಿ ಈ ಯಾವ ಕ್ರಮವೂ ಜನಗಳ ಜೀವನಾಧಾರಗಳನ್ನು ಉತ್ತಮಪಡಿಸಲಾಗಲೀ, ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲಾಗಲೀ ನೆರವಾಗಲಾರದು. ಈಗ ಬೇಕಾಗಿರುವುದು ಉದ್ಯೋಗಾವಕಾಶಗಳನ್ನು ನಿರ್ಮಿಸಲು ಮತ್ತು ಜನಗಳ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಲು ದೊಡ್ಡ ಪ್ರಮಾಣದ ಸಾರ್ವಜನಿಕ ಹೂಡಿಕೆ. ಆದರೆ ಸರಕಾರ ತದ್ವಿರುದ್ಧ ಧೋರಣೆಯನ್ನೇ ಅನುಸರಿಸುತ್ತಿದೆ. ಇದು ಖಾಸಗಿ ಕಾರ್ಪೊರೇಟ್ ಪ್ರಯೋಜನಗಳಿಗಾಗಿ ಮತ್ತು ಜೂಜುಕೋರ ಲಾಭಕ್ಕಾಗಿ ಭಾರತೀಯ ಹಣದ ಲೂಟಿಯಲ್ಲದೆ ಬೇರೇನೂ ಅಲ್ಲ.

ಕಾರ್ಪೊರೇಟ್-ಕೋಮುವಾದಿ ನಂಟು ಭಾರತೀಯ ಜನತೆಯ ಮೇಲೆ ಹೆಚ್ಚೆಚ್ಚು ಸಂಕಟಗಳನ್ನು ಹೇರುತ್ತಿದೆ ಎಂದು ವಿಶ್ಲೇಷಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ರಿಝರ್ವ್ ಬ್ಯಾಂಕಿನ ಮೀಸಲು ನಿಧಿಗಳಿಂದ ತೆಗೆದುಕೊಂಡಿರುವ 1.76 ಲಕ್ಷ ಕೋಟಿ ರೂ.ಗಳನ್ನು ಬಹಳಷ್ಟು ಅಗತ್ಯವಿರುವ ಮೂಲರಚನೆಗಳನ್ನು ಕಟ್ಟಿ ಬೆಳೆಸುವ ಸಾರ್ವಜನಿಕ ಹೂಡಿಕೆಗೆ ಬಳಸಬೇಕು ಎಂಬ ತನ್ನ ಬೇಡಿಕೆಯನ್ನು ಪುನರುಚ್ಚರಿಸಿದೆ.

ಕಲ್ಲಿದ್ದಲು ಕಾರ್ಮಿಕರ ಐತಿಹಾಸಿಕ ಮುಷ್ಕರ-ಸಿಐಟಿಯು ಅಭಿನಂದನೆ ಮತ್ತು ಅಭಿವಂದನೆ

"ದೇಶಪ್ರೇಮ ಮತ್ತು ರಾಷ್ಟ್ರವಾದ ಬಿಜೆಪಿ ಮಂದಿಗೆ ಜನಗಳನ್ನು ಮರುಳು ಮಾಡುವ ಆಡಂಬರದ ಪದಗಳಷ್ಟೇ"

ಕೋಲ್ ಇಂಡಿಯಾ ಲಿಮಿಟೆಡ್ ಮತ್ತು ಸಿಂಗರೇಣಿ ಗಣಿಗಳ ಐದು ಲಕ್ಷಕ್ಕೂ ಹೆಚ್ಚು ಕಲ್ಲಿದ್ದಲು ಕಾರ್ಮಿಕರು ಸಪ್ಟಂಬರ್ 24ರಂದು ಸಂಪೂರ್ಣ ಮುಷ್ಕರವನ್ನು ನಡೆಸಿದರು. ಕಲ್ಲಿದ್ದಲು ತೆಗೆಯುವುದು ಮತ್ತು ಮಾರಾಟದಲ್ಲಿ 100% ವಿದೇಶಿ ನೇರ ಹೂಡಿಕೆಗೆ ತಂತಾನೇ ಅವಕಾಶ ಕಲ್ಪಿಸುವ ಮೋದಿ ಸರಕಾರದ ನಿರ್ಧಾರದ ವಿರುದ್ಧ ಕಲ್ಲಿದ್ದಲು ವಲಯದ ಆರು ಕಾರ್ಮಿಕ ಸಂಘಗಳು ಈ ಮುಷ್ಕರಕ್ಕೆ ಕರೆ ನೀಡಿದ್ದವು.

ಮೋದಿ ಸರಕಾರ ಈ ನಿರ್ಧಾರದ ಪ್ರಕಾರ ವಿದೇಶಿ ಕಂಪನಿಗಳು ನಮ್ಮ ಕಲ್ಲಿದ್ದಲು ಗಣಿಗಳಿಂದ ಕಲ್ಲಿದ್ದಲು ತೆಗೆಯಬಹುದು ಮಾತ್ರವಲ್ಲ, ಅವನ್ನು ಮಾರುಕಟ್ಟೆ ಬೆಲೆಗಳಲ್ಲಿ ಮಾರಿಕೊಳ್ಳಬಹುದು, ರಫ್ತು ಕೂಡ ಮಾಡಬಹುದು. ಇದರಿಂದ ಬಂದ ಲಾಭಗಳನ್ನು ತಮ್ಮ ದೇಶಗಳಿಗೆ ಸಾಗಿಸಲೂ ಈ ಕಂಪನಿಗಳಿಗೆ ಈಗ ಅವಕಾಶವಾಗಿದೆ. ಇದರ ವಿರುದ್ಧ ಮುಷ್ಕರಕ್ಕೆ ಇಳಿಯುವ ಮೂಲಕ ರಾಷ್ಟ್ರದ ಹಿತರಕ್ಷಣೆಯ ದೃಢ ನಿರ್ಧಾರ ಮಾಡಿರುವುದು ಕಾರ್ಮಿಕರೇ ಹೊರತು ಈ ಸರಕಾರವಲ್ಲ ಎಂಬುದನ್ನು ಕಲ್ಲಿದ್ದಲು ಕಾರ್ಮಿಕರು ಮತ್ತೊಮ್ಮೆ ತೋರಿಸಿ ಕೊಟ್ಟಿದ್ದಾರೆ ಎಂದು ಸಿಐಟಿಯು ಅವರನ್ನು ಅಭಿನಂದಿಸುತ್ತ, ಅಭಿವಂದಿಸಿದೆ.

ಕಾರ್ಮಿಕರು ತಮ್ಮ ಅತ್ಯಂತ ಗಟ್ಟಿಯಾದ ದೇಶಪ್ರೇಮೀ ಭಾವನೆಗಳನ್ನು ವ್ಯಕ್ತಗೊಳಿಸಿದರೆ, ಅತ್ತ ತದ್ವಿರುದ್ಧವಾಗಿ ಬಿಜೆಪಿ, ಅದರ ಮಸರಕಾರ ಮತ್ತು ಪ್ರಧಾನ ಮಂತ್ರಿಗಳು ತಮ್ಮ ದೇಶಿ-ವಿದೇಶಿ ಕಾರ್ಪೊರೇಟ್ ಯಜಮಾನರುಗಳ ಹಿತಸಾಧಿಸುವುದೇ ತಮ್ಮ ಪರಮ ಆದ್ಯತೆ ಎಂದು ಮತ್ತೊಮ್ಮೆ ಬಯಲು ಮಾಡಿಕೊಂಡಿದ್ದಾರೆ. ದೇಶಪ್ರೇಮ ಮತ್ತು ರಾಷ್ಟ್ರವಾದ ಅವರಿಗೆ ಜನಗಳನ್ನು ಮರುಳು ಮಾಡುವ ಆಡಂಬರದ ಮಾತುಗಳಷ್ಟೇ. ಕಾರ್ಮಿಕರು ಮುಷ್ಕರದ ನಿರ್ಧಾರ ಮಾಡಿದರೂ, ಈ ಸರಕಾರ ತನ್ನ ದೇಶ-ವಿರೋಧಿ ಕ್ರಮಕ್ಕೆ ಅಧಿಸೂಚನೆಯನ್ನು ಹೊರಡಿಸಿಯೇ ಬಿಟ್ಟಿದೆ.

ತಮ್ಮ ಈ ಸಂಪೂರ್ಣ ಮುಷ್ಕರದ ಮೂಲಕ ಕಲ್ಲಿದ್ದಲು ಕಾರ್ಮಿಕರು, ಕಾರ್ಮಿಕ ವರ್ಗದ ಭಾಗವಾಗಿ ರಾಷ್ಟ್ರೀಯ ಹಿತಗಳನ್ನು ರಕ್ಷಿಸುವ ದೃಢನಿರ್ಧಾರ ಮಾಡಿರುವುದು ಕಾರ್ಮಿಕರೇ, ದೇಶಪ್ರೇಮ ಇರುವುದು ಕಾರ್ಮಿಕ ವರ್ಗಕ್ಕೇ ಎಂದು ಸಾಬೀತು ಮಾಡಿದ್ದಾರೆ

ಸುಮಾರು ಒಂದು ಶತಮಾನದ ಹಿಂದೆ, ಇದೇ ಝರಿಯ ಕಲ್ಲಿದ್ದಲು ಪಟ್ಟಿಯಲ್ಲಿ, ದೇಶದ ಮೊದಲ ರಾಷ್ಟ್ರೀಯ ಕಾರ್ಮಿಕ ಕೇಂದ್ರವಾದ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕರೆ ನೀಡಿದ ಸಭೆಯೊಂದರಲ್ಲಿ ಭಾಗವಹಿಸಿದ್ದ 50ಸಾವಿರ ಕಾರ್ಮಿಕರು 'ಸ್ವರಾಜ್ಯ'ಕ್ಕೆ ಕರೆ ನೀಡುವ ಒಂದು ಠರಾವನ್ನು ಅಂಗೀಕರಿಸಿದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು ಎಂದು ಸಿಐಟಿಯು ಹೇಳಿದೆ.

ದೇಶಾದ್ಯಂತ 82 ಗಣಿಗಾರಿಕೆ ಕ್ಷೇತ್ರಗಳಲ್ಲಿ ಹರಡಿ ಹೋಗಿರುವ ಸುಮಾರು 600 ಗಣಿಗಾರಿಕೆ ಸಂಸ್ಥೆಗಳಲ್ಲಿ ಲಕ್ಷಾಂತರ ಕಾರ್ಮಿಕರು ಬಿಜೆಪಿ ಸರಕಾರ ಒತ್ತೆಯಿಡಬೇಕೆಂದು ನಿರ್ಧರಿಸಿರುವ ರಾಷ್ಟ್ರೀಯ ಹಿತಗಳನ್ನು ಮತ್ತು ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಲು ಮುಷ್ಕರಕ್ಕೆ ಇಳಿಯಬೇಕಾಗಿ ಬಂದಿದೆ.

ದೇಶದ ಐಕ್ಯ ಕಾರ್ಮಿಕ ಆಂದೋಲನ ಸಪ್ಟಂಬರ್ 30ರಂದು ಸಂಸತ್ತಿನ ಬಳಿಯಲ್ಲಿ ಒಂದು ಬಹಿರಂಗ ಸಾಮೂಹಿಕ ಸಮಾವೇಶಕ್ಕೆ ಕರೆ ನೀಡಿದೆ. ಅಲ್ಲಿ ಈ ರೀತಿಯಲ್ಲಿ ದೇಶದ ನೈಸರ್ಗಿಕ ಸಂಪನ್ಮೂಲಗಳ ಮತ್ತು ಸಾರ್ವಜನಿಕ ವಲಯದ ಮಾರಾಟದ ವಿರುದ್ಧ ಮತ್ತು ಕಾರ್ಪೊರೇಟ್‌ಗಳ ದುರಾಸೆಗಳಿಗಾಗಿ ಕಾರ್ಮಿಕರ ಮೂಲ ಹಕ್ಕುಗಳ ಮೇಲೆ ದಾಳಿಗಳ ವಿರುದ್ಧ ಒಂದು ಹೋರಾಟದ ಕಾರ್ಯಕ್ರಮವನ್ನು ಪ್ರಕಟಿಸಲಿವೆ.

ಮೋದಿ ನೇತೃತ್ವದ ಬಿಜೆಪಿ ಸರಕಾರದ ಈ ರಾಷ್ಟ್ರ-ವಿರೋಧಿ, ಜನ-ವಿರೋಧಿ ಮತ್ತು ಕಾರ್ಮಿಕ-ವಿರೋಧಿ ಧೋರಣೆಗಳನ್ನು ಐಕ್ಯತೆಯಿಂದ ಪ್ರತಿರೋಧಿಸಬೇಕು ಎಲ್ಲ ಕಾರ್ಮಿಕರು, ಅವರು ಯಾವುದೇ ಸಂಘಟನೆಗೆ ಸೇರಿದ್ದರೂ, ಒಂದಾಗಿ ಪ್ರತಿರೋಧಿಸಬೇಕು ಮತ್ತು ಅವನ್ನು ಸೋಲಿಸಬೇಕು ಎಂದು ಸಿಐಟಿಯು ಮನವಿ ಮಾಡಿದೆ.

ಚುನಾವಣಾ ವೆಚ್ಚಗಳ ಬಗ್ಗೆ ಸುಳ್ಳು ಆರೋಪ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಿಪಿಐ(ಎಂ)ನ ಚುನಾವಣಾ ನಿಧಿ ಸಂಗ್ರಹ ಮತ್ತು ವೆಚ್ಚಗಳ ಬಗ್ಗೆ ಮಾಧ್ಯಮಗಳ ಒಂದು ವಿಭಾಗದಲ್ಲಿ ವರದಿಗಳು ಕಾಣಬಂದಿವೆ. ಇವು ಪಕ್ಷದ ಹೆಸರು ಕೆಡಿಸಲು ರೂಪಿಸಿರುವ ಸುಳ್ಳು ಮಾಹಿತಿಯಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಈ ವರದಿಗಳಲ್ಲಿರುವ ಆರೋಪಗಳಿಗೆ ತದ್ವಿರುದ್ಧವಾಗಿ, ಲೋಕಸಭಾ ಚುನಾವಣೆಗಳ ಸಮಯದಲ್ಲಿ ಪಕ್ಷ ಪಡೆದ ಎಲ್ಲ ದೇಣಿಗೆಗಳು ಮತ್ತು ನಿಧಿಗಳು ಭಾರತದ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಹೇಳಿಕೆಯಲ್ಲಿ ಇವೆ. ತಮಿಳುನಾಡು ಸೇರಿದಂತೆ ದೇಶದ ಎಲ್ಲೆಡೆಗಳಿಂದ ಪಡೆದ ವಂತಿಗೆಗಳು ಮತ್ತು ದೇಣಿಗೆಗಳೂ ಸೇರಿವೆ. ಈ ವರದಿಗಳಲ್ಲಿ ಸುಳ್ಳು-ಸುಳ್ಳೇ ಆಪಾದಿಸಿರುವಂತೆ ಯಾವುದನ್ನೂ ಅಡಗಿಸಿಟ್ಟಿಲ್ಲ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಎರಡನೆಯದಾಗಿ, ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಹೇಳಿಕೆಯಲ್ಲಿ ಚುನಾವಣಾ ಸಮಯದಲ್ಲಿ ಪಕ್ಷದ ಎಲ್ಲ ವೆಚ್ಚಗಳ ಬಗ್ಗೆಯೂ ಇದೆ. ಮಾಧ್ಯಮ ವರದಿಯಲ್ಲಿ ಹೇಳಿರುವ 'ಮೊತ್ತ' ಕಪೋಲಕಲ್ಪಿತ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಇವನ್ನೆಲ್ಲ ಭಾರತದ ಚುನಾವಣಾ ಆಯೋಗದ ಅಧಿಕೃತ ವೆಬ್ ತಾಣದಲ್ಲಿ ಲೆಕ್ಕಪತ್ರದ ಹೇಳಿಕೆಯನ್ನು ಹಾಕಿದಾಗ ತಪಸೀಲು ಮಾಡಬಹುದು ಎಂದಿದೆ.

ಚಿನ್ಮಯಾನಂದ ಅತ್ಯಾಚಾರ ಆರೋಪ ಪ್ರಕರಣ- ಪೀಡಿತಳನ್ನೇ ಬಂಧಿಸಿ ಕಿರುಕುಳ

ಯೋಗಿ ಸರಕಾರದ ಒತ್ತಡದಿಂದ ಎಸ್‌ಐಟಿ ಮತ್ತು ಪೊಲೀಸ್ ಪಾತ್ರ-ಎಐಡಿಡಬ್ಲ್ಯುಎ ಖಂಡನೆ

ಉತ್ತರಪ್ರದೇಶದ ಚಿನ್ಮಯಾನಂದ ಪ್ರಕರಣದ ಪೀಡಿತಳನ್ನು ಬಲವಂತವಾಗಿ ಬಂಧಿಸಿ ಕಿರುಕುಳ ನೀಡಲಾಗುತ್ತಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ, ಮತ್ತು ಆಕೆಯ ವಿರುದ್ಧ ದಾಖಲಿಸಿರುವ ವಸೂಲಿ ಕೇಸನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು ಎಂದು ಅದು ಆಗ್ರಹಿಸಿದೆ. ಯೋಗಿ ಸರಕಾರದ ಒತ್ತಡದಿಂದ ವಿಶೇಷ ತನಿಖಾ ತಂಡ ಮತ್ತು ಉತ್ತರಪ್ರದೇಶ ಪೊಲೀಸ್ ಪಾತ್ರವನ್ನು ಎಐಡಿಡಬ್ಲ್ಯುಎ ಖಂಡಿಸಿದೆ.

ಬಿಜೆಪಿ ಮುಖಂಡ ಮತ್ತು ಮಾಜಿ ಕೇಂದ್ರ ಮಂತ್ರಿ 'ಸ್ವಾಮಿ' ಚಿನ್ಮಯಾನಂದ ಮೇಲೆ ಆಗಸ್ಟ್ 27 ರಂದು ಪ್ರಕರಣ ದಾಖಲಿಸಲಾಯಿತು. ಆದರೆ 14 ದಿನಗಳ ನಂತರ, ಸಾರ್ವಜನಿಕ ಆಕ್ರೋಶದಿಂದಾಗಿಯಷ್ಟೇ ಬಂಧಿಸಲಾಯಿತು. ಅಲ್ಲದೆ ಆತನ ಮೇಲಿನ ಕೇಸನ್ನು ದುರ್ಬಲಗೊಳಿಸಲಾಗಿದೆ. ಆತ ಜೈಲಿನಲಲಿರುವ ಬದಲು ಆಸ್ಪತ್ರೆಯಲ್ಲಿದ್ದಾನೆ. ಸೆಕ್ಷನ್164ರ ಅಡಿಯಲ್ಲಿ ಪೀಡಿತಳು ಹೇಳಿಕೆ ನೀಡಿದ್ದರೂ ವೈದ್ಯಕೀಯ ಪರೀಕ್ಷೆ ಮಾಡಿಸಿಲ್ಲ.

ಈ ನಡುವೆ ಸಪ್ಟಂಬರ್ 25ರಂದು ಪೀಡಿತಳು ಆರೋಪಿಯನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾಳೆ, ಆತನಿಂದ 5 ಕೋಟಿ ರೂ. ದೋಚಲು ಪ್ರಯತ್ನಿಸುತ್ತಿದ್ದಾಳೆ ಎಂಬ ಆರೋಪದ ಮೇಲೆ ಆಕೆಯನ್ನು ಮನೆಗೆ ಹೋಗಿ ಬಂಧಿಸಿ ಎಳೆದೊಯ್ಯಲಾಗಿದೆ ಎಂದು ವರದಿಯಾಗಿದೆ.

ಆರೋಪಿಯ ಮೇಲೆ ಸೆಕ್ಷನ್ 376 ಅಡಿಯಲ್ಲಿ ಮಾನಭಂಗದ ಕೇಸನ್ನು ಹಾಕಬೇಕು, ಪೀಡಿತಳಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಬೇಕು ಮತ್ತು ಆಕೆಯ ಕುಟುಂಬಕ್ಕೆ ಎಲ್ಲ ರೀತಿಯ ರಕ್ಷಣೆ ಒದಗಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಉತ್ತರಪ್ರದೇಶದ ಪೊಲೀಸರು ಮತ್ತು ಎಸ್‌ಐಟಿ ಕೂಡ ಮತ್ತೊಂದು ಮಾನಭಂಗದ ಪ್ರಕರಣದಲ್ಲಿ ಅಧಿಕಾರಸ್ಥರನ್ನು ಕಾಪಾಡುವ ಕೃತ್ಯಕ್ಕೆ ಇಳಿದುದನ್ನು ಪ್ರತಿಭಟಿಸಿ ನವದೆಹಲಿಯಲ್ಲಿ ಉತ್ತರಪ್ರದೇಶದ ಭವನದ ಎದುರು ಎಐಡಿಡಬ್ಲ್ಯುಎ ಪ್ರತಿಭಟನೆ ನಡೆಸಿತು.

ಚಿನ್ಮಯಾನಂದಗೆ ರಾಜಕೀಯ ಕೃಪಾಪೋಷಣೆ ನೀಡಬಾರದು, ಆತನನ್ನು ತಕ್ಷಣವೇ ಬಂಧಿಸಬೇಕು, ಐಪಿಸಿ 376ರ ಅಡಿಯಲ್ಲಿ ಮಾನಭಂಗದ ಕೇಸನ್ನು ಹಾಕಬೇಕು, ಪೀಡಿತಳು ಮತ್ತು ಆಕೆಯ ಕುಟುಂಬಕ್ಕೆ ರಕ್ಷಣೆ ಒದಗಿಸಬೇಕು, ಆಕೆಯ ವಿರುದ್ಧ ಹಾಕಿರುವ ಕೇಸಿನಲ್ಲಿ ನ್ಯಾಯಯುತ ವಿಚಾರಣೆಗೆ ಅವಕಾಶವಿರಬೇಕು ಮತ್ತು ಆಕೆಯೊಂದಿಗೆ ದುರ್ವರ್ತನೆ ನಡೆಸಿದ ಪೊಲೀಸ್ ಸಿಬ್ಬಂದಿಯನ್ನು ಶಿಕ್ಷಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.



ಸಂಪಾದಕೀಯ

ಚುನಾವಣಾ ಆಯೋಗ ಜನರ ವಿಶ್ವಾಸ ಕಳೆದುಕೊಳ್ಳದಿರಲಿ

ದಿಡೀರನೆ ಘೋಷಣೆಯಾದ ಕರ್ನಾಟಕ ವಿಧಾನಸಭಾ ಉಪಚುನಾವಣೆ ಅಷ್ಟೇ ದಿಡೀರನೆ ರದ್ದಾಗಿದೆ. ಇದರಿಂದ ಯಾರಿಗೆ ಲಾಭ, ಯಾರಿಗೆ ಹಾನಿ ಎಂಬ ಲೆಕ್ಕಚಾರ ಜೋರಾಗಿಯೇ ನಡೆಯಲಾರಂಭಿಸಿದೆ.

ರಾಜ್ಯದಲ್ಲಿ ಘೋಷಣೆಯಾಗಿದ್ದ ಉಪಚುನಾವಣೆಯಿಂದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಮೂರೂ ಪಕ್ಷಗಳಲ್ಲಿ ಆತಂಕ ಸೃಷ್ಟಿಯಾಗಿತ್ತು. ಆದರೀಗ ಸುಪ್ರೀಂ ಕೋರ್ಟ್ ಉಪಚುನಾವಣೆಗೆ ತಡೆ ನೀಡಿರುವುದರಿಂದ ಮೂರೂ ಪಕ್ಷಗಳಲ್ಲಿಯೂ ತಾತ್ಕಾಲಿಕ ನಿರಾಳತೆ ಮೂಡಿದಂತಾಗಿದೆ. ಯಾರಿಗೂ ಇಷ್ಟು ಬೇಗ ಚುನಾವಣೆ ಬೇಕಾಗಿರಲಿಲ್ಲ. ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ದೊಡ್ಡ ತಲೆನೋವಿನ ಸಮಸ್ಯೆಯಾಗಿತ್ತು.

ಚುನಾವಣಾ ಆಯೋಗವು ಅಕ್ಟೋಬರ್ 21 ರಂದು ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ಬಿಡುಗಡೆ ಮಾಡಿತ್ತು. ನೀತಿ ಸಂಹಿತೆ ಜಾರಿಗೆ ಬಂದಿತ್ತು. ಇದರಿಂದ ಅನರ್ಹ ಶಾಸಕರು ಅತಿ ಹೆಚ್ಚು ಆತಂಕಕ್ಕೆ ಒಳಗಾಗಿದ್ದರು. ಚುನಾವಣಾ ಆಯೋಗ ಚುನಾವಣೆಯನ್ನು ಮುಂದೂಡಲು ಒಪ್ಪಿರುವುದನ್ನೇ ಅನರ್ಹರು ದೊಡ್ಡ ಯಶಸ್ಸು ಎಂದೇ ಭಾವಿಸಿದ್ದಾರೆ.

ಸೆಪ್ಟೆಂಬರ್ 25 ರಂದು ಬುಧವಾರ ಅನರ್ಹ ಶಾಸಕರ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟಿನ ತ್ರಿಸದಸ್ಯ ಪೀಠದ ಎದುರು ನಡೆದಿತ್ತು. ಅದು ಗುರುವಾರವೂ ಮುಮದುವರೆಯಿತು. ಈ ಸಂದರ್ಭದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನ್ಯಾಯಪೀಠವು "ಕ್ಷೇತ್ರಗಳು ತೆರವಾಗಿ ಎರಡು ತಿಂಗಳೂ ಕಳೆದಿದ್ದು ಆರು ತಿಂಗಳೊಳಗೆ ಉಪಚುನಾವಣೆ ನಡೆಸಬೇಕೆಂಬ ನಿಯಮದ ಪ್ರಕಾರ ಕಾಲಾವಕಾಶ ಇದೆ" ಎಂದು ಹೇಳಿದರು. ಆಗ ಚುನಾವಣಾ ಆಯೋಗದ ಪರ ವಕೀಲರು "ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ತೀರ್ಪು ನೀಡುವ ವರೆಗೆ ಚುನಾವಣೆಯನ್ನು ಮುಂದೂಡಲಾಗುವುದು" ಎಂದು ಹೇಳಿದರು. ಇತರ ಪ್ರತಿವಾದಿಗಳೂ ಒಪ್ಪಿಗೆ ಸೂಚಿಸಿದರು. ಇದಕ್ಕೆ ಸಮ್ಮತಿ ಸೂಚಿಸಿದ ನ್ಯಾಯಪೀಠ ಅನರ್ಹರ ಅರ್ಜಿ ವಿಚಾರಣೆಯನ್ನು ಅಕ್ಟೋಬರ್ 22 ಕ್ಕೆ ಮುಂದೂಡಿತು. "ಸ್ಪರ್ಧೆಗೆ ಅವಕಾಶ ನೀಡಬೇಕು ಇಲ್ಲವೇ ಚುನಾವಣೆ ಮುಂದೂಡಬೇಕು" ಎಂದು ಆಗ್ರಹಿಸುತ್ತಿದ್ದ ಅನರ್ಹ ಶಾಸಕರು ಚುನಾವಣಾ ಆಯೋಗದ ಈ ನಿರ್ಧಾರದಿಂದ ಸಹಜವಾಗಿ ಸಮಾಧಾನವಾಗಿದೆ.

ಆದರೆ ಈ ಒಟ್ಟು ನಾಟಕೀಯ ಬೆಳವಣಿಗೆಯಲ್ಲಿ ಚುನಾವಣಾ ಆಯೋಗದ ನಡೆ ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ. ತೆರವಾಗಿದ್ದ 15 ಸ್ಥಾನಗಳಿಗೆ ಉಪಚುನಾವಣೆ ನಡೆಸಲು ಇನ್ನೂ ಸಾಕಷ್ಟು ಸಮಯ ಇದ್ದಾಗ ಇಷ್ಟೊಂದು ದಿಡೀರನೇ ಚುನಾವಣೆಯ ಘೋಷಣೆ ಮಾಡಿದ್ದು ಯಾಕೆ? ಇದರ ಹಿಂದೆ ಯಾವುದಾದರೂ ಒತ್ತಡವಿತ್ತೆ? ಒಮ್ಮೆಲೆ ಚುನಾವಣೆಯನ್ನು ಮುಂದೂಡಲು ಮುಂದಾಗಿರುವುದು ಯಾಕೆ? ಇದರ ಹಿಂದೆಯೂ ಯಾವುದಾದರೂ ಒತ್ತಡವಿತ್ತೆ?

ಸ್ವತಃ ಅರ್ಜಿ ಹಾಕದಿದ್ದರೂ, ಸುಪ್ರೀಂ ಕೋರ್ಟ್ ನೋಟಿಸ್ ನೀಡದಿದ್ದರೂ ಚುನಾವಣಾ ಆಯೋಗವು ನ್ಯಾಯಾಲಯಕ್ಕೆ ಬಂದು ವಾದ ಮಂಡಿಸಿತ್ತು. ಇದು ಸರಿಯೆ? ಚುನಾವಣೆಯನ್ನು ಮುಂದೂಡಬಹುದೆಂದು ಸ್ವತಃ ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದು ಎಷ್ಟು ಸರಿ? ಇಂತಹ ಬೆಳವಣಿಗೆ ಹಿಂದೆದೂ ನಡೆದಿರಲಿಲ್ಲ. ಹೀಗಾಗಿ ಚುನಾವಣಾ ಆಯೋಗದ ಸ್ವತಂತ್ರ ಕಾರ್ಯಾಚರಣೆಯ ಬಗ್ಗೆ ಅನುಮಾನಗಳನ್ನು ಹುಟ್ಟು ಹಾಕಿದೆ.

ಸಿ.ಬಿ.ಐ, ಆರ್.ಬಿ.ಐ, ಇ.ಡಿ., ಐ.ಟಿ. ಮೊದಲಾದ ಸ್ವಾಯತ್ತ ಸಂಸ್ಥೆಗಳು ಹೆಚ್ಚು ಹೆಚ್ಚಾಗಿ ಕೇಂದ್ರ ಸರ್ಕಾರದ ಕೈಗೊಂಬೆಗಳಂತೆ ಕೆಲಸ ಮಾಡುತ್ತಿವೆ ಎಂಬ ಟೀಕೆ ಹಿಂದಿನಿಂದಲೂ ಕೇಳಿ ಬರುತ್ತಿದ್ದರೂ ಈಗ ಇತ್ತೀಚೆಗೆ ಅದು ಹೆಚ್ಚೆಚ್ಚು ಚರ್ಚೆಯಾಗುತ್ತಿದ್ದು ಜನರಲ್ಲಿ ಆತಂಕವನ್ನು ಹೆಚ್ಚಿಸಿದೆ. ಅವುಗಳೊಂದಿಗೆ ಚುನಾವಣಾ ಆಯೊಗವೂ ಸೇರಿಕೊಂಡರೆ ನಮ್ಮ ಪ್ರಜಾಪ್ರಭುತ್ವ ಅವಸಾನಗೊಂಡಂತೆ. ಮುಕ್ತವಾದ ನ್ಯಾಯಸಮ್ಮತವಾದ ಚುನಾವಣೆಗಳೇ ಪ್ರಜಾಪ್ರಭುತ್ವದ ತಳಪಾಯ. ದೇಶವಾಸಿಗಳು ತಮಗೆ ಬೇಡವಾದ ಸರ್ಕಾರವನ್ನು ಕಿತ್ತೆಸೆಯಲು ಇರುವ ದಾರಿ ಇದೊಂದೆ. ಅದಕ್ಕೇ ಈಗ ಅಪಾಯ ಬಂದಿರುವ ಲಕ್ಷಣಗಳು ಕಾಣುತ್ತಿವೆ. ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳಿಗೆ ಇದೊಂದು ಆಹ್ವಾನ, ಇದೊಂದು ಸವಾಲು. ಚುನಾವಣಾ ಆಯೋಗ ಒಂದು ಸ್ವತಂತ್ರ ಸ್ವಾಯತ್ತ ಸಂಸ್ಥೆಯಾಗಿ ಉಳಿಯಬೇಕು. ಬಲಗೊಳ್ಳಬೇಕು.

ಜಾತಿರಹಿತ ವರ್ಗರಹಿತ ಸಮಾಜ ನಿರ್ಮಾಣಕ್ಕಾಗಿ ಹೋರಾಡಿ

ಶಹಾಪುರ: ದೇಶದ ರೈತರು, ಕೂಲಿಕಾರರು ಮತ್ತು ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಾ ದೇಶವನ್ನು ವರ್ಗ ಶೋಷಣೆಯಿಂದ ಹಾಗೂ ಜಾತಿ ದಮನದಿಂದ ಮುಕ್ತಗೊಳಿಸಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದಸ್ವಾಮಿ ಕರೆ ನೀಡಿದರು.



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಯಾದಗೀರ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವನ್ನು ಕನ್ನಡ ಸಾಹಿತ್ಯ ಪರಿಷತ್ ಕಾರ್ಯಾಲಯದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸಮಾಜ ಒಂದು ಮಾನವ ಸಮಾಜ ಹೌದು. ಆದರೆ ಅದೊಂದು ಮಾನವೀಯ ಸಮಾಜ ಅಲ್ಲ. ನಮ್ಮ ಸಮಾಜ ಕಾರ್ಮಿಕರ ಶೋಷಣೆಯ, ದಲಿತರ ದಮನ, ಮಹಿಳೆಯರ ಮೇಲಿನ ಅತ್ಯಾಚಾರ, ಅಲ್ಪ ಸಂಖ್ಯಾತರ ವಿರುದ್ಧ ದ್ವೇಷ ಸಾಧಿಸುವುದು ಮೊದಲಾದ ಅನಿಷ್ಠಗಳಿಂದ ರೋಗಗ್ರಸ್ಥವಾಗಿದೆ. ಈ ಅನಿಷ್ಠಗಳನ್ನು ತೊಲಗಿಸದೆ ಈ ದೇಶ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ವೈಖರಿಯನ್ನು ತೀವ್ರವಾಗಿ ಟೀಕಿಸಿದ ಅವರು ರಾಜ್ಯದ ನೆರೆ ಸಂತ್ರಸ್ತರಿಗೆ ಕನಿಷ್ಠ ಪರಿಹಾರ ಕೊಟ್ಟು ಅವರಿಗೆ ಪುನರ್ವಸತಿ ಕಲ್ಪಿಸಲು ಮೋದಿಯವರು ವಿಫಲರಾಗಿದ್ದಾರೆ ಎಂದರು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹೋರಾಟವನ್ನು ಮುಂದುವರೆಸಲಿದೆ ಎಂದು ಹೇಳಿದರು.

ಯೋಜನೆಯ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ನೀಡಬೇಕಾದ ಅನುದಾನವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು. ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷರಾದ ದಾವಲಸಾಬ ನದಾಫ್ ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಸವಿತಾ ಪೂಜಾರಿ ಎಲ್ಲರನ್ನು ಸ್ವಾಗತಿಸಿದರು ಕೊನೆಯಲ್ಲಿ ಬಸವರಾಜ ಕಟ್ಟಿಮನಿ ಎಲ್ಲರನ್ನು ವಂದಿಸಿದರು. ಈ ಸಂದರ್ಭದಲ್ಲಿ ಶರಣಪ್ಪ ವಕೀಲರು, ಕಾಳಪ್ಪ ಮಾರೆಪ್ಪ, ಚಂದ್ರರೆಡ್ಡಿ, ರಂಗಮ್ಮ, ಖಾಜಾಸಾಬ ಬೋನಾಳ, ಇತರರು ಇದ್ದರು. ಶಿಬಿರದಲ್ಲಿ ಸುಮಾರು 50 ಮಂದಿ ಗ್ರಾಮೀಣ ಯುವ ಕಾರ್ಯಕರ್ತರು ಭಾಗವಹಿಸಿದ್ದರು. ಅವರಿಗೆ ಗ್ರಾಮೀಣ ಬಡವರನ್ನು ಸಂಘಟಿಸುವುದು ಹೇಗೆ ಮತ್ತು ಯಾಕೆ ಮುಂತಾದ ವಿಷಯಗಳ ಬಗ್ಗೆ ಇಡೀ ದಿನ ತರಬೇತಿ ನೀಡಲಾಯಿತು.

– ದಾವಲಸಾಬ ನದಾಫ

ಕೃಷಿ ಕೂಲಿಕಾರರ ಸಂಘದ ಗ್ರಾಮ ಘಟಕ ಸಮ್ಮೇಳನಗಳು

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಖಿಲ ಭಾರತ ಸಮ್ಮೇಳನವನ್ನು 2019 ಡಿಸೆಂಬರ್ 28 ರಿಂದ 30 ರ ವರೆಗೆ ಕೇರಳದ ಕಣ್ಣೂರ್‌ನಲ್ಲಿ ನಡೆಸಲು ಇತ್ತೀಚಿಗೆ ವಿಜಯವಾಡದಲ್ಲಿ ಜರುಗಿದ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆ ನರ್ಧರಿಸಿದೆ. ಇದರ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನಗಳು ಮತ್ತು ಕೆಳ ಹಂತದ ಸಮಿತಿಗಳ ಸಮ್ಮೇಳನಗಳು ನಡೆಯಲಿವೆ. ದೇಶಾದ್ಯಂತ ಭರದ ಸಿದ್ಧತೆಗಳು ನಡೆಯುತ್ತಿವೆ.

ಕರ್ನಾಟಕ ರಾಜ್ಯ ಸಮಿತಿಯು ಇತ್ತೀಚಿಗೆ ಸಭೆ ಸೇರಿ ರಾಜ್ಯ ಸಮ್ಮೇಳನವನ್ನು ಡಿಸೆಂಬರ್ 13 ರಿಂದ 15 ರ ವರೆಗೆ ಕಲ್ಬುರ್ಗಿಯಲ್ಲಿ ನಡೆಸಲು ನಿರ್ಧರಿಸಿದೆ. ಅದರ ಪೂರ್ವ ಭಾವಿಯಾಗಿ ಗ್ರಾಮ ಘಟಕಗಳ ಸಮ್ಮೇಳನಗಳಿಂದ ಆರಂಭಿಸಿ ವಲಯ, ತಾಲ್ಲೂಕ್, ಜಿಲ್ಲಾ ಸಮ್ಮೇಳನಗಳನ್ನು ನಡೆಸಲು ನಿರ್ಧರಿಸಿದೆ.

ಗ್ರಾಮ ಘಟಕಗಳ ಸಮ್ಮೇಳನಗಳು ಈಗಾಗಲೇ ಆರಂಭವಾಗಿದ್ದು ಇತ್ತೀಚೆಗೆ ರಾಯಚೂರು ತಾಲ್ಲೂಕಿನ ಉಂಡ್ರಾಲ ದೊಡ್ಡಿ ಮತ್ತು ಬಾಪೂರು ಗ್ರಾಮ ಘಟಕಗಳ ಸಮ್ಮೇಳನಗಳನ್ನು ಆಯಾ ಗ್ರಾಮಗಳಲ್ಲಿ ನಡೆಸಲಾಯಿತು. ಆಂಧ್ರ ಪ್ರದೇಶದ ಗಡಿಯಲ್ಲಿರುವ ಈ ಕೆಲವು ಹಳ್ಳಿಗಳು ನಿರಂತರ ಬರಗಾಲಕ್ಕೆ ತುತ್ತಾಗುತ್ತಿದ್ದು ಗ್ರಾಮೀಣ ಬಡವರು ಹೊಟ್ಟೆ ಪಾಡಿಗಾಗಿ ವಲಸೆ ಹೋಗುತ್ತಿರುತ್ತಾರೆ. ಇತ್ತೀಚಿಗೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಪಡೆಯಲು ಮುಂದಾಗಿದ್ದಾರೆ. ಕೃಷಿ ಕೂಲಿಕಾರರ ಸಂಘದ ಮಾರ್ಗದರ್ಶನದಲ್ಲಿ ಹೋರಾಟಗಳನ್ನು ಮಾಡುತ್ತಿರುತ್ತಾರೆ. ಈ ನಡುವೆ, ಮರಗಳೇ ಇಲ್ಲದ ಅರಣ್ಯ ಭೂಮಿಯಲ್ಲಿ ಮಳೆಯಾದಾಗ ಅನಧಿಕೃತ ಸಾಗುವಳಿ ಮಾಡಿಕೊಂಡು ಅಪರೂಪದ ಆದಾಯ ಪಡೆಯುತ್ತಾರೆ. ಅರಣ್ಯ ಸಿಬ್ಬಂದಿಗಳ ನಿರಂತರ ಕಿರುಕುಳ ಹಾಗೂ ಕೋರ್ಟ ಕೇಸುಗಳನ್ನು ಎದುರಿಸಿ ಭೂಮಿಯನ್ನು ಉಳಿಸಿಕೊಂಡಿದ್ದಾರೆ. ಮನೆ ನಿವೇಶನಗಳಿಗಾಗಿ, ಹಾಗೂ ಅರಣ್ಯ ಭೂಮಿ ಹಕ್ಕಿಗಾಗಿ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದ್ದಾರೆ.

ಎರಡೂ ಗ್ರಾಮ ಘಟಕಗಳಿಗೆ ನೂತನ ಸಮಿತಿಗಳನ್ನು ಆಯ್ಕೆಮಾಡಿದ್ದು ಉಂಡ್ರಾಲದೊಡ್ಡಿ ಗ್ರಾಮ ಘಟಕಕ್ಕೆ ರವಿಕುಮಾರ್ ಅಧ್ಯಕ್ಷರಾಗಿಯೂ ಸುದರ್ಶನ ಸಮಿತಿಯ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದಾರೆ. ಹಿರಿಯ ಹೋರಾಟಗಾರ ಮುದ್ದಪ್ಪರವರು ಉಂಡ್ರಾಲದೊಡ್ಡಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಬಾಪೂರು ಗ್ರಾಮ ಸಮ್ಮೇಳನದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಸತ್ಯಪ್ಪನವರು ವಹಿಸಿದ್ದರು. ಅವರೇ ಹೊಸ ಸಮಿತಿಯ ಅಧ್ಯಕ್ಷರಾಗಿ ಪುನರಾಯ್ಕೆಯಾದರು. ಈರಪ್ಪ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಎರಡೂ ಗ್ರಾಮ ಸಮ್ಮೇಳನಗಳನ್ನು ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಮ್ರೆಡ್ ನಿತ್ಯಾನಂದಸ್ವಾಮಿ ಉದ್ಘಾಟಿಸಿದರು. ಜಿಲ್ಲಾ ಅಧ್ಯಕ್ಷರಾದ ಕಾಮ್ರೆಡ್ ಕರಿಯಪ್ಪ ಅಚ್ಚೊಳ್ಳಿಯವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು. ಅಕ್ಟೋಬರ್ ತಿಂಗಳಲ್ಲಿ, ಕೇಂದ್ರ ಕಾರ್ಯಕಾರಿ ಸಮಿತಿಯ ಕರೆಗೆ ಅನುಗುಣವಾಗಿ ಸ್ಥಳೀಯ ಪ್ರಶ್ನೆಗಳಿಗಾಗಿ ಪ್ರಚಾರಾಂದೋಲನ ನಡೆಸಿ ಅಕ್ಟೋಬರ್ 23 ರಂದು ತಾಲ್ಲೂಕಾ ಕೇಂದ್ರಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲು ತೀರ್ಮಾನಿಸಲಾಯಿತು.

–ಕರಿಯಪ್ಪ ಅಚ್ಚೊಳ್ಳಿ

ಸ್ಫೂರ್ತಿ ಹುಟ್ಟಿಸಿದ ಮಂಗಳೂರು ನಗರ ಯುವಜನ ಸಮ್ಮೇಳನ

ವರದಿ: ವಾ.ಉ.

ದೇಶದ ಯುವಕರನ್ನು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಆಕರ್ಷಿಸಿ ಮರುಳುಗೊಳಿಸುವುದರ ಮೂಲಕ, ಕೇಂದ್ರದಲ್ಲಿ ಆಳುವ ಬಿಜೆಪಿ ಪಕ್ಷವು ಅವರನ್ನು ಬಾಧಿಸುತ್ತಿರುವ ನಿರುದ್ಯೋಗ ಹಾಗೂ ಕಡಿಮೆ ವೇತನವೇ ಮೊದಲಾದ ತುರ್ತಿನ ವಿಷಯಗಳ ಕಡೆಗೆ ಅವರು ಗಮನಕೊಡದಂತೆ ಮಾಡಲಾಗುತ್ತಿದೆ ಎಂಬುದಾಗಿ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ನುಡಿದರು. ಅವರು ಮಂಗಳೂರು ಪುರಭವನದಲ್ಲಿ ಸಪ್ಟೆಂಬರ್ 22 ರಂದು ನಡೆದ ಡಿವೈಎಫ್ಐ 12ನೇ ಮಂಗಳೂರು ನಗರ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.



ದಕ್ಷಿಣ ಕನ್ನಡದ ಯುವಜನ ಹಿಂದೆ ಉದ್ಯೋಗಾರ್ಥವಾಗಿ ಮುಂಬಯಿ, ಬೆಂಗಳೂರುಗಳಿಗೆ ಹೋಗುತ್ತಿದ್ದರು. ಈಗ ಅಲ್ಲೂ ಅವರಿಗೆ ಉದ್ಯೋಗ ಸಿಗುತ್ತಿಲ್ಲ. ಜಿಲ್ಲೆಯಲ್ಲಿ ಅನೇಕ ಉದ್ದಿಮೆಗಳು ಬಂದಿವೆ, ಕೆಲವು ಕುಟುಂಬಗಳು ಅವಕ್ಕೆ ತಮ್ಮ ಜಮೀನನ್ನು ಕಡಿಮೆ ದರಕ್ಕೆ ಮಾರಾಟ ಮಾಡಿದ್ದಾರೆ. ಆದಾಗ್ಯೂ ದಕ್ಷಿಣ ಕನ್ನಡದ ಯುವಜನರಿಗಾಗಲೀ, ಭೂಮಿ ಕಳಕೊಂಡ ಕುಟುಂಬದ ೦ು'ುು ವ' ಜ ನ' ರಿ ಗಾ ಗ' ಲೀ ಉದ್ಯೋಗಗಳನ್ನು ನೀಡುವಲ್ಲಿ ಉದ್ದಿಮೆಗಳು ಮುಂದಾಗುತ್ತಿಲ್ಲ. ಅಲ್ಲದೆ ಹಿಂದೆ ಕೊಲ್ಲಿ ದೇಶಗಳಿಗೆ ಯುವಜನರು ಉದ್ಯೋಗ ಹುಡುಕಿಕೊಂಡು ಹೋಗುತ್ತಿದ್ದರು, ಈಗ ಅಲ್ಲಿಂದಲೂ ಭಾರತೀಯರನ್ನು ಹಿಂದಕ್ಕಟ್ಟಲಾಗುತ್ತಿದೆ ಎಂದು ಮುನೀರ್ ಕಾಟಿಪಳ್ಳ ತಿಳಿಸಿದರು. ನಿರುದ್ಯೋಗದ ಪ್ರಶ್ನೆಯಲ್ಲಿ ಕೇಂದ್ರದ ಎನ್‌ಡಿಎ ಸರಕಾರವು ಅವರ ಬೇಡಿಕೆಗಳನ್ನು ಪೂರೈಸುವ ಬದಲು, ರಾಷ್ಟ್ರೀಯತೆ, ಜಾತೀಯತೆ ಮತೀಯತೆಯ ಬಣ್ಣದ ಮಾತುಗಳನ್ನಾಡುತ್ತಾ, ಬಡಕುಟುಂಬದ ಜನರು ಮತಿಭ್ರಾಂತರಾಗಿ ಅಪರಾಧ ಕೃತ್ಯಕ್ಕೆ ಇಳಿದು ಜೈಲು ಸೇರುವಂತಾಗಿದೆ ಎಂದು ಅವರು ಟೀಕಿಸಿದರು. ಯುವಜನರ ಹಾದಿ ತಪ್ಪಿಸುವ ಕೋಮುವಾದದ ವಿರುದ್ಧ ಡಿವೈಎಫ್ಐ ದೃಢವಾಗಿ ಹೋರಾಡುತ್ತಿದೆ ಎಂದವರು ಎಚ್ಚರಿಸಿದರು.



ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಕುಮಾರ್ ಅವರು ಮಾತನಾಡುತ್ತಾ, ಬಿಜೆಪಿಯ ಅಪ್ರಜಾಸತ್ತಾತ್ಮಕ ಹಾಗೂ ಅಸಂವಿಧಾನಿಕ ನಡೆಗಳನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಕಾಂಗ್ರೆಸ್ಸು ವಿಫಲವಾಗಿದೆ. ಸಮಾಜವನ್ನು ಕೋಮುವಾದಿ ನೆಲೆಯಲ್ಲಿ ಆಳುವ ಸರಕಾರಗಳು ಧ್ರುವೀಕರಿಸುತ್ತಿದ್ದು, ಕಾಂಗ್ರೆಸ್ಸು ಕೇವಲ ಮೂಕ ಪ್ರೇಕ್ಷಕನಾಗಿ ನೋಡುತ್ತಿದೆ. ಇಂಥದನ್ನು ಪ್ರಶ್ನಿಸುವ ತನ್ನಂಥ ವ್ಯಕ್ತಿಗಳನ್ನು ದಾಳಿಯ ಗುರಿಗಳಾಗಿ ಮಾಡಲಾಗುತ್ತಿದೆ. ದೇಶದ ಮೇಲೆ ಎರಗುತ್ತಿರುವ ಸಾರ್ವಭೌಮ ಆಳ್ವಿಕೆಯ ವಿರುದ್ಧ ಜನತೆಯನ್ನು ಎಚ್ಚರಗೊಳಿಸುವ ಅಭಿಯಾನವೊಂದರ ಭಾಗವಾಗಿ ತಾನು ಈ ವಿಮರ್ಶೆಯನ್ನು ಮಾಡುತ್ತಿದ್ದೇನೆ ಎಂಬುದಾಗಿ ಮಹೇಂದ್ರ ಕುಮಾರ್ ನುಡಿದರು.

ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿವೈಎಫ್ಐ ಮಂಗಳೂರು ನಗರಾಧ್ಯಕ್ಷ ನವೀನ್ ಕೊಂಚಾಡಿ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಕೋಶಾಧಿಕಾರಿ ಮನೋಜ್ ವಾಮಂಜೂರು, ಮುಖಂಡರಾದ ಜೀವನ್‌ರಾಜ್ ಕುತ್ತಾರ್, ಎಸ್‌ಎಫ್ಐ ಜಿಲ್ಲಾಧ್ಯಕ್ಷೆ ಮಾಧುರಿ ಬೋಳಾರ್ ಸಭೆಯಲ್ಲಿ ಉಪಸ್ಥಿತರಿದ್ದರು. ಶ್ರೀನಾಥ್ ಕಾಟಿಪಳ್ಳ ಕಾರ್ಯಕ್ರಮ ನಿರೂಪಿಸಿದರು. ಚರಣ್ ಪಂಜಿಮೊಗರು ವಂದಿಸಿದರು.

ನಗರ ಕೇಂದ್ರದ ಪುರಭವನದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ 400ಕ್ಕೂ ಮೀರಿ ಸಾರ್ವಜನಿಕರು ಭಾಗವಹಿಸಿದ್ದು, ಡಿವೈಎಫ್ಐ ಕಾರ್ಯಕರ್ತರಿಗೆ ಸ್ಫೂರ್ತಿ ಹೆಚ್ಚಿಸುವಂತಿತ್ತು.

ಮರಳುಗಾರಿಕೆ ಪ್ರಾರಂಭಿಸಲು ಆಗ್ರಹಿಸಿ ಉಡುಪಿಯಲ್ಲಿ ಕಟ್ಟಡ ಕಾರ್ಮಿಕರ ಧರಣಿ:



ಕಳೆದ ಎರಡು ವರ್ಷಗಳಿಂದ ಹೆಚ್ಚುಕಡಿಮೆ ನಿಂತೇ ಹೋಗಿರುವ ಮರಳುಗಾರಿಕೆಯನ್ನು ಪುನರಾರಂಭಿಸುವಂತೆ ಒತ್ತಾಯಿಸಿ ಉಡುಪಿ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘಟನೆ ನೇತೃತ್ವದಲ್ಲಿ ಉಡುಪಿಯ ಜಿಲ್ಲಾಧಿಕಾರಿ ಕಚೇರಿಯ ಎದುರು ಸಪ್ಟೆಂಬರ್ 23 ರಂದು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಆರಂಭಿಸಲಾಯಿತು. ಮರಳುಗಾರಿಕೆ ಪ್ರಾರಂಭಗೊಂಡು ಕಾರ್ಮಿಕರು ಮರಳು ತೆಗೆಯಲು ನದಿಗೆ ಇಳಿಯುವವರೆಗೆ ತಮ್ಮೀ ಧರಣಿ ಮುಂದುವರಿಯಲಿದೆ ಎಂದು ಸಹಭಾಗಿ ಸಂಘಟನೆಗಳ ಪ್ರಮುಖರು ತಿಳಿಸಿದ್ದಾರೆ.

ಸಿಡಬ್ಲ್ಯೂಎಫ್ಐನ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಮಾತನಾಡಿ, ಕಳೆದ 2 ವರ್ಷಗಳಿಂದ ವಿವಿಧ ಕಟ್ಟಡ ಕಾರ್ಮಿಕರು ಪ್ರತಿದಿನ ಕೆಲಸವಿಲ್ಲದೆ ಜೀವನ ಸಾಗಿಸಲು ಒದ್ದಾಡುತ್ತಿದ್ದಾರೆ. ಕಟ್ಟಡ ಕಾರ್ಮಿಕರಿಗೆ ವಿವಿಧ ಸವಲತ್ತು ಸಿಗಬೇಕಿದ್ದರೆ, ಅವರು ಕನಿಷ್ಠ 90 ದಿನ ಕೆಲಸ ಮಾಡಬೇಕು. ಅಷ್ಟೂ ಕೆಲಸ ಸಿಗದ ಪರಿಸ್ಥಿತಿ ಉಂಟಾಗಿದೆ. ಕಟ್ಟಡ ಕಾಮಗಾರಿ ಸತತವಾಗಿ ನಡೆಯುತ್ತಿರಲು ಮರಳುಗಾರಿಕೆ ನಡೆಯುತ್ತಿರಬೇಕು. ಆದುದರಿಂದ ಜಿಲ್ಲಾಡಳಿತ ಮರಳುಗಾರಿಕೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಧರಣಿಯಲ್ಲಿ ಉಡುಪಿ ಜಿಲ್ಲಾ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಮನ್ವಯ ಸಮಿತಿಯ ಸಂಚಾಲಕರಾದ ಸುರೇಶ್ ಕಲ್ಲಾಗರ ಹಾಗೂ ಶೇಖರ ಬಂಗೇರ ಅಲ್ಲದೆ ಕಾರ್ಮಿಕ ಮುಖಂಡರಾದ ವೆಂಕಟೇಶ ಕೋಣಿ, ಎಚ್.ನರಸಿಂಹ, ದಾಸು ಭಂಡಾರಿ, ವಿಠಲ ಪೂಜಾರಿ, ರಾಜೀವ ಪಡುಕೋಣೆ, ಎಚ್.ನರಸಿಂಹ, ಜಗದೀಶ್ ಆಚಾರ್, ನಾಗರತ್ನ ನಾಡ, ಶಾರದಾ, ಸುಭಾಸ್ ನಾಯಕ್, ಗಣೇಶ್ ನಾಯಕ್ ಭಾಗವಹಿಸಿದ್ದರು.

ಪೆನ್ಸಿಲ್ ತಯಾರಿಕಾ ಉದ್ಯಮದ ಹೆಸರಲ್ಲಿ ವಂಚನೆ ವಿರುದ್ಧ ಮಂಗಳೂರಿನಲ್ಲಿ ಪ್ರತಿಭಟನೆ:

ಪೆನ್ಸಿಲ್ ಕಲರಿಂಗ್ ಉದ್ಯಮದ ಹೆಸರಲ್ಲಿ ವಂಚನೆ ಮಾಡಿದವರನ್ನು ಬಂಧಿಸಿ, ವಂಚನೆಗೊಳಗಾದವರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸಪ್ಟೆಂಬರ್ 23 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಪುತ್ತೂರಿನ ಕಬಕದಲ್ಲಿ ಆರಂಭಿಸಲಾಗಿದ್ದ 'ಬದ್ರಿನಾಥ್ ಎಂಟರ್‌ಪ್ರೈಸಸ್' ಎಂಬ ಕಂಪೆನಿಯು ಜಿಲ್ಲೆಯ ನೂರಾರು ಅಮಾಯಕ ನಿರುದ್ಯೋಗಿಗಳಿಂದ ಪೆನ್ಸಿಲ್ ಕಲರಿಂಗ್ ಮಾಡುವ ಸ್ವ ಉದ್ಯೋಗದಿಂದ ತಿಂಗಳಿಗೆ ರೂ.20,000 ದಷ್ಟು ಆದಾಯಗಳಿಸಬಹುದು ಎಂದು ನಂಬಿಸಿ, ಪ್ರತಿಯೊಬ್ಬರಿಂದ ತಲಾ ರೂ.80,000 ವನ್ನು ಪಡೆದು ವಂಚಿಸಲಾಗಿದೆ. ವಂಚಕ ಸಂಸ್ಥೆಯ ಮನುಚಂದ್ರ ಹಾಗೂ ಆತನ ಸಹವರ್ತಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಮಾತನಾಡಿದರು. ಕೋಶಾಧಿಕಾರಿ ಮನೋಜ್ ವಾಮಂಜೂರು ಸ್ವಾಗತಿಸಿದರು. ಸಹಕಾರ್ಯದರ್ಶಿ ರಫೀಕ್ ಹರೇಕಳ ವಂದಿಸಿದರು.

ಮೋಟಾರು ವಾಹನ ತಿದ್ದುಪಡಿ ಕಾಯ್ದೆ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟನೆ:




ಕೇಂದ್ರ ಸರಕಾರ ಜಾರಿಗೆ ತಂದಿರುವ ಮೋಟಾರು ವಾಹನ ತಿದ್ದುಪಡಿ ಕಾಯಿದೆ ಜಾರಿಯಾದಲಾಗಿ, ವಾಹನ ಚಾಲಕರು ಮಾಡದ ತಪ್ಪಿಗೆ ಜೈಲು ಶಿಕ್ಷೆ ಅನುಭವಿಸುವ ಪಿರಿಸ್ಥಿತಿ ಉಂಟಾಗಿದ್ದು, ಅವರು ಮಾನಸಿಕ ಕಿರುಕುಳಕ್ಕೆ ಈಡಾಗುತ್ತಿದ್ದಾರೆ. ಸಣ್ಣ ತಪ್ಪಿಗೂ ದುಬಾರಿ ದಂಡವನ್ನು ಚಾಲಕರು, ಸಾಮಾನ್ಯ ನಾಗರಿಕರೂ ಪಾವತಿಸಬೇಕಾದ ಸನ್ನಿವೇಶಗಳು ಉಂಟಾಗಿವೆ. ರಾಷ್ಟ್ರೀಯ ಹೆದ್ದಾರಿ ಹಾಗೂ ಇತರ ರಸ್ತೆಗಳು ನಾದುರಸ್ತಿಯಲ್ಲಿದ್ದು, ವಾಹನ ಚಾಲಕರು ಅಪಘಾತ ತಪ್ಪಿಸಲು ರಸ್ತೆ ಸುರಕ್ಷತಾ ನಿಯಮವನ್ನು ಉಲ್ಲಂಘಿಸುವ ಪ್ರಸಂಗ ಬರುತ್ತಿದೆ. ಚಾಲಕರಿಂದ ಕನಿಷ್ಟ ರೂ. 1 ಲಕ್ಷದವರೆಗೂ ದಂಡ ವಿಧಿಸಿರುವ ಘಟನೆಗಳು ದೇಶಾದ್ಯಂತ ನಡೆದಿವೆ.

ದ.ಕ.ಜಿಲ್ಲೆಯ ಸಮಾನಮನಸ್ಕ ಚಾಲಕರು ಹಾಗೂ ಸಾರ್ವಜನಿಕ ಸಂಘಟನೆಗಳು ಒಟ್ಟಾಗಿ ಮೋಟಾರು ವಾಹನ ತಿದ್ದುಪಡಿ ಕಾಯಿದೆ ವಿರೋಧಿ ಹೋರಾಟ ಸಮಿತಿ ಮಂಗಳೂರು ನೇತೃತ್ವದಲ್ಲಿ ಸಪ್ಟೆಂಬರ್ 25 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು. ನೂತನ ಕಾಯಿದೆ ಮೂಲಕ ವಸೂಲಿ ಮಾಡುವ ದಂಡ ಹಾಗೂ ಶಿಕ್ಷಾಕ್ರಮಗಳನ್ನು ವಿರೋಧಿಸಿ, ರಾಷ್ಟ್ರೀಯ ಹೆದ್ದಾರಿ ಹಾಗೂ ಪ್ರಮುಖ ರಸ್ತೆಗಳ ಅವ್ಯವಸ್ಥೆಯನ್ನು ವಿರೋಧಿಸಿ ಸುರತ್ಕಲ್ ಟೋಲ್‌ಗೇಟ್ ಅಕ್ರಮವಾಗಿದ್ದು ಅದನ್ನು ಮುಚ್ಚಲು ಆಗ್ರಹಿಸಿ ಹಾಗೂ ಪಾರ್ಕಿಂಗ್ ಮತ್ತು ಟೋಯಿಂಗ್ ಹೆಸರಲ್ಲಿ ಮಾಡುವ ದರೋಡೆಯನ್ನು ನಿಲ್ಲಿಸಬೇಕೆಂದು ಈ ಪ್ರತಿಭಟನಾ ಪ್ರದರ್ಶನದಲ್ಲಿ ಒತ್ತಾಯಿಸಲಾಯಿತು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಹೋರಾಟ ಸಮಿತಿಯ ಪ್ರಧಾನ ಸಂಚಾಲಕ ಸುನಿಲ್ ಕುಮಾರ್ ಬಜಾಲ್, ದ.ಕ.ಜಿಲ್ಲಾ ಆನ್‌ಲೈನ್ ಚಾಲಕರ ಸಂಘದ ಗೌರವಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ.ಜಿಲ್ಲಾ ಟ್ಯಾಕ್ಸಿಮೆನ್ ಅಸೋಸಿಯೇಶನ್ ಜಿಲ್ಲಾಧ್ಯಕ್ಷ ದಿನೇಶ್ ಕುಂಪಲ, ಕಾರ್ಮಿಕ ಪರಿಷತ್‌ನ ಜಿಲ್ಲಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಮಾತನಾಡಿದರು. ಐಎನ್‌ಟಿಯುಸಿ ಮುಖಂಡ ಚಿತ್ತರಂಜನ್ ಶೆಟ್ಟಿ, ಎಐಟಿಯುಸಿಯ ಎಚ್.ವಿ.ರಾವ್, ವಿ.ಕುಕ್ಯಾನ್ ಸಿಐಟಿಯು ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು ಪದ್ಮಾವತಿ ಶೆಟ್ಟಿ, ಜಯಂತಿ ಶೆಟ್ಟಿ, ಜಯಂತ ನಾಯ್ಕ್ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





ಕಾಮ್ರೇಡ್ ಕೆ.ಎಂ. ಶ್ರೀನಿವಾಸ್ ನಿಧನ

ಶಿವಮೊಗ್ಗ ಜಿಲ್ಲೆಯ ಹಿರಿಯ ಕಮ್ಯುನಿಸ್ಟ್ ನಾಯಕ 'ಕಾಮ್ರೇಡ್ ಕೆ.ಎಂ. ಶ್ರೀನಿವಾಸ್' ಸೆಪ್ಟಂಬರ್ 24 ರಂದು ಬೆಳಿಗ್ಗೆ ನಿಧನರಾದರು. ಅವರಿಗೆ 90 ವರ್ಷವಾಗಿತ್ತು.

ಮುದ್ದಣ್ಣಗೌಡ ಮತ್ತು ರುಕ್ಮಿಣಿಯಮ್ಮ ದಂಪತಿಗಳ ಮಗನಾಗಿದ್ದ ಇವರು ತೀರ್ಥಹಳ್ಳಿ ತಾಲ್ಲೂಕಿನ ಆರಗ ಬಳಿಯ ಕಾಳಮ್ಮನಗುಡಿಯವರು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಟರ್ ಮೀಡಿಯೆಟ್, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ.ಪತ್ರಿಕೋದ್ಯಮ, ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಗಳಿಸಿದ್ದರು. ಖಾಸಗಿ ಪ್ರಾಕ್ಟೀಸನ್ನು ಒಂದು ವರ್ಷಕ್ಕೇ ನಿಲ್ಲಿಸಿ ಊರಿಗೆ ತೆರಳಿದ ಇವರು ಕರ್ನಾಟಕ ಪ್ರಾಂತ ರೈತ ಸಂಘದ ಜವಾಬ್ದಾರಿಯನ್ನು ವಹಿಸಿಕೊಂಡರು. ಜೊತೆಗೆ ಕಮ್ಯುನಿಸ್ಟ್ ಪಕ್ಷ ಕಟ್ಟಲು ತೊಡಗಿದರು. ಇವರಿಗೆ ಶಾಂತವೇರಿ ಗೋಪಾಲಗೌಡರ ಒಡನಾಟ ಇತ್ತು.

ಬಾಲ್ಯದಲ್ಲಿಯೇ ಇವರು 1942 ರ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿದ್ದರು. 1947 ರಲ್ಲಿ 'ಮೈಸೂರು ಚಲೋ' ಬೆಂಬಲಿಸಿ ಹೋರಾಟವನ್ನು ನಡೆಸಿದ್ದರು. ತೀರ್ಥಹಳ್ಳಿಯಲ್ಲಿ ನಡೆದ ಗೇಣಿದಾರರ ಹೋರಾಟಕ್ಕೆ ಶ್ರೀನಿವಾಸ್, ಅಪ್ಪಣ್ಣ ಹೆಗಡೆ, ಜಿ.ಎಸ್.ನಾಗರಾಜ್ ತ್ರಿವಳಿಗಳ ಕೊಡುಗೆ ಅಪಾರವಾದುದು. ಇವರ ಹೋರಾಟಗಳು ಜಮೀನ್ದಾರರ ಎದೆಯಲ್ಲಿ ನಡುಕ ಹುಟ್ಟಿಸುತ್ತಿದ್ದವು. ಹಾಗೆ ನೋಡಿದರೆ ಪ್ರಾಯೋಗಿಕ ನೆಲೆಯಲ್ಲಿ (ಪ್ರಚಾರ ಕಡಿಮೆ) ಕಾಗೋಡು ಸತ್ಯಾಗ್ರಹಕ್ಕಿಂತ ಹೆಚ್ಚಿನ ರೀತಿಯಲ್ಲಿ ಗೇಣಿ ರೈತರಿಗೆ ಪ್ರಯೋಜನವಾದ ಹೋರಾಟವನ್ನು ಇವರು ನಡೆಸಿದರು.

1967 ರ ಚುನಾವಣೆಯಲ್ಲಿ ಶಾಂತವೇರಿ ಗೋಪಾಲಗೌಡರನ್ನು ಸಿಪಿಐ(ಎಂ)ನಿಂದ ಬೆಂಬಲಿಸಿ ಅವರನ್ನು ಗೆಲ್ಲಿಸುವಲ್ಲಿ ಸಕ್ರಿಯವಾಗಿ ದುಡಿದರು. 1972 ರಲ್ಲಿ ಸಿಪಿಐ(ಎಂ) ಅಭ್ಯರ್ಥಿ ಅಪ್ಪಣ್ಣ ಹೆಗಡೆಯವರನ್ನು ಗೆಲ್ಲಿಸಲು ಅಪಾರ ಶ್ರಮವನ್ನು ಹಾಕಿದರು. ಅಪ್ಪಣ್ಣ ಹೆಗಡೆ ಗೆದ್ದೇ ಬಿಡುತ್ತಾರೆ ಎಂಬ ಅಭಿಪ್ರಾಯ ರೂಪುಗೊಂಡಿತ್ತು. ಆದರೆ ಗೆಲ್ಲಲಿಲ್ಲ. 1977 ರಲ್ಲಿ ಶ್ರೀನಿವಾಸ್ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತರು. 1978 ರಿಂದ 1985 ರವರೆಗೂ ವರಾಹಿ ಯೋಜನೆಯ ಸಂತ್ರಸ್ತರ ಪರವಾಗಿ ನಡೆಸಿದ ಯಶಸ್ವಿ ಹೋರಾಟ ಇವರು ನಾಯಕತ್ವ ಕೊಟ್ಟ ಹೋರಾಟಗಳಲ್ಲಿ ಗಮನಾರ್ಹವಾದದ್ದು.

ಅವಿಭಜಿತ ಸಿಪಿಐ ನ್ನು ಪ್ರತಿನಿಧಿಸಿ ಇವರು ವಿಜಯವಾಡದಲ್ಲಿ ನಡೆದ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಕಮ್ಯುನಿಸ್ಟ್ ಪಕ್ಷ ವಿಭಜನೆಯಾದಾಗ ಇವರು ಸಿಪಿಐ(ಎಂ)ನಲ್ಲಿ ಸೇರಿ ಪಕ್ಷವನ್ನು ಕಟ್ಟಲು ಶ್ರಮಿಸಿದರು.

ಕಾಮ್ರೆಡ್ ಶ್ರೀನಿವಾಸ್ ಅವರಿಗೆ ಶಾಂತವೇರಿ ಗೋಪಾಲಗೌಡ, ಉಡುಪಿ ಮಂಜಪ್ಪ, ಚಂದು ಕುಟ್ಟಿ, ಅಪ್ಪಣ್ಣ ಹೆಗಡೆ, ವಾಮನ ಭಟ್, ಸಿ.ಕೆ. ಜನಾರ್ಧನ್ ನಾಯಕ್, ಜಿ.ಎಸ್. ನಾಗರಾಜ್, ಯಡಗುಡ್ಡೆ ರಾಘವೇಂದ್ರ, ಜಾವಗಲ್ ವಿಜಯ್ ಕುಮಾರ್ ಮುಂತಾದವರು ಒಡನಾಡಿಗಳಾಗಿದ್ದರು.

ನಿರಂತರವಾಗಿ ಅಧ್ಯಯನ ಮಾಡುತ್ತಿದ್ದ ಕಾಮ್ರೇಡ್ ಶ್ರೀನಿವಾಸ್ ಅವರು ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ಅವರ ಬರಹಗಳನ್ನು ಅಪಾರವಾಗಿ ಓದಿಕೊಂಡಿದ್ದರು.

ಅವರು ಅನಾರೋಗ್ಯ ಪೀಡಿತರಾಗಿ ಮನೆಯಲ್ಲಿದ್ದಾಗ ನನ್ನ ಸಂಶೋಧನೆಯ ಸಲುವಾಗಿ ನಾನು, ಸಮುದಾಯದ ರಾಜ್ಯ ಕಾರ್ಯದರ್ಶಿ ಟಿ.ಸುರೇಂದ್ರರಾವ್ ಮತ್ತು ಶಿವಮೊಗ್ಗದ ಸಮುದಾಯ ಸಂಚಾಲಕರಾದ ಕೆ. ಪ್ರಭಾಕರನ್ ಸೇರಿ ಸಂದರ್ಶನ ಮಾಡಿದಾಗ ಅವರ ಹೋರಾಟದ ನೆನಪುಗಳು, ಅಂದಿನ ರಾಜಕೀಯ ಪಲ್ಲಟಗಳ ಒಂದು ಹೊಳಹು ಸಿಕ್ಕಿತ್ತು.

ಜನರಿಗಾಗಿ, ಕಮ್ಯುನಿಸ್ಟ್ ಪಕ್ಷಕ್ಕಾಗಿ ತಮ್ಮ ಜೀವನವನ್ನು ಧಾರೆ ಎರೆದ ಸಂಗಾತಿ ಶ್ರೀನಿವಾಸ್ ಒಬ್ಬ ಸರಳ, ಸಜ್ಜನಿಕೆಯ ಮಾದರಿ ಕಮ್ಯುನಿಸ್ಟ್ ಆಗಿದ್ದರು. ಅವರ ಅಗಲಿಕೆ ಇಂತಹ ಮಾದರಿಯ ಒಂದು ಪ್ರಮುಖ ಕೊಂಡಿ ಕಳಚಿದಂತೆ ಆಗಿದೆ.

ಅವರ ಪತ್ನಿ ಯಶೋಧರವರು ಕೂಡ ಪತಿಯೊಂದಿಗೆ ಹೋರಾಟಗಳಿಗೆ ಪರೋಕ್ಷವಾಗಿ ಬೆಂಬಲ ನೀಡಿದವರು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯು ಕಾಮ್ರೇಡ್ ಶ್ರೀನಿವಾಸ್ ರವರ ನಿಧನಕ್ಕೆ ತನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ ಮತ್ತು ಅವರ ಮಡದಿ ಮತ್ತು ಮಕ್ಕಳಿಗೆ ತನ್ನ ಸಾಂತ್ವನವನ್ನು ವ್ಯಕ್ತಪಡಿಸುತ್ತದೆ.

ಪ್ರಕಾಶ್ ಕೆ.

ಹಾವೇರಿ: ವಿದ್ಯಾರ್ಥಿಗಳ ಪರೀಕ್ಷೆ ಶುಲ್ಕ ಹೆಚ್ಚಳ ಖಂಡಿಸಿ ಎಸ್‌ಎಫ್‌ಐ ಪ್ರತಿಭಟನೆ



ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಹಾವೇರಿ ಜಿಲ್ಲಾ ಸಮಿತಿ ವತಿಯಿಂದ ಅಕ್ಕಮಹಾದೇವಿ ಮಹಿಳಾ ವಿಜಯಪುರ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಪರೀಕ್ಷೆ ಶುಲ್ಕ ಹೆಚ್ಚಳ ಖಂಡಿಸಿ. ಏರಿಸಿದ ಶುಲ್ಕ ಇಳಿಸಲೇ ಬೇಕು, ವಿದ್ಯಾರ್ಥಿಗಳಿಂದ ಪಡೆದ ಹೆಚ್ಚುವರಿ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಮರುಪಾವತಿಸಿ ವಿದ್ಯಾರ್ಥಿಗಳ ಹಿತ ಕಾಪಾಡಬೇಕೆಂದು ಆಗ್ರಹಿಸಿ ಮುನಿಸಿಪಲ್ ಆಟದ ಮೈದಾನ ಹತ್ತಿರ ಇರುವ ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಕಾಲೇಜಿನ ಮುಂದೆ ಪ್ರತಿಭಟನೆ ಮಾಡಿ ಕಾಲೇಜಿನ ಪ್ರಾಂಶುಪಾಲರ ಮೂಲಕ ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ ರಾಜ್ಯದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಅಕ್ಟೋಬರ್ ನವಂಬರ್ 2019ರ ಸಾಲಿನಲ್ಲಿ ನಡೆಯುವ ಬಿಎ, ಬಿಕಾಂ, ಹಾಗೂ ಬಿಎಸ್ಸಿ ಪದವಿ ವಿದ್ಯಾರ್ಥಿನಿಯರ ಪ್ರಥಮ ತೃತೀಯ ಹಾಗೂ 5ನೇ ಸೆಮಿಸ್ಟರ್ ಪರೀಕ್ಷೆಗಳ ಶುಲ್ಕವನ್ನು ಅಂಕಪಟ್ಟಿ ಶುಲ್ಕ, ಘಟಿಕೋತ್ಸವ ಹಾಗೂ ವಿವಿಧ ಹೆಸರುಗಳಲ್ಲಿ 980 ರೂಪಾಯಿಂದ 1600 ಗಳವರೆಗೂ ತೆಗೆದುಕೊಳ್ಳುವುದನ್ನು ಎಸ್.ಎಫ್.ಐ. ಸಂಘಟನೆಯು ಖಂಡಿಸುತ್ತದೆ ಅಲ್ಲದೆ ಬಿಎ, ಬಿಕಾಂ, ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಘಟಿಕೋತ್ಸವದ ಶುಲ್ಕವನ್ನು ಕಡ್ಡಾಯ ಮಾಡಿರುವುದನ್ನು ಕೈಬಿಡಬೇಕು ಎಂದು ಒತ್ತಾಯಿಸುತ್ತದೆ.

ಸರ್ಕಾರವು ಎಸ್ಸಿ, ಎಸ್ಟಿ ಹಾಗೂ ಅಲ್ಪಸಂಖ್ಯಾತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆದಾಯಮಿತಿ ಒಳಗೆ ಬರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿದ ವಿದ್ಯಾರ್ಥಿಗಳಿಗೆ ವಿನಾಯಿತಿ ಘೋಷಣೆ ಮಾಡಿರುತ್ತದೆ ಆದರೆ ಈ ವಿಶ್ವವಿದ್ಯಾಲಯವು ನಿಯಮಗಳನ್ನು ಉಲ್ಲಂಘನೆ ಮಾಡಿ ಸರ್ಕಾರದ ಆದೇಶವನ್ನು ಧಿಕ್ಕರಿಸಿ ಎಸ್ಸಿ/ಎಸ್ಟಿ ಮತ್ತು ಒಬಿಸಿ ವಿದ್ಯಾರ್ಥಿನಿಯರಿಂದ ಸಂಪೂರ್ಣ ಶುಲ್ಕವನ್ನು ತೆಗೆದುಕೊಳ್ಳುವ ಮೂಲಕ ವಿದ್ಯಾರ್ಥಿ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ.

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆ ಶುಲ್ಕ, ಅಂಕಪಟ್ಟಿ ಶುಲ್ಕಗಳನ್ನು ರೂ. 120 ರಿಂದ ರೂ. 230 ರವರೆಗೆ ಮಾತ್ರ ತೆಗೆದುಕೊಳ್ಳಲಾಗುತ್ತದೆ ಆದರೆ ಈ ವಿಶ್ವವಿದ್ಯಾಲಯದಲ್ಲಿ ಮಾತ್ರ 980 ರೂಪಯಿದಿಂದ ಸುಮಾರು 1,600 ಗಳವರೆಗೆ ತೆಗೆದುಕೊಳ್ಳುವ ಮೂಲಕ ವಿಶ್ವವಿದ್ಯಾಲಯ ಕೇವಲ ಹಣ ಮಾಡವು ಉದ್ದೇಶವನ್ನು ಹೊಂದಿದಂತೆ ಕಾಣುತ್ತದೆ. ಆದಕಾರಣ ಏರಿಸಿದ ಶುಲ್ಕ ಇಳಿಸಲೇ ಬೇಕು, ವಿದ್ಯಾರ್ಥಿಗಳಿಂದ ಪಡೆದ ಹೆಚ್ಚುವರಿ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಮರುಪಾವತಿಸಿ ವಿದ್ಯಾರ್ಥಿಗಳ ಹಿತ ಕಾಪಾಡಬೇಕೆಂದು ಸವರಾಜ ಭೋವಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾಲೇಜ ಘಟಕದ ವಿದ್ಯಾರ್ಥಿನಿಯರ ಮುಖಂಡರಾದ ಸೃಷ್ಠಿ ನಂದಿ ಮಾತನಾಡಿ ರಾಜ್ಯ ಸರ್ಕಾರವು ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣದವರಿಗೂ ಉಚಿತ ಶಿಕ್ಷಣ ಕೊಡುತ್ತೇವೆ ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು ಎಲ್ಲಿ ಹೋಯಿತು? ದೇವರು ವರ ಕೊಟ್ಟರು ಪೂಜಾರಿ ವರ ಕೊಡಲಿಲ್ಲ ಅನ್ನುವ ಹಾಗೆ ಸರಕಾರ ಶುಲ್ಕ ವಿನಾಯಿತಿ ಕೊಟ್ಟರು ವಿಶ್ವವಿದ್ಯಾಲಯವು ಪಾಲನೆ ಮಾಡದೇ ಇರವುದು ಅಕ್ಷಮ್ಯ ಅಪರಾಧ ಅಲ್ಲವೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರಾದ ಪೂಜಾ ಎಲ್, ತೇಜಸ್ವಿನಿ ಎಮ್.ಸಿ, ಪವಿತ್ರ ಟಿ.ಎಚ್, ಸ್ವಾತಿ ಎಮ್.ಐ, ಅನುಷ ಎ.ಬಿ, ಗೀತಾ ಪೂಜಾರ, ಜ್ಯೋತಿ ಎಸ್.ಎಲ್., ಶೋಭಾ, ಮಧು ಹುಬ್ಬಳ್ಳಿ, ಕವಿತ, ಭಾಗ್ಯ, ರಂಜಿತಾ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಸವರಾಜ ಭೋವಿ

ಬಾಲಕಿ ರೂಪ ಅತ್ಯಾಚಾರ ಹತ್ಯೆ ಪ್ರಕರಣಕ್ಕೆ ನ್ಯಾಯ ದೊರಕಿಸಲು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ



ಸಂಡೂರು ತಾಲೂಕು ವಡ್ಡು ಗ್ರಾಮದ ಆರು ವರ್ಷದ ಒಂದನೇ ತರಗತಿ ಓದುವ ಶಾಲಾ ಬಾಲಕಿಯನ್ನು ಅತ್ಯಾಚಾರಮಾಡಿ ಹತ್ಯೆ ಮಾಡಲಾಗಿದೆ. ದಿನಾಂಕ 08.092019 ರಂದು ಸಂಜೆ ಸ್ನೇಹಿತಳೊಂದಿಗೆ ಆಟವಾಡುತ್ತಿದ್ದ ರೂಪ ಕಾಣೆಯಾಗಿದ್ದಾಳೆ. ರೂಪಳ ಜೊತೆ ಆಡುತ್ತಿದ್ದ ಚಿಕ್ಕ ಬಾಲಕಿಯಿಂದ ಯಾರೂ ಚಾಕೂಲೇಟ್ ನೀಡಿ ಅಪಹರಿಸಿ ಕರೆದು ಕೊಂಡ ಹೋದ ಬಗ್ಗೆ ಮಾಹಿತಿ ತಿಳಿದು ಪಾಲಕರು ಗಾಬರಿಗೊಂಡಿದ್ದಾರೆ. ಬಾಲಕಿಯ ತಾಯಿ ತಿಪ್ಪಮ್ಮ ಮತ್ತು ತಂದೆ ಮಡಿವಾಳ ರೇವಣ್ಣ ಊರಿನವರ ಸಹಾಯದಿಂದ ಮಗಳಿಗಾಗಿ ಹುಡಿಕಿದ್ದಾರೆ. ಕಾಣದಿದ್ದ ಕಾರಣ ತೋರಣಗಲ್ಲು ಪೊಲೀಸ್ ಠಾಣೆಯಲ್ಲಿ ರಾತ್ರೀಯೇ ದೂರು ದಾಖಲಿಸಲಾಗಿದೆ. ಮರು ದಿನ 09.09.2019 ರಂದು ಬೆಳಿಗ್ಗೆ ಗ್ರಾಮದ ಜನ ವಸತಿ ಸ್ಥಳದಲ್ಲಿರುವ ಮಧ್ಯದ ಅಂಗಡಿಯ ಬಾರ್ ಹತ್ತಿರ ಗೋಣಿ ಚೀಲದಲ್ಲಿ ರೂಪಳ ಶವ ಪತ್ತೆಯಾಗಿದೆ. ಬಾಲಕಿ ರೂಪಳ ಅಮಾನುಷ ಕೊಲೆಯಿಂದ ತಾಲೂಕಿನ ಜನತೆ ಭಯಭೀತರಾಗಿದ್ದಾರೆ. ದೂರು ಪಡೆದು ಬಾಲಕಿಯ ಪತ್ತೆಗೆ ಕ್ರಮ ಕೈಗೊಂಡಿದ್ದರೆ ಮಗು ಜೀವಂತ ದೊರೆಯುತಿತ್ತು. ಜನರೆ ಶಂಕಿತ ಅರೋಪಿಯ ಭಾವಚಿತ್ರ ಸಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟರೂ ಅರೋಪಿಯ ಬಂದಿಸುವಲ್ಲಿನ ವಿಳಂಬವಾಗಿದ್ದು, ಘಟನೆಯನ್ನು ಗಂಬೀರವಾಗಿ ಪರಿಗಣಿವಲ್ಲಿ ಲೋಪವಾಗಿದೆ. ಸಾಮಾಜಿಕ ಭೀತಿಯನ್ನು ಉಂಟುಮಾಡುವ ಬಹು ದೊಡ್ಡ ಘಟನೆ ನಡೆದರೂ ಜಿಲ್ಲಾಡಳಿತದ ಉನ್ನತ ಅಧಿಕಾರಿಗಳು ಬೇಟಿ ನೀಡಿ ಜನರಿಗೆ ರಕ್ಷಣೆ ಭರವಶೆ ನೀಡದಿರುವದು, ಮಕ್ಕಳ ಮತ್ತು ಮಹಿಳೆಯರ ರಕ್ಷಣೆ ಬಗ್ಗೆ ಅತಂಕ ನಾಗರೀಕರಲ್ಲಿ ಹೆಚ್ಚಾಗಿದೆ. ಶಾಸಕ, ಸಂಸದ ಮತ್ತು ಮಂತ್ರಿಗಳ ಬೇಟಿ ಕೇವಲ ರಾಜಕೀಯ ಲಾಭದ ಉದ್ದೇಶದ ಬೇಟಿಯಾಗಿತ್ತು ವಿನಾಃ ಸಂತ್ರಸ್ಥ ಕುಟಂಬಕ್ಕೆ ಪರಿಹಾರ ಮತ್ತು ಜನರ ರಕ್ಷಣೆಯ ಕುರಿತ ಗಟ್ಟಿ ಭರವಶೆ ಕಾಣಲಿಲ್ಲ. ಜನರ ತೀವ್ರ ಪ್ರತಿಭಟನೆಗಳ ನಂತರ 19.09.2019 ರಂದು ಅರೋಪಿಯನ್ನು ಬಂಧಿಸಲಾಗಿದೆ. ಅರೋಪಿಯ ಬಂಧನ ಕುರಿತು ಪೊಲೀಸ್ ಇಲಾಖೆ ಅಧಿಕೃತವಾಗಿ ಪ್ರಕಟನೆ ನೀಡದ ಕಾರಣ ಸಂಶಯಗಳು ನಾಗರೀಕರಲ್ಲಿ ಕಾಡುತ್ತಿವೆ.

ಅಪಹರಣ, ಕೊಲೆ, ಅತ್ಯಾಚಾರದಂತ ಪ್ರಕರಣಗಳು ಈ ಹಿಂದೆ ಸಹ ಹಲವಾರು ನಡೆದಿವೆ. ಜನರ ಅಸಹಾಯಕತೆ, ಇಲಾಖೆಗಳ ನಿರ್ಲಕ್ಷತೆಯಿಂದ ಬೆಳಕಿಗೆ ಬಾರದೆ ಮುಚ್ಚಿ ಹೋಗಿವೆ. ಸರ್ಕಾರವು ಈ ಪ್ರಕರಣವನ್ನು ಗಂಬೀರವಾಗಿ ಪರಿಗಣಿಸಿ ಕಠಿಣ ಕಾನೂನು ಕ್ರಮ ಕೈಗೊಂಡು ನ್ಯಾಯ ನೀಡಬೇಕು. ನ್ಯಾಯ ಪಡೆಯಲು ಸಾಮಾಜಿಕ ಸಂಘ–ಸಂಸ್ಥೆಗಳು, ಕನ್ನಡ ರಕ್ಷಣೆ, ದಲಿತ, ವಿದ್ಯಾರ್ಥಿ–ಯುವಜನ, ರೈತ–ಕಾರ್ಮಿಕ, ಪರಿಸರ, ಸಮಾಜ ಸೇವಾ ಸಂಘಗಳು, ಮತ್ತು ಸ್ವತಂತ್ರ ಸಂಘಗಳು ಜಂಟಿ ಚಳುವಳಿಯನ್ನು ನಡೆಸಲಾಗುವದು. ಜಾತಿ, ವರ್ಗ, ಸಿದ್ಧಾಂತಗಳನ್ನು ಬದಿಗಿಟ್ಟು ಪ್ರಜಾಸತ್ತಾತ್ಮಕವಾಗಿ ಹೋರಾಡುವ ಮೂಲಕ ನ್ಯಾಯ ಪಡೆಯಲು ನಿರ್ಧರಿಸಿವೆ. ಮೊದಲ ಹಂತದ ಹೋರಾಟವಾಗಿ ದಿನಾಂಕ 23.09.2019 ರಂದು ಬಳ್ಳಾರಿಯ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆಯನ್ನು ನಡೆಸಲಾಯಿತು.



ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ

ಜೀವನದ ಎಲ್ಲ ರಂಗಗಳನ್ನು ಆವರಿಸಿರುವ ಡಿಜಿಟಲೀಕರಿಸಿದ ಬಂಡವಾಳವಾದೀ ಕಾರ್ಯಚಟುವಟಿಕೆಯು, ವರ್ತಮಾನದಲ್ಲಿ, ಸ್ಮಾರ್ಟ್‌ಫೋನ್, ಅಂತರ್ಜಾಲ, ಸಾಮಾಜಿಕ ಜಾಲತಾಣಗಳ ಚಿಟ್ಟಿ ಸೌಲಭ್ಯಗಳ ಹೆಸರಿನಲ್ಲಿ ಲಿಂಗ, ವಯಸ್ಸು, ಶಿಕ್ಷಣ, ಬುದ್ಧಿವಂತಿಕೆ, ತಿಳುವಳಿಕೆಗಳ ವ್ಯತ್ಯಾಸಗಳನ್ನು ದಾಟಿ ಜಾಗತಿಕ ಮಟ್ಟದಲ್ಲಿ ವೇತನರಹಿತ ದುಡಿಮೆಗೆ ಜನರನ್ನು ತೊಡಗಿಸಿದೆ. ಕಛೇರಿ–ಮನೆಗಳೆಂಬ ಬೇಧವಿಲ್ಲದೆ, ಕೆಲಸದ ಕಾಲ ಮತ್ತು ವಿಶ್ರಾಂತಿಕಾಲಗಳ ನಡುವೆ ಇದ್ದ ಗೆರೆಯನ್ನು ಅಳಿಸಿಹಾಕಿ 24 ಗಂಟೆಯೂ ಚಿಟ್ಟಿ ದುಡಿಮೆಗೆ ಜನರನ್ನು, ಅದರಲ್ಲೂ ಯವಜನರನ್ನು ತೊಡಗಿಸುವ ಶ್ರಮಸಂಬಂಧಗಳು ಮಾರ್ಕ್ಸ್ ಹೇಳಿದ ಹೆಚ್ಚುವರಿ ಶ್ರಮದಿಂದ ಹುಟ್ಟುವ ಮಿಗುತಾಯ ಮೌಲ್ಯದ ಹೊಸರೂಪಗಳ ಬಗ್ಗೆ ತಳಮಟ್ಟದಿಂದ ಯೋಚಿಸುವಂತೆ ಮಾಡುತ್ತಿವೆ.

ಮಾರ್ಕ್ಸ್‌ವಾದ ಮತ್ತು ಡಿಜಿಟಲ್ ವರ್ತಮಾನ


ಜೀವಿಗಳ ಅಸ್ತಿತ್ವ ಅವು ನಿಸರ್ಗದಿಂದ ಪಡೆಯುವ ಜೀವನಾಧಾರ ವಸ್ತು–ಸ್ಥಿತಿಗಳನ್ನು ಅವಲಂಬಿಸಿದೆ. ಅವುಗಳಲ್ಲಿ ಬಹು ಮುಖ್ಯವಾದವುಗಳು 1.ಆಹಾರ, 2. ನೀರು, 3. ಸ್ಥಳಾವಕಾಶ, 4. ಸಂತಾನಾಭಿವೃದ್ಧಿ ಮತ್ತು ಜೀವಪೋಷಣೆಗೆ ಅನುಕೂಲಕರವಾದ ಹವಾಮಾನ.

ಜೀವಿಗಳ ಓಡಾಟ,ವಲಸೆ, ಕಾದಾಟ, ಪೈಪೋಟಿಗಳು ನೇರವಾಗಿ ಈ ಮೇಲೆ ತಿಳಿಸಿದ ನಾಲ್ಕು ಅಂಶಗಳಿಗಾಗಿ ನಡೆಯುತ್ತವೆ. ನಿಸರ್ಗದಮೇಲೆ ಸಂಪೂಣವಾಗಿ ಅವಲಂಬಿತವಾಗಿರುವ ಜೀವಿಗಳ ಸ್ಥಿತಿ–ಗತಿಗಳು ನಿಸರ್ಗದಲ್ಲಾಗುವ ಬದಲಾವಣೆ, ವೈಪರೀತ್ಯಗಳಿಂದ ನೇರವಾಗಿ ಬಾಧಿತವಾಗುತ್ತವೆ. ಅಂದರೆ, ಜೀವನಾಧಾರ ವಸು–ಸ್ಥಿತಿ ಅನುಕೂಲಕರವಾಗಿದ್ದರೆ ವೃದ್ಧಿಸುತ್ತವೆ. ಅನನುಕೂಲಕರವಾಗಿದ್ದರೆ ನಶಿಸುತ್ತವೆ. ಜೀವಿಗಳ ನಡುವೆ ಇರುವ ಪರಸ್ಪರ ಸಂಬಂಧಎಂದರೆ ರಕ್ತ ಸಂಬಂಧವೇ. ಹುಟ್ಟಿನಿಂದಲೇ ಅವುಗಳ ಸ್ವಭಾವ ಮತ್ತು ನಡವಳಿಕೆಗಳನ್ನು ನಿರ್ದೇಶಿಸುವನೈಸರ್ಗಿಕ ಗುಣಗಳಮೇಲೆ ಅವಕ್ಕೆ ಯಾವ ನಿಯಂತ್ರಣವೂ ಇಲ್ಲ. ಜೀವಿಗಳು ನಿರಂತರವಾಗಿ ಅಸ್ತಿತ್ವದಲ್ಲಿರಬೇಕೆಂದರೆ ಅವುಗಳ ಜೀವನಾಧಾರ ವಸ್ತು–ಸ್ಥಿತಿಗಳ ಪೂರೈಕೆ ನಿಸರ್ಗದಲ್ಲಿ ನಿರಂತರವಾಗಿ ಆಗುತ್ತಿರಲೇಬೇಕು. ಹಾಗಾಗದಿದ್ದರೆ ಅವು ಅತಂತ್ರ ಸ್ಥಿತಿಯಲ್ಲಿ ಬದುಕುತ್ತಾ ಕೊನೆಗೆ ಸಾವನ್ನಪ್ಪುತ್ತವೆ.

ನಿಸರ್ಗದ ಭಾಗವಾಗಿದ್ದೂ, ಪ್ರಾಣಿಯಾಗಿ ಇತರ ಜೀವಿಗಳಿಗಿಂತ ವಿಶಿಷ್ಟ ರೀತಿಗಳಲ್ಲಿ ಭಿನ್ನವಾಗಿರುವ ಮನುಷ್ಯಜೀವಿಯ ಅಸ್ತಿತ್ವವೂ ಮೇಲೆ ಹೇಳಿದ ನಾಲ್ಕು ಬಗೆಯ ಜೀವನಾಧಾರ ವಸ್ತು–ಸ್ಥಿತಿಗಳನ್ನೇ ಅವಲಂಬಿಸಿದೆ. ಮನುಷ್ಯರ ಓಡಾಟ, ವಲಸೆ, ಕಾದಾಟ ಮತ್ತು ಪೈಪೋಟಿಗಳೂ ಸಹ ನೇರವಾಗಿ ಈ ನಾಲ್ಕು ಅಂಶಗಳಿಗಾಗಿಯೇ ನಡೆಯುತ್ತವೆ. ಮನುಷ್ಯರ ಸ್ಥಿತಿ–ಗತಿಗಳೂ ಸಹ ನಿಸರ್ಗದಮೇಲೆ ಅವಲಂಬಿತವಾಗಿದ್ದರೂ ತಮ್ಮ ಶ್ರಮ ಮತ್ತು ಬುದ್ಧಿವಂತಿಕೆಗಳ ಬಲದಿಂದ ನಿಸರ್ಗವನ್ನು ಮಾರ್ಪಡಿಸುವ ಶಕ್ತಿಯಿಂದಾಗಿ ಪ್ರಾಣಿಗಳ ಸ್ಥಿತಿ–ಗತಿಗಳಂತೆ ನೇರವಾಗಿ ಬಾಧಿತವಾಗುವುದಿಲ್ಲ. ಅಂದರೆ ಜೀವನಾಧಾರ ವಸ್ತು–ಸ್ಥಿತಿಗಳು ಪ್ರತಿಕೂಲವಾಗಿದ್ದಾಗಲೂ ನಶಿಸದೆ ಹೇಗೋ ವೃದ್ಧಿಸುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಶಕ್ತಿ ಮನುಷ್ಯರಿಗಿದೆ. ಮನುಷ್ಯಜೀವಿಗಳ ನಡುವೆ ಇರುವ ಪರಸ್ಪರ ಸಂಬಂಧವು ರಕ್ತಸಂಬಂಧದಾಚೆಗೂ ವಿಸ್ತರಿಸಿ ಶ್ರಮಸಂಬಂಧದಮೇಲೆ ನಿಂತಿದೆ. ಮನುಷ್ಯರ ಸ್ವಭಾವ ಮತ್ತು ನಡವಳಿಕೆಗಳನ್ನು ನಿರ್ದೇಶಿಸುವ ನೈಸರ್ಗಿಕ ಗುಣಗಳಮೇಲೆ ಸಾಮಾಜಿಕವಾದ ಮತ್ತು ರಾಜಕೀಯವಾದ ನಿಯಂತ್ರಣ ಮನುಷ್ಯರಿಗೆ ಇರುವುದು ಮಾತ್ರವಲ್ಲ ಅವನ್ನು ಒಟ್ಟು ಸಮಾಜದ ಒಳಿತಿಗಾಗಿ ಮಾರ್ಪಡಿಸಿಕೊಳ್ಳುವ ಶಕ್ತಿಯೂ ಇದೆ. ಮನುಷ್ಯರು ನಿರಂತರವಾಗಿ ಅಸ್ತಿತ್ವದಲ್ಲಿರಬೇಕಾದರೆ ಅವರ ಜೀವನಾಧಾರ ವಸ್ತು–ಸ್ಥಿತಿಗಳ ಪೂರೈಕೆಯು ನಿಸರ್ಗದಿಂದ ದೊರೆಯುವ ವಸ್ತುಗಳಿಗೆ ಶ್ರಮವನ್ನು ಸೇರಿಸುವ ಉತ್ಪಾದನಾ ಕ್ರಿಯೆಗಳ ಮೂಲಕ ನಿರಂತರವಾಗಿ ಆಗುತ್ತಿರಲೇಬೇಕು.ಶ್ರಮಸಂಬಂಧದ ಬಿಕ್ಕಟ್ಟಿನಿಂದಾಗಿ ಹಾಗಾಗದಿದ್ದರೆ ದುರ್ಬಲರು,ಬಡವರು ಮತ್ತು ಶ್ರಮಿಕರು ಅತಂತ್ರರಾಗುತ್ತಾರೆ. ಬಿಕ್ಕಟ್ಟು ತೀವ್ರವಾದರೆ ಅತೀವ ಬಡತನದಲ್ಲಿ ನರಳಿ ಸಾವನ್ನಪ್ಪುತ್ತಾರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಲ್ಲವೆ ಅಪರಾಧಗಳಿಗೆ ಇಳಿಯುತ್ತಾರೆ.

ಮನುಷ್ಯರು ಮತ್ತು ಮನುಷ್ಯೇತರಜೀವಿಗಳ ನಡುವೆ ಇರುವ ಸಮಾನಗುಣ ರಕ್ತಸಂಬಂಧ. ಎರಡಕ್ಕೂ ನಡುವೆ ಇರುವ ನಿರ್ಣಾಯಕ ವ್ಯತ್ಯಾಸವೆಂದರೆ ಶ್ರಮಸಂಬಂಧ. ನಿಸರ್ಗದ ಭೂಮಿ ಮತ್ತು ಅದರ ಸಿದ್ಧ ಉತ್ಪನ್ನಗಳು ಪ್ರಾಣಿಗಳ ಅಸ್ತಿತ್ವಕ್ಕೆ ಸಾಕಾದರೂ, ಇವುಗಳ ಜೊತೆಗೆ ಶ್ರಮವನ್ನು ಸೇರಿಸಿ ಮಾರ್ಪಡಿಸದಿದ್ದರೆ ಮನುಷ್ಯರ ಅಸ್ತಿತ್ವವೇ ಡೋಲಾಯಮಾನವಾಗುತ್ತದೆ ಎಂಬುದು ಇಲ್ಲಿ ಬಹುಮುಖ್ಯವಾದ ಅಂಶ. ಹೀಗೆ ಮಾರ್ಪಡಿಸಲು ಮನುಷ್ಯರ ಕರಣಗಳನ್ನು ಬಳಸಿ ಮಾಡುವ ಶ್ರಮದ ಜೊತೆಗೆ, ಬುದ್ಧಿವಂತಿಕೆ, ಕಲ್ಪನಾಶಕ್ತಿ, ಪ್ರತಿಭೆ, ಸೃಜನಶೀಲತೆ ಮತ್ತು ಅನುಭವಗಳನ್ನು ಬುದ್ಧಿಪೂರ್ವಕವಾಗಿ ಬಳಸಿ ತಯಾರಿಸಿಕೊಳ್ಳುವ ಉಪಕರಣಗಳ ಬಳಕೆ ಅತ್ಯಗತ್ಯ. ಹೀಗೆ ಉಪಕರಣಗಳನ್ನು ತಯಾರಿಸಿಕೊಂಡು ಬಳಸಿಕೊಳ್ಳುವ ಆಲೋಚನೆ–ಶಕ್ತಿ–ಕೌಶಲಗಳು ಮನುಷ್ಯರಿಗೆ ಮಾತ್ರ ಸಾಧ್ಯ.

ದುಂಬಿಗಳು ಕಟ್ಟುವ ಗೂಡಿನ ನಿಸರ್ಗಜನ್ಯ ಕುಶಲತೆಯು ಅಸಾಧಾರಣ ಎನಿಸಬಹುದಾದರೂ ಅದರ ಹಿಂದೆ 'ಹೀಗೆಯೇ ಕಟ್ಟಬೇಕು, ಅಥವಾ ಇದನ್ನು ಸುಧಾರಿಸಿ ಕಟ್ಟಿದರೆ ಹೇಗೆ?' ಎಂಬಂಥ ಆಲೋಚನೆ–ಕಲ್ಪನೆ–ಸೃಜನಶೀಲತೆ ಮತ್ತು ಬುದ್ಧಿಪೂರ್ವಕ ಯತ್ನಗಳು ಇಲ್ಲ.ಜೇನ್ ಗುಡಾಲ್ ಅಭ್ಯಸಿಸಿ ಕಂಡುಕೊಂಡ ಚಿಂಪಾಂಜಿಗಳ ನಡವಳಿಕೆಯಲ್ಲಿ



ಗಿಡದ ಕಡ್ಡಿಗಳನ್ನು ಉಪಕರಣವನ್ನಾಗಿ ಮಾರ್ಪಡಿಸಿ ಬಳಸಿಕೊಳ್ಳುವ ಸೀಮಿತ ಕೌಶಲ ಇದೆಯೇ ಹೊರತು ಹೊಸದಾದ ಉಪಕರಣವನ್ನು ಆಲೋಚಿಸಿ ಸೃಜಿಸುವ ಶಕ್ತಿ ಇಲ್ಲ.

ಮನುಷ್ಯರ ಶ್ರಮಸಂಬಂಧ ಎಂಬುದರಲ್ಲಿ ದೈಹಿಕಶ್ರಮದರೀತಿಗಳು, ಉಪಕರಣಗಳ ಸ್ವರೂಪ ಮತ್ತು ಅವನ್ನು ಬಳಸುವ ಮನುಷ್ಯರ ನಡುವೆ ಇರುವ ಕೊಡು–ಕೊಳ್ಳುವಿಕೆಯ ಸಂಬಂಧಗಳುಸೇರಿವೆ. ಉದಾಹರಣೆಗೆ, ಭೂಮಿಯನ್ನು ಉಳುವ ರೈತರ ಶ್ರಮ, ಅವರು ಬಳಸುವ ನೇಗಿಲಿನ ಸ್ವರೂಪ ಮತ್ತು ಬೆಳೆದ ಬೆಳೆಯನ್ನು ರೈತರು ತಮ್ಮ ಸ್ವಂತ ಬಳಕೆಗೆ ಇಟ್ಟುಕೊಳ್ಳುತ್ತಾರೋ/ಬಳಸುತ್ತಾರೋ ಅಥವಾ/ಜೊತೆಗೆ ಇನ್ನೊಬ್ಬರಿಗೆ ಮಾರುತ್ತಾರೋ ಎಂಬುದು ರೈತರು ಮತ್ತು ಉಳಿದವರ ನಡುವಿನ ಶ್ರಮಸಂಬಂಧ ಎನಿಸುತ್ತದೆ.

ಮನುಷ್ಯೇತರ ಜೀವಿಗಳು ತಮ್ಮ ತಮ್ಮ ಅಸ್ತಿತ್ವಕ್ಕಾಗಿ ತಾವೇ ಶ್ರಮಹಾಕಿ ಜೀವನಾಧಾರ ವಸ್ತು–ಸ್ಥಿತಿಗಳನ್ನು ಪಡೆಯುವುದು ನೈಸರ್ಗಿಕ ಜೀವನಕ್ರಮ. ಹಾಗೆಯೇ ಮನುಷ್ಯರೂ ಸಹ, ಒಟ್ಟಿಗೆ ಜೀವಿಸುವ ಎಲ್ಲರೂ ತಮ್ಮ ಕೈಲಾದ ಶ್ರಮಹಾಕಿ ಜೀವನಾಧಾರ ವಸ್ತು–ಸ್ಥಿತಿಗಳನ್ನು ನಿಸರ್ಗದಿಂದ ಪಡೆಯುವುದು ಮಾತ್ರವಲ್ಲ, ಅವನ್ನು ತಮ್ಮ ಬುದ್ಧಿವಂತಿಕೆ–ಸೃಜನಶೀಲತೆಗಳಿಗನುಗುಣವಾಗಿ ಮಾರ್ಪಡಿಸುತ್ತಾ, ಹೊಸ ವಸ್ತು–ಸ್ಥಿತಿಗಳನ್ನು ಸೃಷ್ಟಿಸುತ್ತಾಅವುಗಳ ಶ್ರಮಸಂಬಂಧಗಳಜಾಲದಲ್ಲಿಬದುಕುವುದು ಸಾಮಾಜಿಕ ಜೀವನಕ್ರಮ. ಮನುಷ್ಯರ ಚರಿತ್ರೆ ಎಂದರೂ ಇದೇ. ಮನುಷ್ಯರ ಬುದ್ಧಿವಂತಿಕೆ, ನಿಸರ್ಗದ ಬಗೆಗಿನ ಅವರ ಅರಿವು ಮತ್ತು ಅದನ್ನು ಆಧರಿಸಿದ ಸೃಜನಶೀಲತೆಗಳು ಇದ್ದಂತೆಯೇ ಇರದೆ ಸದಾ ಬದಲಾಗುತ್ತಾ ಹೋಗುವುದು ಮನುಷ್ಯಜೀವನದ ಸಹಜ ಗುಣ. ಇದರಿಂದಾಗಿ ಜೀವನಾಧಾರ ವಸ್ತು–ಸ್ಥಿತಿಗಳ ಉತ್ಪಾದನೆಯ ಹಿಂದಿರುವ ಶ್ರಮದ ರೀತಿಗಳು, ಅಂದರೆ, ಶ್ರಮಸಂಬಂಧಗಳು, ಉತ್ಪಾದನೆಗಾಗಿ ಬಳಸುವ ಉಪಕರಣಗಳು, ಅವುಗಳ ತಾಂತ್ರಿಕತೆ, ಅಂದರೆ ಉತ್ಪಾದನಾ ಸಾಧನಗಳು, ಮತ್ತು ಶ್ರಮದ ಉತ್ಪನ್ನಗಳ ಒಡೆತನ–ಹಂಚಿಕೆಗಳು, ಅಂದರೆ ಉತ್ಪಾದನಾ ಸಂಬಂಧಗಳು,ನಿರಂತರವಾಗಿ ಬದಲಾಗುತ್ತಾ, ಒಂದೊಂದು ಕಾಲಘಟ್ಟದಲ್ಲೂ ನಿರ್ದಿಷ್ಟವಾಗಿ ಒಂದೊಂದು ರೀತಿಯದ್ದಾಗಿವೆ. ಚರಿತ್ರೆ ಬದಲಾಗುವುದೆಂದರೆ ಅಸ್ತಿತ್ವದ ಶ್ರಮಸಂಬಂಧಗಳು, ಉತ್ಪಾದನಾ ಸಾಧನಗಳು ಹಾಗೂ ಉತ್ಪಾದನಾ ಸಂಬಂಧಗಳು ಬದಲಾಗುವುದು.

ಮನುಷ್ಯ ಸಮಾಜಜೀವಿ ಎಂದರೆ ಪ್ರಾಣಿಗಳಂತೆ ನೈಸರ್ಗಿಕಜೀವಿ ಅಲ್ಲ ಎನ್ನುವುದು ಸ್ಪಷ್ಟವಾಗಿದೆ. ಆದರೆ, 'ಸಮಾಜ' ಎಂದರೆ ಶ್ರಮಸಂಬಂಧಗಳಲ್ಲಿ ಅಸ್ತಿತ್ವದಲ್ಲಿರುವ ಮನುಷ್ಯರ ಸಂಬಂಧಜಾಲ ಎಂದಾಗ ನಿಸರ್ಗದಂತೆ ಸ್ವತಂತ್ರವಾದ, ಬಿಡಿ ಮನುಷ್ಯರಿಂದ ಪ್ರತ್ಯೇಕವಾದ ಸಮಾಜ ಎಂಬುದೊಂದಿದೆ ಎಂದಾಗಲಿ, ಶ್ರಮಸಂಬಂಧಜಾಲದಿಂದ ಆಚೆ ಇರುವ ಸ್ವತಂತ್ರ 'ವ್ಯಕ್ತಿ'ಗಳ ಸಮೂಹ ಎಂದಾಗಲಿ ಅರ್ಥವಲ್ಲ. ಇದರ ಬಗ್ಗೆ ಸ್ಪಷ್ಟತೆ ಇಲ್ಲದಿದ್ದಾಗ, ವ್ಯಕ್ತಿ ಮೊದಲೋ ಸಮಾಜ ಮೊದಲೋ, ವ್ಯಕ್ತಿಗಳಿಂದ ಸಮಾಜ ಆಗಿದೆಯೋ, ಸಮಾಜದೊಳಗೆ ವ್ಯಕ್ತಿಗಳಿದ್ದಾರೆಯೋ ಎಂಬಂಥ ಗೊಂದಲಮಯ ಪ್ರಶ್ನೆಗಳು ಏಳುತ್ತವೆ. ವ್ಯಕ್ತಿ ಮತ್ತು ಸಮಾಜ ಎಂಬ ವಿಂಗಡಣೆಗಳು ಮನುಷ್ಯರ ಅರಿವನ್ನು ಅಥವಾ ಪ್ರಜ್ಞೆಯನ್ನು ಶ್ರಮಸಂಬಂಧಜಾಲದಿಂದ ಪ್ರತ್ಯೇಕಿಸಿ ಒಂದು ಸ್ವತಂತ್ರ ಘಟಕವನ್ನಾಗಿ ನೋಡುವುದು ಮನುಷ್ಯ ಚರಿತ್ರೆಯಲ್ಲಿ ರೂಢಿಗೆ ಬಂದಿರುವ ಇತ್ತೀಚಿನ ವಿದ್ಯಮಾನ.

ಆದಿಮ ಸಮಾಜದಲ್ಲಿ, ಅಂದರೆ, ಆದಿಮ ಶ್ರಮಸಂಬಂಧಜಾಲದಲ್ಲಿ ಎಲ್ಲರೂ ಅವರವರಿಗೆ ಸಾಧ್ಯವಾದ ರೀತಿಗಳಲ್ಲಿ, ತಮ್ಮ ತಮ್ಮ ಶಕ್ತ್ಯಾನುಸಾರ ಜೀವನಾಧಾರ ವಸ್ತು–ಸ್ಥಿತಿಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡು ಬದುಕುತ್ತಿದ್ದಾಗ ಮನುಷ್ಯ ಮನುಷ್ಯರ ನಡುವೆ ನಿಸರ್ಗ ಸಹಜವಾದ ಭಿನ್ನತೆ–ವೈವಿಧ್ಯಗಳು ಇದ್ದವೇ ಹೊರತು, ಈಗಿರುವಂತೆ, ಮೇಲು–ಕೀಳು, ಬಡವ–ಬಲ್ಲಿದ, ಮಾಲೀಕ–ಸೇವಕ, ಆಳುವವರು–ಪ್ರಜೆಗಳು ಮುಂತಾದ ತಾರತಮ್ಯಗಳಿರಲಿಲ್ಲ. ಕೆಲವೇ ಬಲಿಷ್ಠರು ತಮಗಿಂತ ದುರ್ಬಲರನ್ನು ಬಲಪ್ರಯೋಗದಿಂದ ಶ್ರಮದಲ್ಲಿ ತೊಡಗಿಸಿ, ತಾವು ಶ್ರಮಪಡದೆ ಜೀವನಾಧಾರ ವಸ್ತು–ಸ್ಥಿತಿಗಳನ್ನು ಅನುಭವಿಸಲು ಪ್ರಾರಂಬಿಸಿದಾಗ ತಾರತಮ್ಯದ ಸಮಾಜ ಕಾಣಿಸಿಕೊಂಡಿತು. ಅಲ್ಲಿಂದ ಪ್ರಾರಂಭವಾದ ಒಡೆಯ–ಗುಲಾಮ, ಭೂಮಾಲೀಕ–ಗೇಣಿರೈತ, ಬಂಡವಳಿಗ–ಶ್ರಮಿಕ ಮುಂತಾದ ತಾರತಮ್ಯಗಳು ಈಗಲೂ ಮುಂದುವರೆದಿವೆ.

ಮನುಷ್ಯೇತರ ಜೀವಿಗಳಲ್ಲಿ ಮೌಲ್ಯದ ಕಲ್ಪನೆ ಇಲ್ಲ. ಆದರೆ ಅವು ಸಸ್ಯಗಳನ್ನು ಅಥವಾ ಪ್ರಾಣಿಗಳನ್ನು, ತಿಂದು ಬದುಕುವುದರಿಂದ, ಒಟ್ಟಾರೆ ತಮ್ಮ ಜೀವಧಾರಣೆ ಮತ್ತು ಸಂತಾನೋತ್ಪತ್ತಿಗೆ ಉಪಯುಕ್ತವಾದ ಆಹಾರದ ಮೂಲಗಳನ್ನು ಪಡೆಯಲು ಅವುಗಳಲ್ಲೇ ಪೈಪೋಟಿ, ಉಪಾಯ, ಘರ್ಷಣೆ, ಕಿತ್ತಾಟ ಮತ್ತು ಮಾರಣಾಂತಿಕವಾದ ಹೋರಾಟಗಳಿವೆ. ಹಿಂಡಿನ ಜೀವನಕ್ರಮದಲ್ಲಿ ಅವುಗಳದ್ದೇ ಆದ ವಿಶಿಷ್ಟತೆಗಳಿದ್ದರೂ ಮಿತಿಯಿಲ್ಲದ ಆಹಾರದ ದಾಸ್ತಾನು, ಕಾಡು ಅಥವಾ ಭೂಪ್ರದೇಶದ ಎಲ್ಲೆಗಳಿಗಾಗಿ ಸಂಘಟಿತ ಹೋರಾಟಗಳಿಲ್ಲ.

ಜೀವನಾಧಾರ ವಸ್ತು–ಸ್ಥಿತಿಗಳು ಎಲ್ಲ ಮನುಷ್ಯರಿಗೂ ಅವರ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಅಗತ್ಯವಾದ್ದರಿಂದ ಅವಕ್ಕೆ ಅವುಗಳದ್ದೇ ಆದ ಮೌಲ್ಯಗಳಿವೆ. ಈ ವಸ್ತು–ಸ್ಥಿತಿಗಳು ಬದುಕಲು ಉಪಯುಕ್ತವಾದ್ದರಿಂದ ಅವುಗಳ ಮೌಲ್ಯವನ್ನು ಉಪಯುಕ್ತಮೌಲ್ಯ ಎನ್ನುತ್ತಾರೆ. ಒಂದು ಸಮಾಜದಲ್ಲಿ ಎಲ್ಲರೂ, ಎಲ್ಲ ಜೀವನಾಧಾರ ವಸ್ತುಗಳನ್ನೂ ಎಲ್ಲರಿಗೂ ಆಗುವಷ್ಟು ಉತ್ಪಾದಿಸುವುದುಅಸಾಧ್ಯವಾದ್ದರಿಂದ ಅವರವರಿಗೆ ಉಪಯುಕ್ತವಾದ ವಸ್ತುಗಳನ್ನು, ಅವು ಬೇಡವಾದವರಿಂದ, ತಮಗೆ ಬೇಡವಾದ ವಸ್ತುಗಳಿಗಾಗಿ ವಿನಿಮಯ ಮಾಡಿಕೊಳ್ಳಬೇಕಾದಾಗ ವಿನಿಮಯಮೌಲ್ಯ ಹುಟ್ಟಿತು. ಅದೇರೀತಿ ಎಲ್ಲ ಕೆಲಸಗಳನ್ನೂ ಎಲ್ಲರೂ ಮಾಡುವುದು ಸಾಧ್ಯವಿಲ್ಲವಾದ್ದರಿಂದ ಮತ್ತು ಎಲ್ಲ ಕೌಶಲಗಳು ಎಲ್ಲರಲ್ಲೂ ಇರುವುದು ಅಸಾಧ್ಯವಾದ್ದರಿಂದ ಉಪಯುಕ್ತ ವಸ್ತುಗಳನ್ನು ಉಪಯುಕ್ತ ಸಹಾಯ ಅಥವಾ ಕೌಶಲಗಳಿಗಾಗಿ ಅವರವರ ಅಗತ್ಯಗಳನ್ನು ಅನುಸರಿಸಿ ವಿನಿಮಯಮಾಡಿಕೊಳ್ಳುವುದು, ಅಂದರೆ ವಸ್ತು ಮತ್ತು ಸೇವೆಗಳ ವಿನಿಮಯ ರೂಢಿಗೆ ಬಂದಿತು. ವಸ್ತು ಮತ್ತು ಸೇವೆಗಳ ವಿನಿಮಯವನ್ನು ಸುಲಭಮಾಡುವುದಕ್ಕಾಗಿ ಪ್ರಾರಂಭದಲ್ಲಿ ಚಿನ್ನ, ಬೆಳ್ಳಿ ಮುಂತಾದ ಅಪೂರ್ವವಾದ, ಸುಲಭವಾಗಿ ಎಲ್ಲರೂ ಪಡೆಯಲಾಗದ, ಬೇಗ ಹಾಳಾಗದ ಲೋಹಗಳನ್ನು ವಿನಿಮಯದ ಮಾಧ್ಯಮಗಳನ್ನಾಗಿ ಬಳಸಲಾಯಿತು. ಇದೇ ಹಣ. ವಸ್ತು–ಸೇವೆಗಳ ವಿನಿಮಯದಲ್ಲಿ ಹಣದ ಪ್ರವೇಶವಾಗಿದ್ದು ಹೀಗೆ. ಯಾವುದೇ ವಸ್ತು ಮತ್ತು ಯಾವುದೇ ಸೇವೆ ಬೇಕಾದರೂ ಹಣಕ್ಕಾಗಿ ವಿನಿಮಯವಾಗಬಹುದು ಮತ್ತು ಹಣವು ಯಾವ ವಸ್ತು–ಸೇವೆಯೊಂದಿಗೆ ಬೇಕಾದರೂ ವಿನಿಮಯವಾಗಬಹುದು ಎಂದಾದಾಗ ಹಣವೇ ಒಂದು ವಿನಿಮಯ ಮೌಲ್ಯವುಳ್ಳ ವಸ್ತುವಾಯಿತು. ಹೀಗಾಗಿ ಹಣಕ್ಕೆ ವಿನಿಮಯ ಮೌಲ್ಯ ಇದೆ. ಆದರೆ ಇತರ ವಸ್ತು–ಸೇವೆಗಳಂತೆ ತನ್ನದೇ ಆದ ಉಪಯುಕ್ತಮೌಲ್ಯ ಎಂಬುದಿಲ್ಲ. ಹಣವನ್ನು ಕೊಟ್ಟು ವಸ್ತು–ಸೇವೆಗಳನ್ನು ಪಡೆಯುವುದು ಖರೀದಿ. ವಸ್ತು–ಸೇವೆಗಳನ್ನು ಕೊಟ್ಟು– ಹಣವನ್ನು ಪಡೆಯುವುದು ಮಾರಾಟ. ಈ ವಿನಿಮಯಗಳಲ್ಲಿ ವಸ್ತು–ಸೇವೆಗಳನ್ನು ಅವುಗಳ ಉಪಯುಕ್ತಮೌಲ್ಯವನ್ನು ಪುಟ 11 ಕ್ಕೆ

“ಮಾಧ್ಯಮಗಳ ವಿರುದ್ದವೂ ಹೋರಾಟ ನಡೆಯಬೇಕಿದೆ”

‘ಎನ್‌ಡಿಟಿವಿ ಇಂಡಿಯಾ ಮ್ಯಾನೇಜಿಂಗ್ ಎಡಿಟರ್ ರವೀಶ್ ಕುಮಾರ್’ ರವರು ಮಾಧ್ಯಮಗಳ ವಿರುದ್ದದ ಹೋರಾಟ, ಒಂದು ದೇಶ, ಒಂದು ಭಾಷೆಯ ಕಾನ್ಸೆಪ್ಟ್ ಹಿಂದಿನ ಹುನ್ನಾರಗಳ ಬಗ್ಗೆ ಮಾತನಾಡಿದ್ದಾರೆ. ಓದಿ



ನಾನು ಹ್ಯೂಸ್ಟನ್ ನಲ್ಲಿಲ್ಲ. ನಾನು ಕನ್ನಡ ನಾಡಿನಲ್ಲಿದ್ದೇನೆ. ಗೌರಿ ಲಂಕೇಶ್ ನಿರಂತರ, ಗೌರಿ ಲಂಕೇಶ್ ನಿರಂತರ ಎಂದು ಹೇಳುವಷ್ಟು ಕನ್ನಡವನ್ನು ಒಂದು ದಿನದಲ್ಲಿ ಕಲಿತಿದ್ದೇನೆ. ‘ಇಂದಿರಮ್ಮಾ ಅವರೇ, ನಿಮ್ಮ ಮಗಳ ಹೆಸರಿನಲ್ಲಿ ನೀಡಲಾಗುವ ಈ ಘನವೆತ್ತ ಗೌರಿ ಪುರಸ್ಕಾರವನ್ನು ಪಡೆಯುತ್ತಿದ್ದೇನೆ. ಆದ್ದರಿಂದ ನನ್ನ ಮುಂದಿನ ಬದುಕಿನಲ್ಲಿ ನಾನೇನಾದ್ರೂ ತಪ್ಪು ಮಾಡಿದ್ರೆ ನನ್ನನ್ನು ನಿಮ್ಮ ಮಗನೆಂದು ಕ್ಷಮಿಸಿ ಬಿಡಿ.’

ಈ ಸಭಾಂಗಣದಲ್ಲಿ ಸೇರಿರುವ ಸಹೃದಯರೇ, ಒಬ್ಬ ಪತ್ರಕರ್ತೆಯ ನೆನಪಿನಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮ ಅಮೋಘವಾದುದು. ಇದರ ಮಹತ್ವ ಬಹುಶಃ ನಿಮಗೇ ಗೊತ್ತಿರಲಿಕ್ಕಿಲ್ಲ. ನನಗೆ ಪ್ರಶಸ್ತಿ ಪ್ರಧಾನ ಎಂಬ ಹೆಸರಿನಲ್ಲಿ ಪತ್ರಕರ್ತೆಯ ಕಾರಣಕ್ಕಾಗಿ ನಾವೆಲ್ಲ ಒಟ್ಟು ಸೇರಿದ್ದೇವೆ.

ನಾನು ಭಾರತ ದೇಶದ ನಾರ್ತ್ ಇಂಡಿಯಾ ಎಂದು ಹೇಳಲಾಗುವ ಭಾಗದಿಂದ ಬಂದಿದ್ದೇನೆ. ಆ ಭಾಗದಲ್ಲಿ ಹಲವು ಪತ್ರಕರ್ತರನ್ನು ಬಲವಂತವಾಗಿ ಸಂಸ್ಥೆಯಿಂದ ಹೊರ ಹಾಕಲಾಯಿತು. ಆ ಪತ್ರಕರ್ತರ ಪರವಾಗಿ ಯಾರೂ ಬಂದಿಲ್ಲ. ನೀವು ಬಂದಿದ್ದೀರಿ. ನಿಮ್ಮ ಧ್ವನಿ ಎತ್ತರಿಸಿದ್ದೀರಿ. ಈ ಸಮಾಜದಲ್ಲಿ ಯಾರಾದರೂ ಯುವಕ ಯುವತಿಯರು ಪತ್ರಕರ್ತರಾಗಲು ಬಯಸುವುದಾದರೆ ನೀವು ಭಯಮುಕ್ತರಾಗಿ ಮಾತನಾಡಲು ಶುರು ಮಾಡಬೇಕು.

ಉತ್ತರ ಭಾರತದಿಂದ ನಿಮ್ಮನ್ನು ಹಿಂದಿಯ ಹೆಸರಿನಲ್ಲಿ ಬೆದರಿಸಲು ಶುರು ಮಾಡಿದರೆ ಭಯಪಡಬೇಡಿ. ಇಡೀ ಹಿಂದೂಸ್ಥಾನದಲ್ಲಿ ಹಿಂದಿಯೇತರ ಭಾಗಗಳಲ್ಲಿ ಹಿಂದಿಯ ಹೆಸರಿನಲ್ಲಿ ಹೆದರಿಸುವವರೇ ಹಿಂದಿಯನ್ನು ಹಾಳುಗೆಡವಿದ್ದಾರೆ. ಅವರು ಕೇವಲ ಹಿಂದಿಯ ಹೆಸರಿನಲ್ಲಿ ಉತ್ತರ ಭಾರತೀಯರನ್ನು ಹೆದರಿಸುವ ಅವಕಾಶ ಬಳಸಿಕೊಳ್ಳುತ್ತಿದ್ದಾರೆ. ಹಿಂದಿ ಭಾಷಿಕರನ್ನು ಹೆದರಿಸಿ ಬದುಕಿದಂತೆಯೇ ಕನ್ನಡ, ತೆಲುಗು, ತಮಿಳು, ಮಲಯಾಳಂ ಭಾಷಿಕರನ್ನೂ ಬೆದರಿಸಿ ಬೇಳೆ ಬೇಯಿಸಿಕೊಳ್ಳಬಹುದು ಅಂದುಕೊಂಡಿದ್ದಾರೆ. ನೀವು ಹಿಂದಿಯ ಬಗ್ಗೆ ಹೆದರಬೇಕಿಲ್ಲ, ಬದಲಾಗಿ ಹಿಂದಿಯ ಬಗ್ಗೆ ಕರುಣೆ ಹೊಂದಬೇಕಾಗಿದೆ. ಯಾಕೆಂದರೆ ಹಿಂದಿ ಭಾಷಿಕ ನಾಯಕರು ಹಿಂದಿ ಜನರ ಬದುಕನ್ನು ಬರ್ಬಾದ್ ಮಾಡುತ್ತಿದ್ದಾರೆ.

ಹಿಂದಿ ಭಾಷಿಕರಾಗಿದ್ದು ಹಿಂದಿ ಹೇರಿಕೆ ಮಾಡುವ ನಾಯಕರಿಗೆ ಹಿಂದಿ ಭಾಷಿಕ ಜನರಿಗೆ ಹಿಂದಿಯಲ್ಲಿ ಹೇಳಲು ಏನೂ ಉಳಿದಿಲ್ಲ. ಆ ಕಾರಣಕ್ಕಾಗಿ ಕನ್ನಡ, ತೆಲುಗು, ಮಲಯಾಳಂ, ತಮಿಳು, ಕೊಂಕಣಿ ಜನರಿಗೆ ಹಿಂದಿಯ ಹೆಸರಲ್ಲಿ ಬೆದರಿಸುತ್ತಿದ್ದಾರೆ. ಮಧ್ಯಪ್ರದೇಶ, ರಾಜಸ್ಥಾನ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಬಿಹಾರ ರಾಜ್ಯಗಳನ್ನು ಹಿಂದಿ ರಾಜ್ಯಗಳು ಎಂದು ಗುರುತಿಸಲಾಗುತ್ತಿದೆ. ಈ ಹಿಂದಿ ರಾಜ್ಯಗಳಲ್ಲಿ ಯುವಜನರಿಗೆ ಬದುಕು ಕಟ್ಟಿಕೊಡುವ, ತಲೆ ಎತ್ತಿ ನಡೆಯುವಂತೆ ಮಾಡುವ ಒಂದಾದರೂ ವಿಶ್ವವಿದ್ಯಾನಿಲಯಗಳು ಇವೆಯೇ? ಹಾಗಾಗಿಯೇ ಈ ಹಿಂದಿ ಪ್ರದೇಶಗಳಲ್ಲಿನ ಯುವಜನತೆ ತಮ್ಮ ಶಾಲೆಯಲ್ಲಿ ಉತ್ತೀರ್ಣರಾಗುವ ಮೊದಲೇ ಸಾಮಾನು ಸರಂಜಾಮುಗಳನ್ನು ಪ್ಯಾಕ್ ಮಾಡಿ ದಕ್ಷಿಣದ ಹಿಂದಿಯೇತರ ರಾಜ್ಯಗಳತ್ತಾ ಗುಳೆ ಹೊರಡಬೇಕಾಗುತ್ತದೆ. ಆದ್ದರಿಂದ ಹಿಂದಿ ಹೆಸರಿನ ಬೆದರಿಕೆ ಅನ್ನೋದು ಟೊಳ್ಳು ಅಸ್ತ್ರ. ಅದಕ್ಕೆ ಹೆದರಬೇಕಿಲ್ಲ.

ಜಿ.ಎನ್. ದೇವಿಯವರು ಬರೆದಂತೆ, ನಾವೆಲ್ಲ ನಮ್ಮೊಳಗೆ ಸುಧಾರಣೆಯನ್ನು ತರಬೇಕಿದೆ. ನಮ್ಮೊಳಗೆ ರಾಜಿಗಳನ್ನು ಕಡಿಮೆಗೊಳಿಸಿ ನಮ್ಮೊಳಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನಮಗೆ ನಾವೇ ಅಳವಡಿಸಿಕೊಳ್ಳಬೇಕಿದೆ. ನಮ್ಮ ನೈತಿಕ ಬಲ ಕುಸಿಯುತ್ತಿರುವ ದಿನಗಳಿವು. ಈಗ ನಮ್ಮನ್ನು ಪ್ರತಿನಿಧಿಸುವ ವ್ಯವಸ್ಥೆಯ ನಾಯಕರಲ್ಲಿ ಪ್ರಜಾಸತ್ತಾತ್ಮಕ ಧೋರಣೆಗಳಾಗಲೀ, ಆ ಪ್ರಕ್ರಿಯೆಗಳಲ್ಲಾಗಲೀ ಇಲ್ಲ. ಅವರ ನಾಯಕರಲ್ಲಿ ನೈತಿಕ ಬಲವೂ ಇಲ್ಲ. ನಾವು ನೈತಿಕತೆಯನ್ನು ಬೆಳೆಸಿಕೊಳ್ಳಬೇಕಿದೆ. ಎಂತಹ ಟೀಕೆ, ಹಲ್ಲೆಗಳು ಎದುರಾದರೂ ಗಾಂಧಿ ಏಕಾಂಗಿಯಾಗಿ ದೇಶದಾದ್ಯಂತ ಸಂಚರಿಸಿದ್ರು ಮತ್ತು ಚಳುವಳಿ ಕಟ್ಟಿದ್ರು. ಸಮಾಜ ಪ್ರಕ್ಷುಬ್ಧಗೊಂಡಿದ್ದರೂ, ಹಿಂದೂ ಮುಸ್ಲಿಂ ಗಲಾಟೆಗಳು ನಡೆಯುತ್ತಿದ್ದರೂ ಅವರ ಮಧ್ಯೆ ಗಾಂಧಿ ಹೋಗುತ್ತಿದ್ದರು ಎಂದರೆ ಅದಕ್ಕೆ ಕಾರಣ ಅವರ ನೈತಿಕ ಬಲ. ಹಿಂದೂಗಳು ಮುಸ್ಲೀಮರನ್ನೂ, ಮುಸ್ಲೀಮರು ಹಿಂದೂಗಳ ಮೇಲೂ ಹಲ್ಲೆ ಮಾಡುತ್ತಿದ್ದ ಸಂಧರ್ಭದಲ್ಲಿ ನಾನು ಹಿಂದೂವೂ ಹೌದು, ಪಾರ್ಸಿಯೂ ಹೌದು, ಮುಸ್ಲೀಮನೂ ಹೌದು ಎಂದು ಗಾಂಧೀಜಿ ಧೈರ್ಯದಿಂದ ಘೋಷಿಸಿಕೊಂಡರು. ಈಗಿನ ದೇಶದ ನಾಯಕ ಈ ರೀತಿ ನಾಟಕಕ್ಕಾದರೂ ಘೋಷಣೆ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಈ ನಾಯಕರ ಬಳಿ ನೈತಿಕತೆಯೂ ಇಲ್ಲ, ಗಾಂಧಿಯಿಂದಲೂ ಅವರು ಬಹಳ ದೂರ ಹೋಗಿದ್ದಾರೆ. ಆದ್ದರಿಂದ ನಾವು ನಮ್ಮ ಮಧ್ಯೆಯೇ ಪ್ರಜಾಸತ್ತಾತ್ಮಕ ಮತ್ತು ನೈತಿಕ ಮೌಲ್ಯಗಳುಳ್ಳ ನಾಯಕನನ್ನು ಸೃಷ್ಟಿಸಬೇಕಿದೆ.

ನಾವು ನಮ್ಮೊಳಗೇ ಪ್ರಜಾಸತ್ತಾತ್ಮಕತೆ ಮತ್ತು ನೈತಿಕತೆಯನ್ನು ಬೆಳೆಸಿಕೊಂಡು ನಮಗೆ ಬೇಕಿರುವ ಸ್ವಾತಂತ್ರ್ಯವನ್ನು ನಾವೇ ಕೇಳುವಂತಾಗಬೇಕು. ಇಲ್ಲದೇ ಇದ್ದರೆ ನಾವು ಪ್ರಜಾಪ್ರಭುತ್ವದ ಆಶಯಗಳು, ಸಿದ್ಧಾಂತಗಳನ್ನು ಜಾರಿ ಮಾಡಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವವರನ್ನು ಅಧಿಕಾರದಿಂದ ಒದ್ದೋಡಿಸುವ ಮತ್ತು ಆ ಜಾಗದಲ್ಲಿ ಮತ್ತೊಬ್ಬರನ್ನು ಕೂರಿಸುವ ಅಪೂರ್ವ ಅವಕಾಶ ನಮಗಿದೆ.

ಲೋಕತಂತ್ರದ ಹೆಸರಿನಲ್ಲಿ ಹಲವು ಸುಳ್ಳುಗಳನ್ನು ಹೇಳಲಾಗುತ್ತಿದೆ. ಜನಸಾಮಾನ್ಯರಿಗೆ ಈ ಡೆಮಾಕ್ರಸಿಯಲ್ಲಿ ಏನನ್ನೂ ಮಾಡಿಲ್ಲ. ಚುನಾವಣಾ ಆಯೋಗವಂತೂ ಐದು ವರ್ಷಕ್ಕೊಮ್ಮೆ ಬರುವ ಮತದಾನದ ದಿನವನ್ನು ಅತ್ಯಂತ ಮಹತ್ವದ ದಿನ ಎಂದು ಪ್ರಚಾರ ಮಾಡುತ್ತದೆ. ವಾಸ್ತವವಾಗಿ ಮತದಾನದ ದಿನದ ನಮ್ಮ ಕರ್ತವ್ಯ ಅತ್ಯಂತ ಚಿಕ್ಕದು ಮತ್ತು ಸೀಮಿತವಾಗಿರುವಂತದ್ದು. ಮತದಾನಕ್ಕೂ ಮೊದಲು ಆಯೋಗವೇ ಕೆಲವು ಸಿದ್ದತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಕಳೆದ ಚುನಾವಣೆಯಲ್ಲಿ ಕೊಟ್ಟ ಭರವಸೆಗಳ ಪೈಕಿ ಅರ್ಧದಷ್ಟಾದರೂ ಪೂರೈಕೆ ಆಗಿಲ್ಲದಿದ್ದರೆ ಮತದ ಅರ್ಥವೇನು? ಆಯೋಗ ಈ ಬಗ್ಗೆ ಕೂಡಾ ಮೌಲ್ಯಮಾಪನ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು.

ಯಾವ ಸರಕಾರದಲ್ಲಿ ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗಿದೆಯೋ ಆ ಸರಕಾರದ ಮೌಲ್ಯಮಾಪನವನ್ನು ಹೇಗೆ ಮಾಡಲು ಸಾಧ್ಯವಿದೆ? ಯಾವ ಸಾಧನೆಗಾಗಿ ಹ್ಯೂಸ್ಟನ್ ನಲ್ಲಿ ಇವತ್ತು ಜನ ಜಮಾಯಿಸಿದ್ದಾರೆ? ಮುಂಜಾನೆಯಿಂದಲೇ ಹ್ಯೂಸ್ಟನ್ ಲೈವ್ ಕವರೇಜ್ ಯಾವ ಕಾರಣಕ್ಕಾಗಿ ನಡೆಯುತ್ತಿದೆ? ಕೇವಲ ಬೃಹತ್ ರ್ಯಾಲಿಗಳಿಂದ ಸರಕಾರವೊಂದರ ಮೌಲ್ಯಮಾಪನ ನಡೆಯುವುದಿಲ್ಲ.

ಜನಸಾಮಾನ್ಯರ ಧ್ವನಿ ಎತ್ತರಿಸಲು ಮಾಧ್ಯಮ ಒಂದು ವೇದಿಕೆಯಾಗಿದೆ. ಆದರೆ ಮಾಧ್ಯಮಗಳ ಬಾಗಿಲನ್ನು ಜನಸಾಮಾನ್ಯರಿಗೆ ಬಂದ್ ಮಾಡಲಾಗಿದೆ. ಇದು ಕೇವಲ ಹಿಂದಿ ಪ್ರದೇಶಗಳ ಮಾಧ್ಯಮಗಳ ಪರಿಸ್ಥಿತಿ ಮಾತ್ರವಾಗಿಲ್ಲದೆ ಹಿಂದಿಯೇತರ ಮಾಧ್ಯಮಗಳ ಸ್ಥಿತಿಯೂ ಇದೇ ಆಗಿದೆ. ಟಿವಿಗಳಲ್ಲಿ ಆ್ಯಂಕರ್ ಗಳು ಬಳಸುವ ಭಾಷೆಯನ್ನು ಗಮನಿಸಿದ್ರೆ ಪ್ರಜಾಪ್ರಭುತ್ವ ನಾಶವಾಗುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತದೆ. ಟಿವಿ ಮಾಧ್ಯಮದ ಆ್ಯಂಕರ್ ಗಳು ಜನಪರರನ್ನು ಶತ್ರುಗಳೆಂದೂ, ದೇಶದ್ರೋಹಿಗಳೆಂದೂ, ಪಾಕಿಸ್ತಾನಿಯೆಂದೂ, ಅರ್ಬನ್ ನಕ್ಸಲ್ ಎಂದೂ ಕರೆಯುತ್ತಾರೆ. ಪ್ರೊಫೆಸರ್ ಒಬ್ಬರು ಪ್ರಧಾನಮಂತ್ರಿಗೆ ಪತ್ರ ಬರೆದರೆ ಆತ ಪಾಕಿಸ್ತಾನವನ್ನು ಬೆಂಬಲಿಸುತ್ತಿದ್ದಾನೆ ಎಂದು ಮಾಧ್ಯಮಗಳ ಆ್ಯಂಕರ್ ಯಾವ ಮುಲಾಜೂ ಇಲ್ಲದೆ ಹೇಳುತ್ತಾರೆ. ಈ ಕಾರಣದಿಂದ ನಾವು ಮಾಧ್ಯಮದ ವಿರುದ್ದವೇ ಹೋರಾಟ ರೂಪಿಸಬೇಕಿದೆ. ನೀವೇನಾದರೂ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರೀತಿಸುತ್ತಿದ್ದು ಅದು ಉಳಿಯಬೇಕು ಎಂದುಕೊಂಡಿದ್ದರೆ ಇವತ್ತಿನ ಈ ಮಾಧ್ಯಮಗಳ ವಿರುದ್ದ ಹೋರಾಟ ನಡೆಯಲೇಬೇಕಿದೆ. ಇದು ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಾಗಿದೆ.

ಈಗ ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವ ಸರ್ಕಾರಿ ನೌಕರರು ಪ್ರಧಾನಿ ನರೇಂದ್ರ ಮೋದಿಯವರ ಮತದಾರರೇ ಆಗಿದ್ದಾರೆ. ಈ ಪ್ರತಿಭಟನಾ ರ್ಯಾಲಿಯ ಬಗ್ಗೆ ಮಾಧ್ಯಮಗಳಲ್ಲಿ ಒಂದು ಸಣ್ಣ ಸುದ್ದಿಯಾಗಲೀ, ಧ್ವನಿಯಾಗಲೀ ಕೇಳಿ ಬರಲಿಲ್ಲ. ಮೋದಿಯ ಮತದಾರರೇ ಆಗಿದ್ದ ಈ ಪ್ರತಿಭಟನಾಕಾರರು ತಮ್ಮ ಪ್ರತಿಭಟನೆಯ ವಿಡಿಯೋವನ್ನು ತಾವೇ ಚಿತ್ರಿಸಿಕೊಂಡು ತಮ್ಮ ಗ್ರೂಪುಗಳಲ್ಲಿ ಪ್ರಚಾರ ಮಾಡಿಕೊಂಡರು. ಮಾಧ್ಯಮಗಳ ಪರಿಸ್ಥಿತಿ ಈ ಮಟ್ಟಕ್ಕೆ ಬಂದು ನಿಂತಿದೆ. ಜನ ತಮ್ಮಷ್ಟಕ್ಕೇ ಎದ್ದು ಹೊರ ಬರಲು ಶುರು ಮಾಡಿದ್ದಾರೆ. ಯುವಜನತೆ ಈ ಸರ್ಕಾರದ ವಿರುದ್ದ ಟ್ವಿಟ್ಟರ್ ಟ್ರೆಂಡಿಂಗ್ ಮಾಡುತ್ತಿದ್ದಾರೆ. ಆದರೆ ಪತ್ರಿಕಾ ವರದಿಗಾರರು, ಸಂಪಾದಕರೆಲ್ಲರೂ ಪ್ರಧಾನಿ ನರೇಂದ್ರ ಮೋದಿಯವರು ಪ್ರಧಾನಿಯಾಗಿರೋದು ಈ ದೇಶದ ಸೌಭಾಗ್ಯ ಎಂದುಕೊಂಡಿದ್ದಾರೆ.

ಮಾಧ್ಯಮಗಳು ಪ್ರಧಾನ ಮಂತ್ರಿಯನ್ನು ಹೊಗಳಲು ಬೇರೆ ಬೇರೆ ಅವಕಾಶಗಳಿದೆ. ಅದನ್ನು ಬಳಸಿಕೊಳ್ಳಲಿ. ನಮ್ಮ ಆಕ್ಷೇಪವಿರುವುದು ಪ್ರಧಾನಿ ನರೇಂದ್ರ ಮೋದಿಯವರು ಅವತಾರ ಪುರುಷ ಎಂದು ಮಾಧ್ಯಮಗಳು ಬಿಂಭಿಸುವ ಬಗೆಗೆ. ಯಾರಾದರೂ ನಾನು ಅವತಾರ ಪುರುಷ ಎಂದೋ, ಆ ನಾಯಕನ ಅವತಾರ ಎಂದೋ ಹೇಳಿದರೆ ಅದನ್ನು ನಾವು ವಿರೋಧಿಸಲೇಬೇಕು. ವಿಪರ್ಯಾಸ ಎಂದರೆ ಇವತ್ತು ಪತ್ರಿಕೆ, ಟಿವಿ ಮಾಧ್ಯಮಗಳ ಮಾಲೀಕರು ಮೋದಿಯನ್ನು ಅವತಾರ ಪುರುಷ ಎಂದು ಬಿಂಭಿಸುತ್ತಿದ್ದಾರೆ.

ದೇಶದ ಪ್ರಜ್ಞಾವಂತ ನಾಗರಿಕರಾಗಿ ನಾವು ಮತಗಟ್ಟೆಗೆ ಹೋಗಿ ಓಟು ಹಾಕಿ ಬೆರಳು ತೋರಿಸಿ ಫೋಟೋ ತೆಗೆಯುವುದನ್ನೇ ನಮ್ಮ ಆಧ್ಯ ಕರ್ತವ್ಯ ಎಂದುಕೊಂಡಿದ್ದೇವೆ. ಈ ಬೆರಳು ತೋರಿಸೋ ಕೆಲಸವೇ ಅಸಭ್ಯತನದ್ದು. ಓಟು ಹಾಕಿರುವ ಬೆರಳು ತೋರಿಸಿ ಸೆಲ್ಫಿ ಕಳಿಸಿ ಎಂದು ಹೇಳುವ ಮೂಲಕ ನಿಜವಾದ ಮತ ಚಲಾವಣೆಯ ಹಿಂದಿರುವ ಕರ್ತವ್ಯವನ್ನು ಮರೆಸಲಾಗುತ್ತಿದೆ. ಯಾರು ಸರಕಾರ ನಡೆಸಬೇಕು? ದೇಶವನ್ನು ಯಾರು ಆಳಬೇಕು ಎಂದು ಚರ್ಚಿಸುವ ಹೊತ್ತಿನಲ್ಲಿ ಓಟಿಂಗ್ ಫಿಂಗರ್ ಸೆಲ್ಫಿಯನ್ನು ಟ್ರೆಂಡ್ ಅನ್ನು ಮುನ್ನಲೆಗೆ ತರಲಾಗುತ್ತೆ. ಈ ಭ್ರಮೆಗಳಿಗೆ ನಾವು ಸಿಲುಕಬಾರದು. ಮತದಾರನ ನಿಜವಾದ ಕರ್ತವ್ಯ ಇರುವುದು ಮತ ಚಲಾವಣೆಯ ಬಳಿಕ. ಚುನಾಯಿತ ಸರಕಾರವೊಂದು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದೆಯಾ ಎಂದು ಗಮನಿಸಿ ಪ್ರತಿಕ್ರಿಯೆ ನೀಡುವುದು ಮತದಾರರ ಪ್ರಮುಖ ಕರ್ತವ್ಯವಾಗಿದೆ.

ಒಂದಂತೂ ನಮಗೆ ಸ್ಪಷ್ಟವಿರಬೇಕು. ಪ್ರಧಾನಿ ನರೇಂದ್ರ ಮೋದಿಗೆ ಮತ ಹಾಕಿದ್ದು ನಮ್ಮ ಜನಗಳು. ಆದರೆ ಮೋದಿ ಸುತ್ತಾ ಮಾಧ್ಯಮಗಳು ಯಾಕೆ ಕುಣಿಯುತ್ತಿವೆ? ‘ಮೋದಿಯನ್ನು ಮೋದಿಜೀ ಮಾಡಿದ್ದೇ ಯುವಕರು. ಅದೇ ಯುವಕರು ಮೋದಿಗೆ ಏನೋ ಹೇಳಬೇಕು ಎಂದುಕೊಂಡರೆ ಈ ಮಾಧ್ಯಮಗಳು ಅಡ್ಡಿಯಾಗೋದು ಯಾಕೆ? ಭಾರತದ ಈಗಿನ ಮಾಧ್ಯಮಗಳು ಪ್ರಜಾಪ್ರಭುತ್ವವನ್ನು ಹತ್ಯೆ ಮಾಡುತ್ತಿವೆ.’

ಅವರು ದೊಡ್ಡ ದೊಡ್ಡ ಭಾಷಣಗಳನ್ನು ಮಾಡಲಾರಂಬಿಸಿದ್ದಾರೆ. ಕಾಶ್ಮೀರದ ಜನರನ್ನು ನಾವು ಅಪ್ಪಿಕೊಳ್ಳಬೇಕಿದೆ ಎನ್ನುತ್ತಾರೆ. ಕಾಶ್ಮೀರದಲ್ಲಿ ಏನಾಗ್ತಿದೆ? ಭಾರತದ ಸಂಸದರೊಬ್ಬರು ಕಾಶ್ಮೀರಕ್ಕೆ ತೆರಳಬೇಕಾದರೆ ಸುಪ್ರಿಂ ಕೋರ್ಟ್ ವಿಸಾ ನೀಡುತ್ತೆ. ಹೋಗುವುದಾದರೆ ರ್ಯಾಲಿ ಮಾಡುವಂತಿಲ್ಲ, ಇಂತಿಷ್ಟೇ ಜನ ಹೋಗಬೇಕು ಎಂದು ಕಾಶ್ಮೀರ ಮುಖ್ಯ ಮಂತ್ರಿಯಾಗಿದ್ದ ಗುಲಾಂ ನಬೀ ಅಜಾದ್‌ಗೆ ಸುಪ್ರಿಂ ಕೋರ್ಟ್ ಸೂಚನೆ ಕೊಟ್ಟು ಕಳಿಸುತ್ತೆ. ಗುಲಾಂ ನಬೀ ಆಜಾದ್ 5000 ಜನರನ್ನು ಆಲಂಗಿಸಿದರೆ ಬಹುಶಃ ಅವರನ್ನು ಜೈಲಿಗೆ ಹಾಕಲಾಗುತ್ತೆ. ಪ್ರಧಾನ ಮಂತ್ರಿಗಳು ಕಾಶ್ಮೀರಿಗಳನ್ನು ಆಲಂಗಿಸಲು ಹೇಳಿದ್ದಾರೆ ಎಂದು ಸುಪ್ರಿಂ ಕೋರ್ಟ್ ಗೆ ಮಾಹಿತಿ ಕೊಟ್ಟು ಹೋಗುವುದು ಉತ್ತಮ ಅನ್ನಿಸುತ್ತೆ. ನಿಮಗೆ ಕಾಶ್ಮೀರಕ್ಕೆ ಹೋಗಲೂ ಅವಕಾಶ ಇಲ್ಲದ ಪರಿಸ್ಥಿತಿ ಸೃಷ್ಟಿಸಿ ಕಾಶ್ಮೀರಿಗಳನ್ನು ಅಪ್ಪಿಕೊಳ್ಳಿ ಎಂದರೆ ಹೇಗೆ? ‘ಕಾಶ್ಮೀರಿಗಳನ್ನು ಅಪ್ಪಿಕೊಳ್ಳೋದಕ್ಕೂ ಮೊದಲು ನಿಮ್ಮ ಮನೆಯವರನ್ನು, ತಂದೆ ತಾಯಿ, ಪತ್ನಿ, ಮಕ್ಕಳನ್ನು ಅಪ್ಪಿ ಸಂತೈಸಿ ಮಾತನಾಡುವ ಮನೋಭಾವ ಬೆಳೆಸಿಕೊಳ್ಳಿ.’ ಇವರ ಕಾಶ್ಮೀರ ಪ್ರೇಮದ ಹಿಂದಿರೋದು ಉತ್ತರ ಭಾರತೀಯರನ್ನು ಭಾವನಾತ್ಮಕವಾಗಿ ಮೋಸ ಮಾಡುವುದೇ ಆಗಿದೆ. ಈ ಕಾರಣಕ್ಕಾಗಿಯೇ ನಾನು ಉತ್ತರ ಭಾರತವನ್ನು ಪೀಡಿತ ಭಾರತ ಎನ್ನುತ್ತೇನೆ. ಹಿಂದಿ ಭಾಷಿಕ ಪ್ರದೇಶಗಳ ಆಸೆ ಆಕಾಂಕ್ಷೆಗಳನ್ನು ಖತಂ ಮಾಡಲು ಈ ರೀತಿಯ ವಿಷಯಗಳನ್ನು ಮುನ್ನಲೆಗೆ ತರಲಾಗುತ್ತದೆ. ಇದರ ಮುಂದುವರೆದ ಭಾಗವಾಗಿ ಅಕ್ಟೋಬರ್ ನಿಂದ ರಾಮಮಂದಿರ ನಾಟಕ ನಡೆಯಲಿದೆ. ಇದರ ಪೂರ್ವಸಿದ್ಧತೆ ಈಗಾಗಲೇ ಟಿವಿ ಮೂಲಕ ಪ್ರಾರಂಭವಾಗಿದೆ. ದಿನಬೆಳಗಾದರೆ ಟಿವಿಗಳಲ್ಲಿ ರಾಮಮಂದಿರ ಚರ್ಚೆ ಶುರುವಾಗಿದೆ. ಹಾಗಾದರೆ ಮಾಧ್ಯಮಗಳು ಏನು ಮಾಡಲು ಹೊರಟಿವೆ? ಸಮಾಜವನ್ನು ವಿಘಟನೆ ಮಾಡುವ ಮೂಲಕ ಹಿಂದೂ ಮುಸ್ಲೀಮರ ಮಧ್ಯೆ ಜಗಳ ತಂದಿಕ್ಕಲು ಹೊರಟಿದೆಯೇ?

‘ಕಾಶ್ಮೀರವನ್ನು ಈಗ ಸ್ವರ್ಗ ಮಾಡಲು ಹೊರಟಿದ್ದಾರೆ. ಸ್ವರ್ಗ, ರಾಮ, ಶಿವ, ಬ್ರಹ್ಮನನ್ನು ಸೃಷ್ಟಿ ಮಾಡುವುದು ಸರಕಾರದ ಕೆಲಸವೇ? ಹಾಗಾದರೆ ಉತ್ತರ ಪ್ರದೇಶವನ್ನು ಒಮ್ಮೆ ಸ್ವರ್ಗ ಮಾಡಿಬಿಡಿ! ಕನಿಷ್ಟ ಸೆಮಿ ಸ್ವರ್ಗವನ್ನಾದರೂ ಮಾಡಿ!’ ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಯೂನಿವರ್ಸಿಟಿ ಆರಂಬಿಸಿ. ಎರಡು ಒಳ್ಳೆಯ ಆಸ್ಪತ್ರೆ ಸ್ಥಾಪಿಸಿ. ಈಗಿನ ಯುವಕರು ಈ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಹಿಂದೂ ಮುಸ್ಲಿಂ ದ್ವೇಷ ಹರಡುವ ಬಗ್ಗೆ ಚರ್ಚೆ ಮಾಡುತ್ತಾರೆ. ವಿಪರ್ಯಾಸ ಎಂದರೆ ಈ ಗಲಭೆಗಳಲ್ಲೇ ಈ ಯುವಕರು ಜೀವನವನ್ನು ಅಂತ್ಯಗೊಳಿಸುತ್ತಾರೆ.

ಉತ್ತರ ಪ್ರದೇಶ, ಬಿಹಾರವನ್ನು ನರಕವಾಗಿಸುವುದಕ್ಕಾಗಿ,

ಪುಟ 10 ಕ್ಕೆ

ಹ್ಯೂಸ್ಟನ್‌ನಲ್ಲಿ ಮೋದಿ–ಟ್ರಂಪ್ ಶೋ



ನರೇಂದ್ರ ಮೋದಿ ಹ್ಯೂಸ್ಟನ್‌ನಲ್ಲಿ 50,000 ಭಾರತೀಯ–ಅಮೆರಿಕನ್ನರಿದ್ದ ಸಭೆಯಲ್ಲಿ ಅವರ ಎದುರು ತೋರಿದ ಪ್ರದರ್ಶನ ಮತ್ತೊಮ್ಮೆ ಮೋದಿಯವರು ಭಾರತ–ಅಮೆರಿಕಾ ಸಂಬಂಧಗಳೊಳಕ್ಕೆ ತಂದಿರುವ ಅಡಿಯಾಳುತನವನ್ನು ಎತ್ತಿ ತೋರಿದೆ. ಆ ಸ್ಟೇಡಿಯಂನಲ್ಲಿ ಮೋದಿ–ಟ್ರಂಪ್ ಜೊತೆಯಾಗಿ ಕಾಣಿಸಿಕೊಂಡದ್ದು, ಮುಂಬರುವ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಟ್ರಂಪ್‌ಗೆ ಭಾರತೀಯ ಮೂಲದ ಅಮೆರಿಕನ್ನರನ್ನು ಆಕರ್ಷಿಸಲು ಕೊಟ್ಟಿರುವ ಒಂದು ವೇದಿಕೆಯಲ್ಲದೆ ಬೇರೇನೂ ಅಲ್ಲ.

ಮೋದಿ 'ಅಬ್ ಕೀ ಬಾರ್ ಟ್ರಂಪ್ ಸರ್ಕಾರ್' ಎನ್ನುವ ಘೋಷಣೆಯನ್ನು ಪುನರಾವರ್ತಿಸುತ್ತ ಟ್ರಂಪ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅನುಮೋದಿಸಿದಂತೆಯೇ ಆಗಿದೆ. ಈ ಮೂಲಕ ಅವರು ಹೀಗೆ ಮಾಡಿದ ಮೊದಲ ಭಾರತೀಯ ಪ್ರಧಾನ ಮಂತ್ರಿಯಾಗಿದ್ದಾರೆ. ಇದು ಈ ಹಿಂದಿನ ಅಧ್ಯಕ್ಷೀಯ ಚುನಾವಣೆಗಳಲ್ಲಿ ಟ್ರಂಪ್ ಅವರೇ ಕೊಟ್ಟಿದ್ದ ಘೋಷಣೆ.

ಟ್ರಂಪ್‌ಗೆ ನರೇಂದ್ರ ಮೋದಿಯವರ ರಾಜಕೀಯ ಶೋದಲ್ಲಿ ಸೇರಿಕೊಂಡು ಅವರ ಮೇಲೆ ಪ್ರಶಂಸೆಯ ಮಳೆಗರೆಯುವುದು ಪ್ರಯೋಜನಕಾರಿಯೇ ಆಗಿದೆ. ಏಕೆಂದರೆ ಈ ಶೋ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿ ನಡೆದಿದೆ. ಟೆಕ್ಸಾಸ್ ಸಾಮಾನ್ಯವಾಗಿ ರಿಪಬ್ಲಿಕನ್ ಪಕ್ಷದ ರಾಜ್ಯವಾಗಿದ್ದು, ಈಗೀಗ ಡೆಮಾಕ್ರಟಿಕ್ ಪಕ್ಷ ಸ್ವಲ್ಪ ಮುನ್ನಡೆ ತೋರಿಸುತ್ತಿದೆ. ಆದ್ದರಿಂದ ಟ್ರಂಪ್ ಎಷ್ಟು ಸಾಧ್ಯವೋ ಅಷ್ಟು ಹೆಚ್ಚುವರಿ ಬೆಂಬಲ ಗಳಿಸಲು ಕಾತುರರಾಗಿದ್ದರು.

ಮೋದಿ ಮತ್ತು ಅವರ ಸಲಹಾಗಾರರು, ವಿದೇಶಾಂಗ ಮಂತ್ರಿ ಜೈಶಂಕರ್ ಅಂತವರು ಟ್ರಂಪ್‌ಗೆ ಬೆಂಬಲದ ಪ್ರದರ್ಶನ ಟ್ರಂಪ್ ಕಾಶ್ಮೀರದಲ್ಲಿನ ಘಟನೆಗಳ ಬಗ್ಗೆ ಮೌನವಾಗಿರುವಂತೆ ಮಾಡಲು ಮತ್ತು ಈ ಕುರಿತಂತೆ ಇಮ್ರಾನ್ ಖಾನ್ ಅವರ ನಮ್ರ ಕೋರಿಕೆಗಳಿಗೆ ಕಿವಿಗೊಡದಂತೆ ಮಡಲು ಒಂದು ಶರತ್ತು ಎಂದು ನಿರೀಕ್ಷಿಸಿದ್ದರು. ವ್ಯಾಪಾರ ಕುರಿತಂತೆ ಒಂದು ಒಪ್ಪಂದವನ್ನು ಪಡೆಯುವುದು ಇಂತಹ ಪ್ರದರ್ಶನದ ಇನ್ನೊಂದು ಗಳಿಕೆ ಎಂದೂ ಅವರೆಲ್ಲ ನಿರೀಕ್ಷಿಸಿದ್ದರು.

ಆದರೆ ಟ್ರಂಪ್ ಒಲವುಗಳ ಬಗ್ಗೆ ಜೂಜಾಟ ಮತ್ತು ಅವರನ್ನು ನಮ್ರಗೊಳಿಸುವುದು ಒಂದು ಅಪಾಯ ತುಂಬಿರುವ ವ್ಯವಹಾರ. ಭಾರತ ಪ್ರಸ್ತಾವಿತ ವ್ಯಾಪಾರ ವ್ಯವಹಾರಕ್ಕೆ ಸಿಹಿಲೇಪಿಸಲು



ಭಾರತದ ಪೆಟ್ರೋನೆಟ್ ಅಮೆರಿಕಾದ ಟೆಲ್ಲುರಿಯನ್ ಕಂಪನಿಯಲ್ಲಿ 2.5 ಬಿಲಿಯನ್ ಡಾಲರುಗಳ ವ್ಯಾಪಾರ ಒಪ್ಪಂದವನ್ನು ಸೂಚಿಸಿತು. ಇದಕ್ಕೆ ಹ್ಯೂಸ್ಟನ್‌ನಲ್ಲಿ ಒಂದು ಸಮಕಾಲಿಕಗೊಳಿಸಿದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಯಿತು. ಆದರೂ ನ್ಯೂಯಾರ್ಕ್‌ನಲ್ಲಿ ಮೋದಿ ಮತ್ತು ಟ್ರಂಪ್ ಅಧಿಕೃತವಾಗಿ ಮಾತುಕತೆಗೆ ಭೇಟಿಯಾದ ನಂತರ ಯಾವ ವ್ಯಾಪಾರ ಒಪ್ಪಂದದ ಪ್ರಕಟಣೆಯೂ ಆಗಲಿಲ್ಲ. ಮಾತುಕತೆಗಳ ಅಂತಿಮ ಘಟ್ಟದಲ್ಲಿ ವಾಣಿಜ್ಯ ಮಂತ್ರಿ ಪೀಯೂಷ್ ಗೋಯಲ್ ಹಾಜರಿದ್ದರೂ ವಿವಿಧ ಪ್ರಶ್ನೆಗಳ ಮೇಲೆ ಅಮೆರಿಕ ತನ್ನ ನಿಲುವನ್ನು ಸಡಿಲಗೊಳಿಸಲಿಲ್ಲ. ಹೀಗೆ ಒಂದಷ್ಟು ಸಾಮಗ್ರಿಗಳ ಮೇಲೆ ಭಾರತ ಹೆಚ್ಚಿನ ಸುಂಕದರಗಳನ್ನು ಎದುರಿಸಬೇಕಾಗಿದೆ, ಮತ್ತು ಅಮೆರಿಕಾ ಇನ್ನಷ್ಟು ರಿಯಾಯ್ತಿಗಳನ್ನು ಮತ್ತು ಭಾರತದ ಮಾರುಕಟ್ಟೆ ಪ್ರವೇಶಕ್ಕೆ ಹೆಚ್ಚಿನ ಅವಕಾಶಗಳನ್ನು ಆಗ್ರಹಿಸುತ್ತಿದೆ.

ಮೋದಿ ಸರಕಾರ ಭಾರತವನ್ನು ಏಷ್ಯಾದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಭೌಗೋಳಿಕ–ರಾಜಕೀಯ ಕಾರ್ಯವ್ಯೂಹದಲ್ಲಿ ಸಮಗ್ರೀಕರಿಸಲು ಯಾವ ಮಟ್ಟಕ್ಕೂ ಹೋಗಲು ಕೂಡ ಸಿದ್ಧವಾಗಿದೆ. ಮೊದಲು ಜಂಟಿ ಕಾರ್ಯದರ್ಶಿಗಳ ಚತುಷ್ಕೋಣ ವೇದಿಕೆ (ಕ್ವಾಡ್ರಿಲೇಟರಲ್ ಫೋರಂ)ಯಲ್ಲಿ ಸೇರಿಕೊಳ್ಳಲು ಒಪ್ಪಿದ ಭಾರತ, ನಂತರ ಅದನ್ನು ನ್ಯೂಯಾರ್ಕ್‌ನಲ್ಲಿ ಮೇಲ್ದರ್ಜೆಗೇರಿಸಲು, ಈ ನಾಲ್ಕು ದೇಶಗಳ, ಅಂದರೆ ಅಮೆರಿಕ, ಜಪಾನ್, ಆಸ್ಟ್ರೇಲಿಯ ಮತ್ತು ಭಾರತದ ವಿದೇಶಾಂಗ ಮಂತ್ರಿಗಳ ಮಟ್ಟದ ಸಭೆಗೇರಿಸಲು ಒಪ್ಪಿತು. ಅಮೆರಿಕಾದೊಡನೆ ಸಂಬಂಧಗಳಲ್ಲಿ ಮೋದಿ ಸರಕಾರದ ಪಾಕಿಸ್ತಾನ–ಕೇಂದ್ರಿತ ನಿಲುವು ನಿಷ್ಪ್ರಯೋಜಕ ಎಂಬುದು ಅಧ್ಯಕ್ಷ ಟ್ರಂಪ್ ಪ್ರಧಾನ ಮಂತ್ರಿ ಇಮ್ರಾನ್ ಖಾನ್‌ರೊಂದಿಗೆ ಭೇಟಿಯಾದಾಗ ವೇದ್ಯವಾಯಿತು. ಟ್ರಂಪ್ ಎರಡೂ ದೇಶಗಳ ಮುಖಂಡರು ಬಯಸಿದರೆ, ತಾನು ಕಾಶ್ಮೀರದ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂದು ಮಗದೊಮ್ಮೆ ಸಾರಿದರು. ಅಫಘಾನಿಸ್ತಾನದಿಂದ ಅಮೆರಿಕನ್ ಪಡೆಗಳನ್ನು ಹಿಂತೆಗೆದುಕೊಳ್ಳುವ ಟ್ರಂಪ್ ಗುರಿ ಇರುವ ವರೆಗೆ, ಅವರು ಪಾಕಿಸ್ತಾನವನ್ನು ಒಂದು ಮಿತ್ರದೇಶವಾಗಿ ಇಟ್ಟುಕೊಳ್ಳಲೇ ಬೇಕಾಗಿದೆ.

ಹ್ಯೂಸ್ಟನ್‌ನಲ್ಲಿ ಟ್ರಂಪ್‌ಗೆ ಬೆಂಬಲವಾಗಿ ನರೇಂದ್ರ ಮೋದಿಯವರ ಆಡಂಬರಭರಿತ ಪ್ರದರ್ಶನಕ್ಕೆ ಇನ್ನೊಂದು ಕಾರಣವೂ ಇದೆ. ಇಸ್ರೇಲಿನ ಬೆಂಜಮಿನ್ ನೇತನ್ಯಾಹು ರಂತೆ, ನರೇಂದ್ರ ಮೋದಿ ಕೂಡ ಡೊನಾಲ್ಡ್ ಟ್ರಂಪ್‌ರವರ ಆತ್ಮದ ಗೆಳೆಯ. ಇವರೆಲ್ಲರೂ ಒಂದು ಬಲಪಂಥೀಯ ಜನಾಂಗೀಯ ರಾಷ್ಟ್ರವಾದೀ ಮಾದರಿಯ ಪ್ರಕೃತಿಯನ್ನು ಹೊಂದಿರುವವರು. ಮೋದಿಯವರು ಟ್ರಂಪ್‌ಗೆ ತನ್ನ ನಿಷ್ಠೆಯನ್ನು ಸಾರಿ ತನ್ನದೇ ಪ್ರತಿಕ್ರಿಯಾವಾದಿ ಕಣ್ಣೋಟವನ್ನು ಪ್ರಕಟಗೊಳಿಸಿದ್ದಾರೆ.


ಮೋದಿ ಮತ್ತು ಅವರ ಸಲಹಾಗಾರರು, ವಿದೇಶಾಂಗ ಮಂತ್ರಿ ಜೈಶಂಕರ್ ಅಂತವರು ಟ್ರಂಪ್‌ಗೆ ಬೆಂಬಲದ ಪ್ರದರ್ಶನ ಟ್ರಂಪ್ ಕಾಶ್ಮೀರದಲ್ಲಿನ ಘಟನೆಗಳ ಬಗ್ಗೆ ಮೌನವಾಗಿರುವಂತೆ ಮಾಡಲು ಮತ್ತು ಈ ಕುರಿತಂತೆ ಇಮ್ರಾನ್ ಖಾನ್ ಅವರ ನಮ್ರ ಕೋರಿಕೆಗಳಿಗೆ ಕಿವಿಗೊಡದಂತೆ ಮಡಲು ಒಂದು ಶರತ್ತು ಎಂದು ನಿರೀಕ್ಷಿಸಿದ್ದರು. ವ್ಯಾಪಾರ ಕುರಿತಂತೆ ಒಂದು ಒಪ್ಪಂದವನ್ನು ಪಡೆಯುವುದು ಇಂತಹ ಪ್ರದರ್ಶನದ ಇನ್ನೊಂದು ಗಳಿಕೆ ಎಂದೂ ಅವರೆಲ್ಲ ನಿರೀಕ್ಷಿಸಿದ್ದರು.



ಪ್ರಕಾಶ ಕಾರಟ್

ಆದರೂ ನ್ಯೂಯಾರ್ಕ್‌ನಲ್ಲಿ ಮೋದಿ ಮತ್ತು ಟ್ರಂಪ್ ಅಧಿಕೃತವಾಗಿ ಮಾತುಕತೆಗೆ ಭೇಟಿಯಾದ ನಂತರ ಯಾವ ವ್ಯಾಪಾರ ಒಪ್ಪಂದದ ಪ್ರಕಟಣೆಯೂ ಆಗಲಿಲ್ಲ.

ಅಮೆರಿಕಾದೊಡನೆ ಸಂಬಂಧಗಳಲ್ಲಿ ಮೋದಿ ಸರಕಾರದ ಪಾಕಿಸ್ತಾನ–ಕೇಂದ್ರಿತ ನಿಲುವು ನಿಷ್ಪ್ರಯೋಜಕ ಎಂಬುದು ಅಧ್ಯಕ್ಷ ಟ್ರಂಪ್ ಪ್ರಧಾನ ಮಂತ್ರಿ ಇಮ್ರಾನ್ ಖಾನ್‌ರೊಂದಿಗೆ ಭೇಟಿಯಾದಾಗ ವೇದ್ಯವಾಯಿತು. ಟ್ರಂಪ್ ಎರಡೂ ದೇಶಗಳ ಮುಖಂಡರು ಬಯಸಿದರೆ, ತಾನು ಕಾಶ್ಮೀರದ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂದು ಮಗದೊಮ್ಮೆ ಸಾರಿದರು!



ಕೃಪೆ: ನವತೆಲಂಗಾಣ



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ ಹಿಂದಿ ನ್ಯೂಸ್

ಅಕ್ಟೋಬರ್ 10 ರಿಂದ 16-ಪ್ರತಿಭಟನಾ ವಾರ: ಎಡಪಕ್ಷಗಳ ರಾಷ್ಟ್ರೀಯ ಸಮಾವೇಶದ ಕರೆ



"ರಾಜಕೀಯ ಬಲಪಂಥದ ಸವಾಲನ್ನು ರಾಜಕೀಯ ಎಡಪಂಥ ಮಾತ್ರವೇ ಎದುರಿಸಲು ಸಾಧ್ಯ" –ಸೀತಾರಾಮ್ ಯೆಚುರಿ

ಕಳೆದ ವಾರದ ಸಂಚಿಕೆಯಲ್ಲಿ ಪ್ರಕಟವಾಗಿರುವಂತೆ ಸಪ್ಟೆಂಬರ್ 20ರಂದು ನವದೆಹಲಿಯಲ್ಲಿ ನಡೆದ ಎಡಪಕ್ಷಗಳ ರಾಷ್ಟ್ರೀಯ ಸಮಾವೇಶ ಅಕ್ಟೋಬರ್ 10 ರಿಂದ 16 ರವರೆಗೆ ಒಂದು ವಾರ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಲು ಕರೆ ನೀಡಿದೆ. ಅಕ್ಟೋಬರ್ 16ರಂದು ಬೃಹತ್ ಮತಪ್ರದರ್ಶನಗಳು ನಡೆಯುತ್ತವೆ.

ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಆಳಗೊಳ್ಳುತ್ತಿರುವ ಮತ್ತು ಜನಗಳ ಸಂಕಟಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ) , ಸಿಪಿಐ, ಸಿಪಿಐ(ಎಂಎಲ್)ಲಿಬರೇಶನ್, ಫಾರ್ವರ್ಡ್ ಬ್ಲಕ್ ಮತ್ತು ಆರ್‌ಎಸ್‌ಪಿ ಈ ಸಮಾವೇಶವನ್ನು ಏರ್ಪಡಿಸಿದ್ದವು.

ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸುವ , ಮತ್ತು ಬಡವರನ್ನು ಮತ್ತಷ್ಟು ಬಡವರಾಗಿಸುವ ಪ್ರವೃತ್ತಿ ಕೊನೆಗೊಳ್ಳಬೇಕು ಎಂದರು. ಆನಗಳ ಜೀವನಾಧಾರಗಳ ಮೇಲೆ ದಾಳಿಗಳ ವಿರುದ್ಧ ಚಳುವಳಿಯನ್ನು ಬಲಪಡಿಸಲು ಕೈಜೋಡಿಸಬೇಕು ಎಂದು ಇತರ ಪ್ರಜಾಪ್ರಭುತ್ವವಾದಿ ವಿಭಾಗಗಳಿಗೆ ಅವರು ಮನವಿ ಮಾಡಿಕೊಂಡರು.

ಸಿಪಿಐ(ಎಂ)ನ ಹನ್ನನ್ ಮೊಲ್ಲ, ಸಿಪಿಐನ ಪಲ್ಲಬ್ ಸೇನ್‌ಗುಪ್ತ, ಸಿಪಿಐ(ಎಂಎಲ್)ಲಿಬರೇಶನ್‌ನ ಕವಿತಾ ಕೃಷ್ಣನ್, ಫಾರ್ವರ್ಡ್ ಬ್ಲಾಕ್‌ನ ಧರ್ಮೇಂದ್ರ ಮತ್ತು ಆರ್‌ರಸ್‌ಪಿಯ ಕ್ಷಿತಿ ಗೋಸ್ವಾಮಿ ಯವರಿದ್ದ ಅಧ್ಯಕ್ಷ ಮಂಡಳಿ ಸಮಾವೇಶವನ್ನು ನಡೆಸಿ ಕೊಟ್ಟಿತು. ಸಿಪಿಐ(ಎಂ)ನ ಅನುರಾಗ್ ಸಕ್ಸೆನಾ ಸಮಾವೇಶದ ಕರಡು ಠರಾವನ್ನು ಮಂಡಿಸಿದರು.

ಯೆಚುರಿಯವರು ಮಾತನಾಡುತ್ತ ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಬಲಪಂಥಮುನ್ನಡೆ ಸಾಧಿಸುತ್ತಿದೆ ಎಂದರು. ಅದು ವಿವಿಧ ಸ್ವರೂಪಗಳಲ್ಲಿ ವ್ಯಕ್ತಗೊಳ್ಳುತ್ತಿದೆ– ಬಿಜೆಪಿ ಸರಕಾರ ಮತ್ತೆ ಬಂದಿರುವುದು; ಬೀದಿಗಳಲ್ಲಿ ಗುಂಪಾಗಿ ಸಾಯ ಬಡಿಯುವ ಪಡೆಗಳು; ಹುಡುಗಿಯರ ಮಾನಭಂಗ, ಆರೋಪಿಗಳಿಗೆ ಆಳುವ ಮಂದಿಯ ರಕ್ಷಣೆ; ಕಾಶ್ಮೀರದ ವಿಷಯದಲ್ಲಿ ಕೋಮುವಾದಿ ಧ್ರುವೀಕರಣ ಇತ್ಯಾದಿ. ಇವೆಲ್ಲವೂ ಪ್ರಸಕ್ತ ಸಂದರ್ಭದಲ್ಲಿ ದೇಶ ಎದುರಿಸುತ್ತಿರುವ ಸವಾಲುಗಳತ್ತ ಬೊಟ್ಟು ಮಾಡಿ ತೋರಿಸುತ್ತಿವೆ.

ಬಂಡವಾಳಿಗ ಬಂಟರಿಗೆ 2.15ಲಕ್ಷ ಕೋಟಿ ರೂ.ಗಳು

ಈ ರಾಜಕೀಯ ಬಲಪಂಥದ ಸವಾಲನ್ನು ರಾಜಕೀಯ ಎಡಪಂಥ ಮಾತ್ರವೇ ಎದುರಿಸಲು ಸಾಧ್ಯ ಎಂದು ಯೆಚುರಿ ಒತ್ತಿ ಹೇಳಿದರು. ಇದರ ಅರ್ಥ ಎಡ ರಾಜಕೀಯ ಪಕ್ಷಗಳನ್ನು ಬಲಿಷ್ಟಗೊಳಿಸುವುದು ಮಾತ್ರವೇ ಅಲ್ಲ, ಪ್ರಸಕ್ತ ಕಥನವನ್ನು ಕೋಮುವಾದಿ ಪ್ರಶ್ನೆಗಳಿಂದ ಜನಗಳ ಜೀವನಧಾರದ ಪ್ರಶ್ನೆಗಳತ್ತ ಬದಲಿಸುವುದು ಕೂಡ ಆಗಿದೆ.

ಭಾರತ ಆರ್ಥಿಕ ಹಿಂಜರಿತದ ಅಂಚಿಗೆ ಬಂದಿದೆ. ಇದಕ್ಕೆ ಈ ಬಿಜೆಪಿ ಸರಕಾರವೇ ಹೊಣೆ. ಇದು ಮಧ್ಯಮ ವರ್ಗಗಳನ್ನು ಮಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿ ಬಡ ಜನವಿಭಾಗಗಳನ್ನೂ ತಟ್ಟಿದೆ. ಆದರೆ ಈ ಸರಕಾರ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ಬದಲು ಜನಗಳನ್ನು ಭಾವನಾತ್ಮಕ ಪ್ರಶ್ನೆಗಳ ಮೇಲೆ ಒಡೆಯಲು ಟೊಂಕ ಕಟ್ಟಿ ನಿಂತಿದೆ, ಆ ಮೂಲಕ ಜನಗಳ ಗಮನವನ್ನು ನಿಜವಾದ ಪ್ರಶ್ನೆಗಳಿಂದ ಬೇರೆಡೆಗೆ ಸೆಳೆದು ಕೋಮುವಾದಿ ಧ್ರುವೀಕರಣಕ್ಕೆ ಪ್ರಯತ್ನಿಸುತ್ತಿದೆ. ಕಾಶ್ಮೀರದಲ್ಲಿ ನಡೆಯುತ್ತಿರುವುದು ನಮ್ಮ ಕಣ್ಣ ಮುಂದಿದೆ. ಒಂದು ರಾಜ್ಯವನ್ನು ಕೆಳ ಮಟ್ಟಕ್ಕೆ ಇಳಿಸಿ ಜನಗಳ ಭಾವನೆಗಳೊಂದಿಗೆ ಆಟವಾಡಲಾಗುತ್ತಿದೆ. ದೇಶದಲ್ಲೆಲ್ಲ ರಾಷ್ಟ್ರೀಯ ಪೌರತ್ವ ಪಟ್ಟಿ(ಎನ್‌ಆರ್‌ಸಿ) ಯ ಬೊಬ್ಬೆ ಎಬ್ಬಿಸಲಾಗಿದೆ. ಇದರ ಹಿಂದಿರುವ ಬಿಜೆಪಿಯ ನಿಜ ಆಶಯವೆಂದರೆ ತನ್ನ ಸಂಪೂರ್ಣ ವಿಫಲತೆಗಳನ್ನು ಕೋಮುವಾದಿ ಭಾವನೆಗಳ ಹಲಗೆಗಳನ್ನು ಹೊಡೆದು ಮುಚ್ಚಿ ಹಾಕಿ ಅದಕ್ಕೆ ಮೆರಗಿನ ಲೇಪನ ಮಾಡುವುದು. ಇದಕ್ಕೆ ಜನಗಳನ್ನು ಕೋಮುವಾದಿ ದೃಷ್ಟಿಯಿಂದ ಧ್ರುವೀಕರಿಸುವ ಪ್ರತಿಯೊಂದು ಅವಕಾಶವನ್ನೂ ಬಳಸಿಕೊಳ್ಳುತ್ತಿದೆ.

ಇವೆಲ್ಲದಕ್ಕೆ ಪ್ರತ್ಯುತ್ತರವನ್ನು ಎಡ ಪಂಥ ಮಾತ್ರವೇ ಕೊಡಲು ಸಾಧ್ಯ ಎಂದು ಯೆಚುರಿ ಒತ್ತಿ ಹೇಳಿದರು.

ಆರ್ಥಿಕ ಉತ್ತೇಜನೆಯ ಹೆಸರಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿಶ್ಲೇಷಿಸುತ್ತ ಇದಕ್ಕಾಗಿ ಕಾರ್ಪೊರೇಟ್‌ಗಳಿಗೆ ರಿಯಾಯ್ತಿಗಳ ಮೂಲಕ ದೇಶದ ಖಜಾನೆಗೆ 1.45 ಲಕ್ಷ ಕೋಟಿ ರೂ.ಗಳಷ್ಟು ನಷ್ಟ ವುಂಟುಮಾಡಲಾಗಿದೆ. ಇದಕ್ಕೆ ಒಂದು ವಾರದ ಮೊದಲಷ್ಟೇ 70,000 ಕೋಟಿ ರೂ.ಗಳ ರಿಯಾಯ್ತಿಗಳನ್ನು ಕೊಡಲಾಗಿತ್ತು. ಅಂದರೆ ದೇಶಕ್ಕೆ ಒಟ್ಟಿ 2.15 ಲಕ್ಷ ಕೋಟಿ ರೂ.ಗಳ ನಷ್ಟ ಎಂಬ ಸಂಗತಿಯತ್ತ ಯೆಚುರಿ ಗಮನ ಸೆಳೆದರು. ಇದು ಈಗಾಲೇ ಇರುವ ಅಪಾರ ಅಸಮಾನತೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸುತ್ತದೆ, ಸರಕಾರ ಹೇಳುವಂತೆ ಹೂಡಿಕೆಗಳನ್ನೇನೂ ಹೆಚ್ಚಿಸುವುದಿಲ್ಲ. ಈಗಾಗಲೇ ಬಿಜೆಪಿ 5ವರ್ಷಗಳ ಆಳ್ವಿಕೆಯಲ್ಲಿ ಅಂಬಾನಿಯ ಸಂಪತ್ತು 100 ಶೇ.ದಷ್ಟು ಹೆಚ್ಚಿದರೆ, ಅಡಾಣಿಯ ಸಂಪತ್ತು ನಾಲ್ಕು ಪಟ್ಟಾಗಿದೆ. ಕೇವಲ ಎಂಟು ಮಂದಿ ಅತಿಶ್ರೀಮಂತರ ಕೈಗಳಲ್ಲಿ 50%ದಷ್ಟು ಜನಸಂಖ್ಯೆ ಹೊಂದಿರುವ ಪ್ರಮಾಣದ ಸಂಪತ್ತು ಜಮಾವಣೆಗೊಂಡಿದೆ.

ಇದರಿಂದಾಗಿ ಹೆಚ್ಚೆಚ್ಚು ಜನರು ಬಡತನದತ್ತ, ನಿರುದ್ಯೋಗದತ್ತ ತಳ್ಳಲ್ಪಟ್ಟಿದ್ದಾರೆ.

ಎಡಪಕ್ಷಗಳು ಮುಂದಿಟ್ಟಿರುವ ಪರ್ಯಾಯ

"ನಮ್ಮ ಪರ್ಯಾಯ ಮಾರ್ಗವೆಂದರೆ ರಿಝರ್ವ್ ಬ್ಯಾಂಕಿನಿಂದ ಕಾನೂನುಬಾಹಿರವಾಗಿ ತೆಗೆದುಕೊಂಡು ಕಾರ್ಪೊರೇಟ್‌ಗಳಿಗೆ ಕೊಟ್ಟಿರುವ ಹಣವನ್ನು ಸಾರ್ವಜನಿಕ ಹೂಡಿಕೆಗಳಿಗೆ ಬಳಸಬೇಕು" ಎಂದು ಎಡ ಪರ್ಯಾಯದ ಬಗ್ಗೆ ಮಾತಾಡುತ್ತ ಯೆಚುರಿ ಹೇಳಿದರು. ರಸ್ತೆಗಳನ್ನು, ನೀರಿನ ಬಾವಿಗಳನ್ನು ಮತ್ತಿತರ ಸಾಮಾಜಿಕ ಮೂಲರಚನೆಗಳನ್ನು ಕಟ್ಟಲು ಬಳಸಬೇಕು. ವಾತಾವರಣ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ಸಾರ್ವಜನಿಕ ಹಣದಿಂದ ನಡೆಯುವ ಚೇತನಾಕಾರಿ ಮೂಲರಚನೆಗಳಲ್ಲಿ ತೊಡಗಿಸುವುದು ಅಗತ್ಯವಾಗಿದೆ. ಹೀಗೆ ಮಾಡಿದರೆ ಉದ್ಯೋಗಾವಕಾಶಗಳು ಹೆಚ್ಚುತ್ತವೆ, ಜನಗಳ ಆದಾಯಗಳು ಹೆಚ್ಚುತ್ತವೆ, ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ, ಅರ್ಥವ್ಯವಸ್ಥೆ ಮತ್ತೆ ದಾರಿಗೆ ಬರುತ್ತದೆ. ಆನಗಳ ಲೂಟಿಯನ್ನು ಮತ್ತಷ್ಟು ಹೆಚ್ಚಿಸುವ ಸರಕಾರದ ಆಶಯವನ್ನು ಒಪ್ಪಲು ಸಆಧ್ಯವಿಲ್ಲ ಎಂದು ಯೆಚುರಿ ಹೇಳಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಮಾತಾಡುತ್ತ ಈಗಿರುವ ಸಂವಿಧಾನವನ್ನು ಚಿಂದಿ ಮಾಡಿ ಮನುಸ್ಮೃತಿಯನನು ತರುವುದು ಈ ಸರಕಾರದ ಹುನ್ನಾರ ಎಂದರು. ಸಿಪಿಐ(ಎಂಎಲ್) ನ ದೀಪಂಕರ್ ಭಟ್ಟಾಚಾರ್ಯ ನೋಟುರದ್ದತಿಯಿಂದ ಆರಂಭಿಸಿದ ಈ ಸರಕಾರದ ತಪ್ಪು ಧೋರಣೆಗಳು ಈ ಸರಕಾರದ ಹಿಂಜರಿತದ ಈಗಿನ ಸ್ಥಿತಿಗೆ ತಂದು ನಿಲ್ಲಿಸಿವೆ ಎಂದರು. ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ಮುಖಂಡರೂ ಮಾತಾಡಿದರು.

ಎಡಪಕ್ಷಗಳ ರಾಷ್ಟ್ರೀಯ ಸಮಾವೇಶದ ನಿರ್ಣಯ

ಆಳಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಹೆಚ್ಚುತ್ತಿರುವ ಜನಗಳ ಸಂಕಟಗಳ ವಿರುದ್ಧ ಅಖಿಲ ಭಾರತ ಪ್ರತಿಭಟನೆ

ಈ ಸಮಾವೇಶವು

ಭಾರತೀಯ ಅರ್ಥವ್ಯವಸ್ಥೆಯು ಹಿಂಜರಿತದ ಅಂಚಿಗೆ ಬಂದಿರುವ ಒಂದು ಅತ್ಯಂತ ಗಂಭೀರ ಬಿಕ್ಕಟ್ಟಿನ ಹಿಡಿತದಲ್ಲಿ ಸಿಲುಕಿದೆ, ಎಲ್ಲ ಸಾಕ್ಷ್ಯಗಳು, ತೇಪೆಹಚ್ಚಿದ ಅಧಿಕೃತ ಮಾಹಿತಿ ಕೂಡ ಸುಮಾರಾಗಿ ಅರ್ಥವ್ಯವಸ್ಥೆಯ ಎಲ್ಲ ವಲಯಗಳಲ್ಲಿ ಬೇಡಿಕೆ ಕುಸಿದಿದೆ, ಇದರಿಂದಾಗಿ ಉತ್ಪಾದನೆಯಲ್ಲಿ ದೊಡ್ಡ ಕಡಿತಗಳಾಗಿವೆ ಮತ್ತು ಅಭೂತಪೂರ್ವ ರೀತಿಯಲ್ಲಿ ಉದ್ಯೋಗನಷ್ಟಗಳು ಹೆಚ್ಚುತ್ತಿವೆ, ಇದಕ್ಕೆ ಮಹಿಳೆಯರು ಅತಿ ಹೆಚ್ಚಾಗಿ ಬಲಿಯಾಗಿದ್ದಾರೆ ಎಂಬುದನ್ನು ದೃಢಪಡಿಸುತ್ತಿವೆ; ವಾಹನಗಳ ಮಾರಾಟದಿಂದ ಹಿಡಿದು, ಜವಳಿ, ಈ 'ಚಹಾ-ಬಿಸ್ಕಿಟ್' ಪ್ರಿಯ ದೇಶದಲ್ಲಿ ಬಿಸ್ಕಿಟಿನ ಮಾರಾಟದ ವರೆಗೂ ಪ್ರಸಕ್ತ ವಾಸ್ತವತೆಯನ್ನು ಕಣ್ಣಿಗೆ ರಾಚುವಂತೆ ಪ್ರದರ್ಶಿಸುತ್ತಿವೆ

ಎಂಬುದನ್ನು ಅತ್ಯಂತ ಆಳವಾದ ಬೇಗುದಿಯಿಂದ ಗಮನಿಸುತ್ತದೆ;

ಇದನ್ನು ಸುಮಾರಾಗಿ ನಿರಾಕರಿಸುತ್ತಲೇ ಇದ್ದ ಮೋದಿ ಸರಕಾರ ಈಗ ಒಲ್ಲದ ಮನಸ್ಸಿನಿಂದಲೇ ಆರ್ಥಿಕ ಮಂದಗತಿ ಇದೆ ಎಂಬುದನ್ನು ಒಪ್ಪುವ ಸ್ಥಿತಿಗೆ ಬಂದಿದೆ. ಆದರೂ ಅದು ನೋಟುರದ್ದತಿ ಮತ್ತು ಸರಿಯಾಗಿ ರೂಪಿಸದ, ಸರಿಯಾದ ಸಿದ್ಧತೆಯಿಲ್ಲದೆ ತಂದ ಜಿಎಸ್‌ಟಿ ಮುಂತಾದ ತನ್ನದೇ ಧೋರಣೆಗಳು ಅದಾಗಲೇ ನಿರುದ್ಯೋಗ, ಬೆಲೆಯೇರಿಕೆ ಮತ್ತು ಜೀವನಾಧಾರಗಳ ಬಿಕ್ಕಟ್ಟಿನಿಂದ ತತ್ತರಿಸುತ್ತಿದ್ದ ಅರ್ಥವ್ಯವಸ್ಥೆಗೆ ಎಂದೂ ಸರಿಪಡಿಸಲಾಗದ ಹಾನಿ ಉಂಟು ಮಾಡಿವೆ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಲೇ ಇದೆ, ಮೋದಿ ಸರಕಾರಕ್ಕೆ ಈಗಲೂ ಹೆಚ್ಚುತ್ತಿರುವ ಸಾಮೂಹಿಕ ನಿರುದ್ಯೋಗ, ಅರೆ-ಉದ್ಯೋಗ, ಕಡಿಮೆ ಕೂಲಿಗಳು, ಕಡಿಮೆ ಆದಾಯಗಳು ಮತ್ತು ಆಳಗೊಳ್ಳುತ್ತಿರುವ ಕೃಷಿ ಸಂಕಟದ ಸಮಸ್ಯೆಗಳ ಪರಿವೆಯೇ

ಪುಟ 11 ಕ್ಕೆ





“ಮಾಧ್ಯಮಗಳ ವಿರುದ್ದವೂ ಹೋರಾಟ ನಡೆಯಬೇಕಿದೆ”

ಪುಟ 6 ರಿಂದ

ಕಾಶ್ಮೀರವನ್ನು ಸ್ವರ್ಗವಾಗಿಸುವ ನಾಟಕವಾಡುತ್ತಾರೆ. ಹೀಗಾಗಿ 370 ಸಂಬಂಧ ರ‍್ಯಾಲಿಗಳನ್ನು ಇಲ್ಲೇ ಮಾಡ್ತಾರೆ. ಜಾಧವ್‌ಪುರ ಯೂನಿವರ್ಸಿಟಿಯ ಮೇಲೆ ಬಾಲಾಕೋಟ್ ಮಾಧರಿಯ ಸರ್ಜಿಕಲ್ ಸ್ಟ್ರೈಕ್ ಮಾಡುತ್ತೇವೆ ಎಂದು ಅವರ ಪಾರ್ಟಿಯ ಅಧ್ಯಕ್ಷರು ಹೇಳುತ್ತಿದ್ದಾರೆ. ನಮ್ಮ ವಿಶ್ವವಿದ್ಯಾಲಯಗಳನ್ನು ಸಲೀಸಾಗಿ ಪಾಕಿಸ್ತಾನ ಎಂದು ಕರೆದರು? ಇದೇನು ತಮಾಷೆಯ ವಿಷಯವೇ? ಶ್ರೀಮಂತರ ಮಕ್ಕಳು ಅಮೇರಿಕಾದಲ್ಲಿ ಓದಬಹುದು. ನಮ್ಮ ಬಡವರ ಮಕ್ಕಳು ಓದುವ ಯೂನಿವರ್ಸಿಟಿ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡ್ತೇವೆ ಎನ್ನುವವರು ಈ ದೇಶದ ಯಾವ ಭಾಗವನ್ನೂ ಸ್ವರ್ಗ ಮಾಡಲು ಸಾಧ್ಯವಿಲ್ಲ. ‘ಕಾಶ್ಮೀರದ ಪ್ರಕೃತಿ ಸೌಂದರ್ಯದ ಕಾರಣಕ್ಕಾಗಿ ಸ್ವರ್ಗ ಎನ್ನಲಾಗುತ್ತದೆ. ನಿಮಗೆ ಈ ರೀತಿಯ ಬೆಟ್ಟಗುಡ್ಡಗಳ ರಚನೆ, ಜೋಡನೆ ಸಾಧ್ಯವಿಲ್ಲ. ಆದರೆ ನೀವು ಮನಸ್ಸು ಮಾಡಿದರೆ ಮನಸ್ಸುಗಳನ್ನು ಜೋಡಿಸಬಹುದು. ಆ ಪ್ರಯತ್ನ ಮಾಡುವುದಾದರೆ ನಮ್ಮ ಶುಭಕಾಮನೆಗಳು ನಿಮ್ಮ ಜೊತೆಗಿರುತ್ತವೆ.’

ಹಿಂದಿ ಪ್ರದೇಶದ ಜನರಿಗೆ ಓದಲು ಕಲಿಯಲು ಸರಿಯಾದ ಒಂದು ಕಾಲೇಜಿಲ್ಲ. ತಮ್ಮ ಮಕ್ಕಳನ್ನು ಓದಿಸಲು ಅಲ್ಲಿನ ಪೋಷಕರು ದುಬಾರಿ ದರ ತೆತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜಿಗೆ ಕಳಿಸುತ್ತಾರೆ. ಕೊನೆಗೆ 5 ಸಾವಿರ ವೇತನದ ಯಾವುದಾದರೂ ಕೆಲಸಕ್ಕೆ ಸೇರುತ್ತಾರೆ. “ಭಾರತದ ಶೇ.90 ರಷ್ಟು ಎಂಜಿನಿಯರ್‌ಗಳು ಉದ್ಯೋಗಕ್ಕೆ ಅರ್ಹರಲ್ಲ”! ಎಂದು ಉದ್ಯಮಿಯೊಬ್ಬರು ಭಾಷಣ ಮಾಡುತ್ತಾರೆ. ಹಿಂದಿ ಪ್ರದೇಶದ ಜನರು "ನಾವು ಇಂಜಿನಿಯರಿಂಗ್ ಓದುವ ಸಂಧರ್ಭದಲ್ಲಿ ಪೂರ್ತಿ ಫೀಸು ಕಟ್ಟಿದ್ದೇವೆ. ಆದರೂ ಕೆಲಸ ಯಾಕೆ ಸಿಗುತ್ತಿಲ್ಲ? ಈ ಕಾಲೇಜುಗಳ ಮೇಲೆ ಕ್ರಮ ಯಾಕೆ ಆಗಿಲ್ಲ" ಎಂದು ಪ್ರಶ್ನೆ ಮಾಡುವವರೇ ಇಲ್ಲ.

ನನಗೆ ಇಂಗ್ಲೀಷ್ ಬರುವುದಿಲ್ಲ. ಆ ಕಾರಣಕ್ಕಾಗಿ ನಾನು ಹಿಂದಿ ಮಾತನಾಡುತ್ತಿದ್ದೇನೆ. ನಿಮಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಲಾಗದಿದ್ದುದಕ್ಕೆ ನೋವಿದೆ. ಹಾಗಂತ ನನ್ನ ಮಾತೃ ಭಾಷೆಯೇನು ಹಿಂದಿಯಲ್ಲ. ನಾನು ಬೋಜ್ ಪುರಿ ಭಾಷಿಕ.

ನಾನು ಬೋಜ್ ಪುರಿ ಭಾಷಿಕನಾಗಿ ಇಂಗ್ಲೀಷ್‌ಗೆ ಪರ್ಯಾಯವಾಗಿ ಹಿಂದಿ ಕಲಿತೆ. ನನ್ನ ಭೋಜ್ ಪುರಿ ಭಾಷಿಕರು ಶ್ರಮಿಕರು. ದೇಶದ ಯಾವುದೇ ಭಾಗಕ್ಕೆ ಹೋದರೂ ಬೋಜ್ ಪುರಿ ಭಾಷಿಕರು ಸಿಗುತ್ತಾರೆ.

ಮನೀಲಾದಲ್ಲಿ ಮ್ಯಾಗ್ಸಸೆ ತೆಗೆದುಕೊಂಡಾಗ ಮಾಡಿದ ಭಾಷಣವೂ ನಾನು ಇಂಗ್ಲೀಷಿನಲ್ಲಿ ಬರೆದಿದ್ದಲ್ಲ. ನಾನು ಹಿಂದಿಯಲ್ಲಿ ಬರೆದುಕೊಂಡದ್ದನ್ನು ನನ್ನ ಪತ್ನಿ ಮತ್ತು ಸ್ನೇಹಿತರ ನೆರವಿನಿಂದ ಇಂಗ್ಲೀಷಿಗೆ ಅನುವಾದಿಸಿ, ರಿಹರ್ಸಲ್ ಮಾಡಿಕೊಂಡು ಓದಿದ್ದೇನೆ. ಆದರೆ ನನಗೆ ಹೆಮ್ಮೆ ಏನೆಂದರೆ ನನ್ನ ಮಾತೃಭಾಷೆಯು ಬಿಹಾರದ ದುಡಿದು ಬದುಕುವ ಜನರ ಭಾಷೆ. ಅವರು ಎಲ್ಲಿ ಹೋದರೂ ಶ್ರಮದ ಕೆಲಸ ಮಾಡಲು ಹಿಂಜರಿಯದ ಜನರು. ಅಂತೆಯೇ, ಸಾಮಾನ್ಯ ಜನರ ಹಿಂದಿಯೂ ಕೂಡಾ ಭೋಜಪುರಿಯಂತೇ ಇದೆ. ನನ್ನ ಭೋಜ್ ಪುರಿ ಭಾಷೆಯು ಕೂಲಿ ಕೆಲಸ ಮಾಡುತ್ತಿದೆ, ಬಸ್ಸುಗಳಲ್ಲಿ ಕೂತು ತಿನ್ನುತ್ತಿದೆ. ‘ಹೆಮ್ಮೆ ಏನೆಂದರೆ ಭೋಜ್ ಪುರಿ ಭಾಷೆಯೂ ಶ್ರಮ ಸಂಸ್ಕೃತಿಯ ಮೂಲಕ ದೇಶವನ್ನು ತನ್ನದಾಗಿಸಿಕೊಂಡಿದೆ. ಹಾಗಂತ ಇಡೀ ದೇಶದ ಭಾಷೆ ಬೋಜ್ ಪುರಿ ಒಂದೇ ಇರಬೇಕು ಎಂದು ನಾವು ಬಯಸುವುದಿಲ್ಲ!’ ನಾನು ಕನ್ನಡ ಭಾಷಿಕನಾಗಿ ಹುಟ್ಟಬೇಕಿತ್ತು ಎಂದೂ ಅನ್ನಿಸುವುದುಂಟು...

ಇದು ಎಂತಹ ಅವಿಸ್ಮರಣೀಯ ದಿನ. ಎರಡು ವರ್ಷದ ಗೌರಿ ಟ್ರಸ್ಟ್ ಗೆ 102 ವರ್ಷ ವಯಸ್ಸಿನ ಅಧ್ಯಕ್ಷರು! ಕರ್ನಾಟಕದ ಪಾಲಿಗೆ ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿಯವರು ಒಂದು ಅದೃಷ್ಟ. 102 ವರ್ಷ ವಯಸ್ಸಿನ ಸ್ವಾತಂತ್ರ್ಯ ಹೋರಾಟಗಾರರ ಜೊತೆ ಬದುಕುವ ಅದೃಷ್ಟ ನಿಮಗಲ್ಲದೇ ಇನ್ಯಾರಿಗೂ ಇಲ್ಲ! ನಾನು ದೊರೆಸ್ವಾಮಿಯವರನ್ನು ಕಂಡು ಧನ್ಯನಾಗಿದ್ದೇನೆ.

ನನಗೆ ಹಿಂದಿ, ಭೋಜಪುರಿ, ಉರ್ದು ಬರುತ್ತದೆ. ಶಾಲಾ ದಿನಗಳಲ್ಲಿ ಇಂಗ್ಲೀಷಿಗೆ ಹೆದರಿ ಹಿಂದಿಯನ್ನು ಕಲಿತು ಅದರೊಳಗೆ ಅಡಗಿ ಕುಳಿತುಕೊಂಡೆ. ಈಗ ಹಿಂದಿಯನ್ನು ತೋರಿಸಿ ಭಯಪಡಿಸುತ್ತಿದ್ದಾರೆ. ಆದರೆ ಇಂಗ್ಲೀಷ್ ಕಲಿಯೋಣಾ ಎಂದರೆ ಸಮಯ ಮೀರಿದೆ. ನಾನು ಕಲಿತ ಹಿಂದಿ ಜನಸಾಮಾನ್ಯರ ಬದುಕಿನೊಂದಿಗೆ ಬೆಸೆದುಕೊಂಡಿರುವುದು. ಅವರ ಬೆವರೊರೆಸುವುದು, ಅವರ ಹೆಗಲಿನ ಟವೆಲ್, ಸೊಂಟಕ್ಕೆ ಸುತ್ತುವ ಬಟ್ಟೆಯ ರೀತಿ ಹಿಂದಿ ಶ್ರಮಿಕರಿಗೆ ಏನು ಬೇಕಾದರೂ ಆಗಬಹುದು. ಆದರೆ ನಮ್ಮ ಹಿಂದಿ ಇನ್ನೊಂದು ಭಾಷೆಯನ್ನು ಬೆದರಿಸುವಂಥದ್ದಲ್ಲ. ಹಾಗಾಗಿ ಯಾವುದೇ ಭಾಷೆಗೆ ಹೆದರಬೇಡಿ ಮತ್ತು ಯಾವುದೇ ಭಾಷೆಯನ್ನು ಹೆದರಿಸಬೇಡಿ.

‘ಡಿ ಉಮಾಪತಿಯವರು ಹಲವು ಹಿಂದಿ ಸಾಹಿತಿಗಳನ್ನು ಕನ್ನಡಿಗರನ್ನಾಗಿಸಿದ್ದಾರೆ. ಕನ್ನಡದಲ್ಲಿ ಹಿಂದಿ ಸಾಹಿತ್ಯ ಓದುವಂತೆ ಮಾಡಿದ್ದಾರೆ. ಇದೇ ಭಾಷೆಯ ಶಕ್ತಿ. ಭಾಷೆಯ ಸಂಬಂಧಗಳು ಹೀಗಿರಬೇಕೇ ಹೊರತು, ವೇದಿಕೆಯ ಮೇಲೆ ಒಂದು ದೇಶ ಒಂದು ಭಾಷೆ ಎಂದು ಅಬ್ಬರಿಸುವ ಮೂಲಕವಲ್ಲ!’ ಎಲ್ಲವೂ ಒಂದೇ ಇರಬೇಕು ಎಂದರೆ ಬಹುಷಃ ಮುಂದಿನ ದಿನಗಳಲ್ಲಿ 2,3,4 ಅಂಕಿಗಳೂ ಮಾಯವಾಗಿ 1 ಅಂಕಿ ಮಾತ್ರ ಉಳಿಯಬೇಕು ಎಂದು ಘೋಷಿಸಿದ್ರೂ ಅಚ್ಚರಿಯಿಲ್ಲ! ಈ ರೀತಿ ಏಕತೆಯ ವ್ಯಸನಕ್ಕೆ ಈಡಾಗಿದ್ದಾರೆ!

ಶ್ರಮಿಕರ ಹಿಂದಿಯನ್ನು ಈಗ ಬಂದಿರೊ ಹೊಸಾ ನಾಯಕರು ತಮ್ಮ ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಹಿಂದಿ ಭಾಷಿಕರಿಗೂ ಗೊತ್ತಿದೆ. ನಾಯಕರ ಮನೆ ಬಾಗಿಲಿಗೆ ಹಿಂದಿ ಬೋರ್ಡ್ ಹಾಕಿದ ತಕ್ಷಣ ಹಿಂದಿ ಸರ್ಕಾರ ಆಗುವುದಿಲ್ಲ. ಇಂದಿಗೂ ಹಿಂದಿ ಪ್ರದೇಶಗಳಲ್ಲಿ ಹಿಂದಿಯ ಹೆಸರಿನಲ್ಲಿ ಸರಿಯಾದ ಶಾಲೆ, ಕಾಲೇಜುಗಳು ಇಲ್ಲ. ಹಿಂದಿ ಶಾಲೆಯಲ್ಲಿ ಕಲಿತ ಯುವಕರು ಕೆಲಸ ಹುಡುಕಿಕೊಂಡು ಹೊರಟರೆ ಅವರಿಗೆ ಇಂಗ್ಲೀಷ್ ಬೇಟೆಗಾರನಂತೆ ಕಾಡುತ್ತದೆ. ನನ್ನ ಹಿಂದಿ ಯುವಕರು ಈ ಕಾರಣಕ್ಕಾಗಿಯೇ ರಸ್ತೆ ಬದಿ ಶ್ರಮ ಕೆಲಸ ಮಾಡಿ ಬದುಕು ಕಟ್ಟಿಕೊಂಡಿದ್ದಾರೆ. ಹಾಗಾಗಿ ನನ್ನ ಹಿಂದಿ ಪ್ರಧಾನ ಮಂತ್ರಿಯ ಹಿಂದಿಯೂ ಅಲ್ಲ, ಗೃಹ ಮಂತ್ರಿಯ ಹಿಂದಿಯೂ ಅಲ್ಲ. ಅಧಿಕಾರದ ಕುರ್ಚಿಯಲ್ಲಿ ಮಾತನಾಡುವ ಹಿಂದಿಯೂ ಕೂಡಾ ನಮಗೆ ಇಂಗ್ಲೀಷಿನಂತೆಯೇ ಕೇಳುತ್ತದೆ.

‘ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ಸ್ಥಾಪಿಸಿದ ಹಿಂದಿ ಯೂನಿವರ್ಸಿಟಿ ಪರಿಸ್ಥಿತಿ ಯಾಕೆ ಇಷ್ಟು ಕೆಟ್ಟದಾಗಿದೆ ಎಂದು ಶಿವರಾಜ್‌ಸಿಂಗ್ ಚೌಹಾಣ್ ಅವರನ್ನು ಕೇಳಿದರೆ ಅವರೂ ಕೋಪಗೊಂಡು ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ’. ಇದು ಇವರ ಹಿಂದಿ ಪ್ರೇಮದ ಹಣೆಬರಹ!

ಯುಪಿಎಸ್‌ಸಿ ಬರೆಯುವವರಲ್ಲಿ ಹಿಂದಿ ಮಾತನಾಡುವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಕೇಳಿದರೆ ಈ ಹಿಂದಿ ಪ್ರೇಮಿ ನಾಯಕರು ಉತ್ತರ ಕೊಡುವುದಿಲ್ಲ. ಇವಕ್ಕೆಲ್ಲಾ ಉತ್ತರ ಕೊಡಬೇಕಾಗುತ್ತದೆ ಎಂದೇ ಅವರು ಹಿಂದಿ ಪ್ರೇಮದ ಹೆಸರಿನಲ್ಲಿ ದಕ್ಷಿಣ ಭಾರತವನ್ನು ಬೆದರಿಸಲು ನೋಡುತ್ತಾರೆ. ದಕ್ಷಿಣ ಭಾರತದ, ಅದರಲ್ಲೂ ಕನ್ನಡಿಗರು ಇವರ ಹಿಂದಿ ಹೇರಿಕೆಗೆ ಬೆದರದೆ ಪ್ರತಿಭಟಿಸಿದರೆ, "ನೀವು ಯಾವ ಭಾಷೆಯಾದರೂ ಬಳಕೆ ಮಾಡಿ. ಹಿಂದಿ ಕಲಿಯಿರಿ ಎಂದಷ್ಟೇ ಹೇಳಿದೆ" ಎಂದು ಆಗ ಸಮಜಾಯಿಸಿ ಕೊಡುತ್ತಾರೆ. ಈ ಸಮಜಾಯಿಸಿ ಕೊಡುವ ಪರಿಸ್ಥಿತಿ ಯಾಕೆ ತಂದುಕೊಂಡಿರಿ? ಭಾಷೆಯ ಹಿನ್ನಲೆಗಳು ಗೊತ್ತಿಲ್ಲದೇ ಮಾತನಾಡಬಾರದು.

ದಕ್ಷಿಣ ಹಾಗೂ ಪೂರ್ವವನ್ನು ಬೆದರಿಸುವ ಬದಲು ಹಿಂದಿ ಭಾಷಿಕ ಪ್ರದೇಶಕ್ಕಾಗಿ ಏನು ಮಾಡಿದ್ದೀರಿ ಹೇಳಿ ಎಂದರೆ ಉತ್ತರ ಸಿಗುವುದಿಲ್ಲ. ಉತ್ತರ ಭಾರತದ ಯೂನಿವರ್ಸಿಟಿ, ಆಸ್ಪತ್ರೆಗಳ ಕೆಟ್ಟ ಪರಿಸ್ಥಿತಿಯೇ ಕರ್ನಾಟಕದ ಶಿವಮೊಗ್ಗ, ಧಾರವಾಡದಲ್ಲೂ ಇದೆ. ಹಾಗಾಗಿ ನಮ್ಮ ನಮ್ಮ ನಡುವೆ ಭಾಷೆಯ ಜಗಳವನ್ನು ಬದಿಗಿಟ್ಟು ನಾವು ಸರ್ಕಾರದ ಭಾಷೆಯನ್ನು ಬದಲಿಸಬೇಕು. ಭಾಷೆಯ ಪ್ರಭಾವದ ಬದಲು ಆ ಭಾಷೆಯನ್ನು ಆಡುವ ಜನರ ಅಭಾವದ ಸ್ಥಿತಿಯ ಬಗ್ಗೆ ಮಾತನಾಡಬೇಕು. ಇಂದು ಪ್ರಧಾನಮಂತ್ರಿಗಳನ್ನ ಬೆಂಬಲಿಸುವ ಜನರು ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಾರೆ. ‘ಹೌಡಿ ಮೋದಿ ಎಂದು ಕಾರ್ಯಕ್ರಮಕ್ಕೆ ಹೆಸರಿಡುತ್ತಾರೆ. ಆದರೆ ಹಿಂದಿ ರಾಷ್ಟ್ರಭಾಷೆ ಆಗಬೇಕು ಎನ್ನುತ್ತಾರೆ! ಇಂತಹ ಹಿಂದಿ ಪ್ರೇಮದಿಂದ ನಾವು ದೂರವಿರಬೇಕು.’

ಹಿಂದಿ ಹುಟ್ಟುವುದಕ್ಕೂ ಮೊದಲು ನಮ್ಮ ದೇಶವಿತ್ತು. ಪಾಳಿ ಮೊದಲಾದ ಅನೇಕ ಭಾಷೆಗಳು ಭಾರತದಲ್ಲಿದ್ದವು, ಈಗಲೂ ಇವೆ. ಸಾವಿರಾರು ವರ್ಷ ಒಂದು ದೇಶ, ಒಂದು ಭಾಷೆ ಎಂದು ಹೇಳದೆಯೇ ಈ ದೇಶವನ್ನು ಭಾರತವನ್ನಾಗಿಸಿದ್ದೇವೆ. ಇಂದು ಇಡೀ ದೇಶ ಯಾಕೆ ಒಂದು ಭಾಷೆಯೊಳಗೆ ಸೇರಬೇಕು? ಭೋಜಪುರಿ, ಮೈಥಿಲಿ, ಗಾಂಧಾರಿ ಈ ರೀತಿಯ ಎಲ್ಲಾ ಪ್ರಾದೇಶಿಕ ಭಾಷೆಗಳನ್ನೂ ಹೊಸಕಿ ಹಾಕಿ ಹಿಂದಿ ಬೆಳೆಯುತ್ತಿದೆ. ನಿಜವಾದ ಪ್ರಜಾತಂತ್ರದಲ್ಲಿ ಪ್ರಾದೇಶಿಕವಾಗಿರುವ ಮಾತೃಭಾಷೆಗಳನ್ನು ಬದುಕಿಸಬೇಕಾಗುತ್ತದೆ. ಕೇದಾರ್ ನಾಥ್ ಹಿಂದಿಯಲ್ಲಿ ಒಂದು ದೇಶ ಒಂದು ಭಾಷೆಯಿಲ್ಲ. ಕೇದಾರ್ ನಾಥ್ ಹಿಂದಿಯಲ್ಲಿ ಬಾಂಗ್ಲಾ, ತಮಿಳು, ಉರ್ದು ಎಲ್ಲವೂ ಇದೆ.

ಹಿಂದಿಯನ್ನು ಭಾಷೆಯ ರೂಪದಲ್ಲಿ ಬಳಸಬೇಕೇ ಹೊರತು ಲಾಠಿ ರೂಪದಲ್ಲಿ ಅಲ್ಲ. ಹಿಂದಿ ಸಪ್ತಾಹದ ವೇದಿಕೆಯಲ್ಲಿದ್ದವರು ಹಿಂದಿಯನ್ನು ಲಾಠಿಯ ರೂಪದಲ್ಲಿ ಬಳಸುವವರು ಎನ್ನುವುದೇ ನಮ್ಮ ಆತಂಕ!

ಚಾನಲ್‌ಗಳು ಸರ್ಕಾರದ ಹಿಂದಿ ಮಾತನಾಡುತ್ತಿದ್ದು ಅದು ಬಹಳ ಫ್ಯೂಡಲ್ ಆಗಿದೆ. ಸಮಾಜವನ್ನು ದೂರ ಮಾಡುವ ಹಿಂದಿಯನ್ನು ಟಿವಿಗಳಲ್ಲಿ ಬಳಕೆ ಮಾಡಲಾಗುತ್ತಿದೆ.

"ಹಿಂದಿಯನ್ನು ಭಾರತೀಯವನ್ನಾಗಿಸಬೇಕು. ಹಿಂದಿ ಪ್ರದೇಶದ ಜನ ಬೇರೆ ಭಾಷೆಯನ್ನು ಕಲಿಯದೇ ಇರುವುದರಿಂದ ಹಿಂದಿ ಭಾರತೀಯವಾಗಿಲ್ಲ" ಎಂದು ಯು.ಆರ್. ಅನಂತಮೂರ್ತಿಯವರು ಹೇಳಿದ ಮಾತು ನೆನಪಾಗುತ್ತದೆ.

ನನಗೆ ಆಶ್ಚರ್ಯವಾಗುವುದೆಂದರೆ, ಬೆಂಗಳೂರಿನ ಸಾಮಾನ್ಯ ಟ್ಯಾಕ್ಸಿ ಚಾಲಕರೂ ಕೂಡಾ 5 ಭಾಷೆಗಳಲ್ಲಿ ಮಾತನಾಡುತ್ತಾರೆ. ತೆಲುಗು, ಕನ್ನಡ, ಹಿಂದಿ, ಇಂಗ್ಲೀಷ್, ತಮಿಳು, ಮಲಯಾಳಂ ಅನ್ನು ಇಲ್ಲಿನ ಟ್ಯಾಕ್ಸಿ ಚಾಲಕರು ಸಲೀಸಾಗಿ ಮಾತನಾಡುತ್ತಾರೆ. ‘ಒಬ್ಬ ಟ್ಯಾಕ್ಸಿ ಚಾಲಕ ಹಲವು ಭಾಷೆಗಳ ಒಂದು ದೇಶವಾಗಿದ್ದಾನೆ. ನಾವು ಅದನ್ನು ಬಿಟ್ಟು ಒಂದು ದೇಶ ಒಂದೇ ಭಾಷೆ ಅನ್ನುತ್ತಿದ್ದೇವೆ.’

ಯುಪಿಯ 10 ಲಕ್ಷ ಮಕ್ಕಳು ಹಿಂದಿ ಭಾಷೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫೇಲಾದರು. ಹಿಂದಿ ಭಾಷಿಕ ರಾಜ್ಯಗಳಲ್ಲೇ ಮಕ್ಕಳಿಗೆ ಹಿಂದಿ ಎಷ್ಟು ಭಯ ಹುಟ್ಟಿಸಿರಬಹುದು? ಸರ್ಕಾರ ನಡೆಸುವವರು ಜನರನ್ನು ಹೆದರಿಸಲಷ್ಟೇ ಹಿಂದಿಯನ್ನು ಬಳಕೆ ಮಾಡುತ್ತಿದ್ದಾರೆ. ಹಿಂದೊಮ್ಮೆ ಇವರ ಸರ್ಕಾರ ಬಂದಾಗ ಸಂಸ್ಕೃತ ಭಾಷೆಯನ್ನು ಹಿಡಿದುಕೊಂಡು ಇಂತಹದ್ದೇ ನಾಟಕ ಮಾಡಿದ್ದರು. ದೇಶದ ಪ್ರಾಚೀನ ಭಾಷೆಯನ್ನು ಉಳಿಸುತ್ತೇವೆ ಎಂದು ಬಂದ ಮೂರ್ನಾಲ್ಕು ಸಚಿವರು ಬಾಯಿಪಾಠ ಮಾಡಿಕೊಂಡು ಬಂದು ಸಂಸ್ಕೃತ ಶ್ಲೋಕಗಳನ್ನು ಹೇಳಿದರು. ಈಗ ಬನಾರಸ್‌ನಲ್ಲಿ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯ ಅಂತ ಇದೆ. ಅಕ್ಸ್‌ಫರ್ಡ್ ರೀತಿಯ ದೊಡ್ಡ ಕಟ್ಟಡ ರಚಿಸಿದ್ದರೂ ಉಪನ್ಯಾಸಕರೇ ಇಲ್ಲದೇ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಸ್ಕೃತ ವಿವಿಯ ಯಾವ ಕೆಲಸವೂ ಈ ಸರ್ಕಾರದಿಂದ ಆಗಿಲ್ಲ. ಸಂಸ್ಕೃತದ ಹೆಸರಿನಲ್ಲಿ ಭಾವುಕತೆಯನ್ನು ಸೃಷ್ಟಿಸಿ ಸಂಸ್ಕೃತಕ್ಕಾಗಿ ಏನನ್ನೂ ಮಾಡಿಲ್ಲ. ‘ಸಂಸ್ಕೃತಕ್ಕೇ ಮೋಸ ಮಾಡಿದ ಇವರು ಹಿಂದೆ 300 ಪ್ರತಿಶತ ಮೋಸ ಮಾಡುತ್ತಾರೆ ಎಂಬುದಂತೂ ನಿಜ.’

ಗೌರಿ ಲಂಕೇಶ್ ಬಹಳ ಕಾಲ ಇಂಗ್ಲೀಷ್ ಪತ್ರಕರ್ತೆಯಾಗಿದ್ದರು. ಬಹಳಷ್ಟು ಖ್ಯಾತಿಯನ್ನು ಪಡೆದಿದ್ದರೂ ಅವರಿಗೆ ಮುಕ್ತಿ ಸಿಕ್ಕಿದ್ದು ಅವರು ಕನ್ನಡ ಪತ್ರಕರ್ತೆಯಾದ ಬಳಿಕ! ಕನ್ನಡದ ಮೂಲಕ ಗೌರಿ ಸಮಾಜದ ಭಾಷೆಯನ್ನು ಅರಿತುಕೊಂಡರು. ಗೌರಿಯವರೇ ಬರೆದುಕೊಂಡಂತೆ ಶಾಲಾ ದಿನಗಳಲ್ಲಿ ಎರಡು ಬಾರಿ ಅವರು ಕನ್ನಡದಲ್ಲಿ ಫೇಲ್ ಆಗಿದ್ದರು. ಮೂರನೇ ಬಾರಿ ಪಾಸಾಗಿದ್ದರು. ಈಗ ಗೌರಿ ಜನರ ಪತ್ರಕರ್ತೆಯಾಗಿದ್ದಾಳೆ.

ಚಂದನ್ ಗೌಡ ಅವರು ಇಂಗ್ಲೀಷಿಗೆ ಅನುವಾದಿಸಿದ ಗೌರಿಯವರ ಪುಸ್ತಕವನ್ನು ಓದುತ್ತಿದ್ದೆ. “ಇಂಗ್ಲೀಷ್ ಭಾರತದ ಶ್ರೀಮಂತ ಜನರ ತೋರಿಕೆಯ ಭಾಷೆ.ಯಾವ ಭಾಷೆಯಲ್ಲಿ ನಮ್ಮತನ ಇರುವುದಿಲ್ಲವೋ, ಅಂತಹ ಭಾಷೆಯಲ್ಲಿ ಸರಿಯಾದ ಅಭಿವ್ಯಕ್ತಿ ಸಾಧ್ಯವಿಲ್ಲ” ಎಂದು ನನ್ನ ತಂದೆ ಲಂಕೇಶರು ಹೇಳಿದ್ದರು ಎಂದು ಗೌರಿ ಬರೆದಿದ್ದರು. ಅದನ್ನೇ ಯು ಆರ್ ಅನಂತಮೂರ್ತಿಯವರು "ಹಿಂದಿ ಭಾರತೀಯವಾಗಬೇಕು" ಎಂದಿದ್ದರು. ಹಿಂದಿ ಭಾರತೀಯ ಯಾವಾಗ ಆಗುತ್ತದೆ ಎಂದರೆ ಕನ್ನಡ, ತಮಿಳು, ತೆಲುಗಿಗೂ ಪ್ರಾಧಾನ್ಯತೆ ಸಿಕ್ಕಿದಾಗ ಮಾತ್ರ.

‘ನಾನು ಕನ್ನಡದಲ್ಲಿ ಬರೆಯಲು ಶುರು ಮಾಡಿದ ನಂತರವೇ ನನಗೆ ಅಭಿವ್ಯಕ್ತಿಯ ಸ್ವಾತಂತ್ರ್ಯ ಸಿಕ್ಕಿತು ಎಂದು ಗೌರಿ ಲಂಕೇಶ್ ಹೇಳುತ್ತಾರೆ. ವಿಪರ್ಯಾಸ ಮತ್ತು ದುಃಖದ ಸಂಗತಿಯೆಂದರೆ ಇಂತಹ ಮಹಾನ್ ಪತ್ರಕರ್ತೆಯನ್ನು ಗುಂಡು ಹೊಡೆದು ಕೊಲ್ಲಲಾಯಿತು’. ಬೆಂಗಳೂರಿನ ಸಾಫ್ಟ್ ವೇರ್ ಲೋಕದ ಆಧುನಿಕ ಯುವ ಸಮಾಜಕ್ಕೆ ಗೌರಿ ಸಾವಿನ ಪಶ್ಚಾತಾಪ ತಟ್ಟುತ್ತಿಲ್ಲವೇ? ನಿಮ್ಮ ನಗರದಲ್ಲೇ ನಿಮ್ಮ ಪರವಾಗಿದ್ದ ಪತ್ರಕರ್ತೆಯೊಬ್ಬರನ್ನು ಗುಂಡು ಹೊಡೆದು ಸಾಯಿಸಲಾಯಿತು. ಒಬ್ಬ ಪತ್ರಕರ್ತನ ಕೊಲೆ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಪ್ರಜಾಪ್ರಭುತ್ವದ ಮೇಲಿನ ನಂಬಿಕೆ ಕಳೆದು, ನಮ್ಮನ್ನು ಯಾರು ಯಾವಾಗ ಬೇಕಾದರೂ ಕೊಲ್ಲಬಹುದು ಎಂಬ ಭಾವನೆ ಜನರಲ್ಲಿ ಬರಲು ಶುರುವಾಗುತ್ತದೆ.

ವಿಪರ್ಯಾಸವೆಂದರೆ ಗೌರಿಯನ್ನು ಕೊಂದವರ ಜೊತೆಯೂ ಜನ ನಿಂತುಕೊಂಡಿದ್ದಾರೆ. ಹತ್ಯೆಕೋರರ ಜೊತೆಯೂ ಸಮಾಜ ನಿಲ್ಲುತ್ತದೆ ಎಂದರೆ ಎಚ್ಚರವಹಿಸಬೇಕು. ಹತ್ಯೆಕೋರರು, ಮಾರಕ ವಸ್ತುಗಳು, ಗುಂಡುಗಳ ಜೊತೆ ನಿಂತವರಿಗೆ ಒಂದು ಇತಿಹಾಸವೇ ಇದೆ. ನೆನಪಿಡಿ – ಗಾಂಧೀಜಿ ಮತ್ತಷ್ಟೂ ಮುಖ್ಯವಾಗಿದ್ದು ಅವರನ್ನು ದುಷ್ಕರ್ಮಿಗಳು ಕೊಂದ ಬಳಿಕವೇ!

“ಗೋಡ್ಸೆಜೀ ಪಿಸ್ತೂಲನ್ನು ಹರಾಜಿನಲ್ಲಿ ಪಡೆದುಕೊಂಡು ನೋಡಿ, ಅವರು ದೇಶಭಕ್ತರೋ ಉಗ್ರವಾದಿಯೋ ಎಂದು ಗೊತ್ತಾಗುತ್ತದೆ" ಎಂದು ಬಿಜೆಪಿಯ ಐಟಿ ಸೆಲ್ ನಾಯಕನೊಬ್ಬ ಬರೆಯುತ್ತಾನೆ. ಈ ಮಟ್ಟಕ್ಕೆ ಪರಿಸ್ಥಿತಿ ತಲುಪಿದೆ ಎಂದರೆ ಅರ್ಥ ಮಾಡಿಕೊಳ್ಳಿ. ಗೋಡ್ಸೆಯನ್ನು ಜೀ ಎಂದು ಕರೆಯುವ ಆತ ಈ ದೇಶದಲ್ಲಿರುವುದು ನಾವು ಮಾಡಿದ ಯಾವ ತಪ್ಪಿನ ಶಿಕ್ಷೆ? ‘ಗೋಡ್ಸೆಯ ಪಿಸ್ತೂಲ್ ಖರೀದಿ ಮಾಡಿದ್ರೆ ಆತ ದೇಶಭಕ್ತನಾಗುತ್ತಾನೆ ಎಂದರೆ ಗಾಂಧಿಯ ಊರುಗೋಲು ಹಿಡಿದುಕೊಂಡು ನಡೆದವನು ದೇಶದ್ರೋಹಿಯೆಂದು ಅರ್ಥವೇ? ಈಗಲೂ ನಾವು ಸುಮ್ಮನಿದ್ದರೆ, ನಮ್ಮ ಒಂದು ದಿನದ ಮೌನ ಈ ಸಮಾಜಕ್ಕೆ ನೂರು ದಿನಗಳ ಶಿಕ್ಷೆ ನೀಡುತ್ತದೆ.’ ಹಾಗಾಗಿ ಮೌನ ಮುರಿಯಬೇಕಿದೆ.

ನಾವೆಲ್ಲರೂ ದೇಶವನ್ನು ಪ್ರೀತಿಸುತ್ತೇವೆ. ಆದರೆ ಟಿವಿ ಮಾಧ್ಯಮಗಳು ಮಾತ್ರ ಯಾಕೆ ಇಂಡಿಯಾ ಇಂಡಿಯಾ ಎಂದು ಬೊಬ್ಬಿರಿಯುತ್ತಿದೆ? ಈ ರೀತಿ ಇಂಡಿಯಾ ಇಂಡಿಯಾ ಎನ್ನುವವರು ವಿದೇಶದಲ್ಲಿ ಕೆಲಸ ಮತ್ತು ಐಶರಾಮಿ ಬದುಕಿಗಾಗಿ ವೀಸಾ ಪಡೆದು ಕಾದು ಕುಳಿತಿರುವವರು. ನಾವು ನಿಜವಾದ ದೇಶಪ್ರೇಮಿಗಳು ಭಾರತದಲ್ಲೇ ಇದ್ದೇವೆ. ನಕಲಿ ದೇಶಪ್ರೇಮಿಗಳು ಹ್ಯೂಸ್ಟನ್ ನಲ್ಲಿ ದೇಶಪ್ರೇಮದ ಹವಾ ಎಬ್ಬಿಸುತ್ತಿದ್ದಾರೆ. ನಾವು ಹ್ಯೂಸ್ಟನ್ ನಲ್ಲಿ ಇಲ್ಲ. ನಾವೆಲ್ಲರೂ ಬೆಂಗಳೂರಿನಲ್ಲೇ ಇದ್ದೇವೆ. ನಾವು ಕೇವಲ ಈ ನೆಲದ ಮಣ್ಣು, ಗಡಿಗಳನ್ನು ಪ್ರೀತಿಸುತ್ತಿಲ್ಲ. ಅದರೊಳಗಿರುವ ಸರ್ವ ಜೀವಿಗಳನ್ನೂ ಪ್ರೀತಿಸುತ್ತೇವೆ.

ಕನ್ನಡಿಗರಿಗೆ ಹೃದಯ ತುಂಬಿ ಧನ್ಯವಾದಗಳು! ‘ಇಲ್ಲಿ ಮಾತಿನ ಜೊತೆ ಹಾಡುಗಳೂ ಇವೆ. ಹಾಡುಗಳು ನನಗೆ ಅರ್ಥ ಆಗದೇ ಇದ್ದರೂ ಅದು ಏನನ್ನು ಧ್ವನಿಸುತ್ತದೆ ಎಂದು ಬಲ್ಲವನಾಗಿದ್ದೇನೆ. ಜೆನ್ನಿಯವರೇ, ನೀವು ಹಾಡಿನ ಮೂಲಕ ಗೌರಿ ಲಂಕೇಶರನ್ನು ಇಲ್ಲಿಗೆ ತಂದಿದ್ದೀರಿ’. ನೀವು ಪತ್ರಕರ್ತೆಯೊಬ್ಬರಿಗಾಗಿ ಈ ಸಂಜೆಯಲ್ಲಿ ಸೇರಿದ್ದೀರಿ. ನೀವು ನನಗೆ ಕೊಟ್ಟ ಗೌರವ, ಪ್ರೀತಿಯನ್ನು ಜೀವನಪೂರ್ತಿ ನೆನಪಿಟ್ಟುಕೊಳ್ಳುತ್ತೇನೆ. ಇಂದಿರಾಜಿ, ಕವಿತಾಜೀ, ತೀಸ್ತಾ, ಡಿ ಉಮಾಪತಿಜೀ, ನನ್ನ ಪ್ರೀತಿಯ ತಾತ ದೊರೆಸ್ವಾಮಿಯವರು ಮತ್ತು ಭಾಷೆಯ ಭಂಡಾರವೇ ಆಗಿರುವ ಗಣೇಶ್ ದೇವಿಯವರಿಗೆ ಆಭಾರಿ. ನೀವೆಲ್ಲ ಒಬ್ಬ ಪತ್ರಕರ್ತೆಯ ನೆನಪಲ್ಲಿ ಪ್ರಜಾಪ್ರಭುತ್ವ ಉಳಿಸಲು ಒಟ್ಟು ಸೇರಿದ್ದೀರಿ. ಉತ್ತರ ಭಾರತದಲ್ಲಿ ಈ ರೀತಿಯ ಪ್ರತಿರೋಧವನ್ನು ನೋಡಲೂ ಸಾಧ್ಯವಿಲ್ಲ. ಆದ್ದರಿಂದ ಹಿಂದಿ ಭಾಷಿಕ ರಾಜ್ಯಗಳು ಕರ್ನಾಟಕದಿಂದ ಕಲಿಯುವುದು ಬಹಳಷ್ಟಿದೆ. ಯಾರಾದರೂ ಹಿಂದಿ ಭಾಷಿಕ ನಿಮಗೆ ಸಿಕ್ಕಿದರೆ ಅವನನ್ನೂ ನಿಮ್ಮವನನ್ನಾಗಿಸಿಕೊಂಡು ಪ್ರಜಾಸತ್ತಾತ್ಮಕಗೊಳಿಸಿ. ಎಲ್ಲರಿಗೂ ಒಳ್ಳೆಯದಾಗಿ. ಜೈ ಹಿಂದ್

ಬರಹ ರೂಪ – ನವೀನ್ ಸೂರಿಂಜೆ







ಆಳಗೊಳ್ಳುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಹೆಚ್ಚುತ್ತಿರುವ ಜನಗಳ ಸಂಕಟಗಳ ವಿರುದ್ಧ ಅಖಿಲ ಭಾರತ ಪ್ರತಿಭಟನೆ

ಪುಟ 9 ರಿಂದ

ಇಲ್ಲ, ಇದರ ಫಲಿತಾಂಶವಾಗಿ ನಮ್ಮ ದುಡಿಯುವ ಜನತೆಯ ಬಹುಪಾಲು ವಿಭಾಗಗಳ ಸಂಕಟ ಇನ್ನಷ್ಟು ಹೆಚ್ಚುತ್ತಿವೆ, ಈ ಪ್ರಶ್ನೆಗಳನ್ನು ಎದುರಿಸುವ ಬದಲು ಮೋದಿ ಸರಕಾರ ಧ್ರುವೀಕರಣವನ್ನು ಆಳಗೊಳಿಸುವ ಭಾವೋನ್ಮಾದಗಳನ್ನು ಬಡಿದೆಬ್ಬಿಸಿ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿದೆ

ಎಂಬ ಬಗ್ಗೆ ಆಳವಾದ ಆತಂಕವನ್ನು ವ್ಯಕ್ತಪಡಿಸುತ್ತದೆ;

ಆಗಿರುವ ಅಲ್ಪ-ಸ್ವಲ್ಪ ವೃದ್ಧಿಯ ಫಲಗಳನ್ನೂ ಮೋದಿ ಸರಕಾರದ ಬಂಟ ಬಂಡವಾಳಶಾಹಿಯಿಂದಾಗಿ ಅತಿ-ಶ್ರೀಮಂತರ ಒಂದು ಸಣ್ಣ ವಿಭಾಗವೇ ಹೆಚ್ಚೆಚ್ಚಾಗಿ ಬಾಚಿಕೊಳ್ಳುತ್ತಿದೆ. ಸರಕಾರ ಈಗ ಅತಿ-ಶ್ರೀಮಂತರ ಮೇಲೆ ಪ್ರಕಟಿಸಿದ ತೆರಿಗೆ ಸರ್ಚಾರ್ಜ್‌ಗಳನ್ನು ಹಿಂತೆಗೆದುಕೊಂಡಿದೆ. ಅಪಾರವಾದ ಮತ್ತು ತ್ವರಿತವಾಗಿ ಹೆಚ್ಚುತ್ತಿರುವ ಅಸಮಾನತೆಯ ಮಟ್ಟಗಳು ಭಾರತವನ್ನು ಜಗತ್ತಿನ ಅತ್ಯಂತ ಅಸಮಾನ ಸಮಾಜಗಳಲ್ಲಿ ಒಂದಾಗಿಸಿದೆ. ಇದು ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಒಂದು ಅನಿವಾರ್ಯ ಪರಿಣಾಮ

ಎಂದು ಅಸಂದಿಗ್ಧವಾಗಿ ಖಂಡಿಸುತ್ತದೆ;

ಭಾರತೀಯ ಅರ್ಥವ್ಯವಸ್ಥೆ ಬಹುಪಾಲು ಜನತೆಯ ನಡುವೆ ಕೊಳ್ಳುವ ಸಾಮರ್ಥ್ಯದ ಕೊರತೆಯಿಂದಾಗಿ ಆಂತರಿಕ ಬೇಡಿಕೆ ತೀವ್ರರೀತಿಯಲ್ಲಿ ಕುಗ್ಗಿರುವ ಸಮಸ್ಯೆಯಿಂದ ನರಳುತ್ತಿದೆ ಎಂಬುದು ಸ್ಪಷ್ಟವಾಗಿದೆ, ಜನಗಳ ಕೊಳ್ಳುವ ಸಾಮರ್ಥ್ಯ ಹೆಚ್ಚದೆ ಆಂತರಿಕ ಬೇಡಿಕೆ ಹೆಚ್ಚುವುದಿಲ್ಲ, ಅದರಿಂದಾಗಿ, ತಯಾರಿಕೆ ಮತ್ತು ಕೈಗಾರಿಕಾ ವಲಯದಲ್ಲಿ ಸ್ಥಗಿತತೆ ಮತ್ತು ಇಳಿಕೆ ಮತ್ತಷ್ಟು ಉಲ್ಬಣಗೊಳ್ಳುತ್ತದೆ, ಮೂಲರಚನೆಗಳಲ್ಲಿ ಬೃಹತ್ ಪ್ರಮಾಣದ ಹೂಡಿಕೆಯಿಂದ ಮಾತ್ರವೇ ಹೊಸ ಉದ್ಯೋಗಗಳನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಿಸುವುದು, ಮತ್ತು ಆಮೂಲಕ ಜನಗಳ ಕೊಳ್ಳುವ ಸಾಮರ್ಥ್ಯವನ್ನು ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು ಸಾಧ್ಯ

ಎಂದು ಗಂಭೀರ ಆತಂಕದಿಂದ ಗಮನಿಸುತ್ತದೆ;

ಇದನ್ನು ಮಾಡುವ ಬದಲು ಮೋದಿ ಸರಕಾರ ಮತ್ತೊಮ್ಮೆ ಖಾಸಗಿ ಬಂಡವಾಳಕ್ಕೆ ಹೆಚ್ಚಿನ ರಿಯಾಯ್ತಿಗಳನ್ನು ಕೊಡಲು ಪ್ರಯತ್ನಿಸುತ್ತಿದೆ, ಅದರಿಂದ ಊಡಿಕೆ ಮಟ್ಟಗಳು ಏರುತ್ತವೆ ಮತ್ತು ಭಾರತದ ರಫ್ತುಗಳನ್ನು ವಿಸ್ತರಿಸುವತ್ತ ಗುರಿಯಿಡುವ ನಿರೀಕ್ಷೆಯಿಟ್ಟುಕೊಂಡಿದೆ, ಹಣಕಾಸು ಮಂತ್ರಿಗಳು ಇತ್ತೀಚೆಗೆ 70,000 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ವೆಚ್ಚದ ಕ್ರಮಗಳನ್ನು ಪ್ರಕಟಿಸಿ ಮಾಡಿರುವುದು ಇದನ್ನೇ. ರಿಯಲ್ ಎಸ್ಟೇಟ್ ವ್ಯವಹಾರಗಳು ಮತ್ತು ವಸತಿ ವಲಯಗಳ ಮೇಲೆ ಗುರಿಯಿಟ್ಟು ಸರಕಾರಕ್ಕೆ ಮತ್ತೊಮ್ಮೆ, ಜನಗಳ ಬಳಿ ಮನೆ ಕೊಳ್ಳಲು ಹಣವಿಲ್ಲದ್ದರಿಂದಲೇ ಮನೆಗಳ ಖರೀದಿ ನಡೆಯುತ್ತಿಲ್ಲ ಎಂಬ ಸಂಗತಿಯ ಅರಿವು ಇಲ್ಲವೆಂದಾಗಿದೆ. ಜಾಗತಿಕ ವ್ಯಾಪಾರದ ಮಂದಗತಿಯಿಂದಾಗಿ ಜಾಗತಿಕ ವ್ಯಾಪಾರ ಪರಿಮಾಣಗಳು ತೀಕ್ಷ್ಣವಾಗಿ ಇಳಿಯುತ್ತಿರುವ ಒಂದು ಸನ್ನಿವೇಶದಲ್ಲಿ ಭಾರತದ ರಫ್ತುಗಳನ್ನು ಉತ್ತೇಜಿಸುವ ಯಾವುದೇ ಪ್ರಯತ್ನ ಯಶಸ್ವಿಯಾಗುತ್ತದೆ

ಎಂಬುದರ ಬಗ್ಗೆ ಬಲವಾದ ಅಸಮ್ಮತಿ ವ್ಯಕ್ತಪಡಿಸುತ್ತದೆ.

ಇಂತಹ ಪರಿಸ್ಥಿತಿಗಳಲ್ಲಿ

ರಿಝರ್ವ್ ಬ್ಯಾಂಕಿನಿಂದ ತೆಗೆದುಕೊಂಡ 1.76 ಲಕ್ಷ ಕೋಟಿ ರೂ.ಗಳನ್ನು ಕಳೆದ ವರ್ಷ ನೋಟುರದ್ದತಿ ಮತ್ತು ಜಿಎಸ್‌ಟಿಯಿಂದಾಗಿ ಆಗಿರುವ 1.7 ಲಕ್ಷ ಕೋಟಿ ರೂ.ಗಳ ರೆವಿನ್ಯೂ ಕೊರತೆಯನ್ನು ತುಂಬಲು ಬಳಸದೆ, ಉದ್ಯೋಗಗಳನ್ನು ನಿರ್ಮಿಸುವ ಮತ್ತು ದೇಶದೊಳಗಿನ ಬೇಡಿಕೆಗಳನ್ನು ಹೆಚ್ಚಿಸುವ ಸಾರ್ವಜನಿಕ ಹೂಡಿಕೆಗಳಿಗೆ ಬಳಸಬೇಕು ಎಂದು ಎಡಪಕ್ಷಗಳು ಆಗ್ರಹಿಸುತ್ತವೆ.

ಆದ್ದರಿಂದ ಈ ಸಮಾವೇಶ

- ಉದ್ಯೋಗಾವಕಾಶ ನಿರ್ಮಾಣಕ್ಕೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು, ಮತ್ತು ಅದುವರೆಗೆ ಕೇಂದ್ರ ಸರಕಾರ ಯುವಜನರಿಗೆ ನಿರುದ್ಯೋಗ ಭತ್ಯೆ ಕೊಡಬೇಕು
- ಕನಿಷ್ಟ ಮಾಸಿಕ ವೇತನ ರೂ.18,000 ಖಾತ್ರಿಗೊಳಿಸಬೇಕು
- ಉದ್ಯೋಗದಿಂದ ತೆಗೆದುಹಾಕಿರುವ ಅಪಾರ ಸಂಖ್ಯೆಯ ಕಾರ್ಮಿಕರಿಗೆ ಮಾಸಿಕ ಬದುಕುವ ವೇತನ ಸಿಗುವಂತೆ ಸರಕಾರ ಖಾತ್ರಿಗೊಳಿಸಬೇಕು
- ಸಾರ್ವಜನಿಕ ವಲಯದ ಖಾಸಗೀಕರಣವನ್ನು ನಿಲ್ಲಿಸಬೇಕು, ರಕ್ಷಣೆ ಮತ್ತು ಕಲ್ಲಿದ್ದಲು ವಲಯಗಳಲ್ಲಿ 100ಶೇ. ಎಫ್‌ಡಿಐ ಹಿಂತೆಗೆದುಕೊಳ್ಳಬೇಕು. ಬಿಎಸ್‌ಎನ್‌ಎಲ್, ಶಸ್ತ್ರಾಸ್ತ್ರ ಕಾರ್ಖಾನೆಗಳು, ಭಾರತೀಯ ರೈಲ್ವೆ, ಏರ್ ಇಂಡಿಯಾ ಮುಂತಾದವುಗಳ ವ್ಯಾಪಕ ಪ್ರಮಾಣದ ಖಾಸಗೀಕರಣವನ್ನು ನಿಲ್ಲಿಸಬೇಕು
- ಮನರೇಗಾದಲ್ಲಿ ಹಿಂದಿನ ಬಾಕಿ ಕೂಲಿಗಳನ್ನು ತೆರಲು ಮತ್ತು ಕನಿಷ್ಟ 200 ದಿನಗಳ ಕೆಲಸ ಒದಗಿಸಲು ಅದಕ್ಕೆ ಹಣನೀಡಿಕೆಯನ್ನು ಹೆಚ್ಚಿಸಬೇಕು
- ಕರ್ಷಕ ಸಂಕಟವನ್ನು ಎದುರಿಸಲು, ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳನ್ನು ತಡೆಯಲು ರೈತರಿಗೆ ಒಂದು ಬಾರಿಯ ಸಾಲಮನ್ನಾ, ಲಾಗುವಾಡುಗಳ ವೆಚ್ಚದ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯ ಪ್ರಕಟಣೆ ಮತ್ತು ಜಾರಿ
- ವಯಸ್ಸಾದವರಿಗೆ ಮತ್ತು ವಿಧವೆಯರಿಗೆ ಕನಿಷ್ಟ ಮಾಸಿಕ ಪೆನ್ಶನ್ ಮೊತ್ತವನ್ನು 3000ರೂ.ಗೆ ಏರಿಸಬೇಕು.

ಎಂದು ಆಗ್ರಹಿಸುತ್ತದೆ.

ಈ ಪ್ರಶ್ನೆಗಳ ಮೇಲೆ ಪ್ರತಿಭಟನೆ ನಡೆಸಲು ಮತ್ತು ಈ ಬೇಡಿಕೆಗಳನ್ನು ಮೋದಿ ಸರಕಾರ ತಕ್ಷಣವೇ ಜಾರಿಗೊಳಿಸಬೇಕು ಎಂದು ಆಗ್ರಹಿಸಿ

ಅಕ್ಟೋಬರ್ 10ರಿಂದ 16 ರವರೆಗೆ ದೇಶಾದ್ಯಂತ ಪ್ರತಿಭಟನಾ ಚಟುವಟಿಕೆಗಳನ್ನು ಸಂಘಟಿಸಲು ತಮ್ಮ ಎಲ್ಲ ಘಟಕಗಳಿಗೆ ಕರೆ ನೀಡಲು

ಎಡಪಕ್ಷಗಳ ಈ ಸಮಾವೇಶ ನಿರ್ಣಯಿಸುತ್ತದೆ..

ಒಂದು ಜನತಾ ಪ್ರತಿಭಟನಾ ಆಂದೋಲನವನ್ನು ಕಟ್ಟಿ ಬೆಳೆಸಲು ಈ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಸೇರಿಕೊಳ್ಳಬೇಕು ಎಂದು

ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಈ ಸಮಾವೇಶ ಮನವಿ ಮಾಡುತ್ತದೆ.

ಮಾರ್ಕ್ಸ್‌ವಾದ ಮತ್ತು ಡಿಜಿಟಲ್ ವರ್ತಮಾನ......

ಪುಟ 6 ರಿಂದ

ಅನುಭವಿಸಲು ಮಾತ್ರ ಖರೀದಿ ಮಾಡುವವರು ಅಥವಾ ಮಾರಾಟ ಮಾಡುವವರು ಗ್ರಾಹಕರು. ವಸ್ತು-ಸೇವೆಗಳ ವಿನಿಮಯ ಮೌಲ್ಯಗಳಿಗಾಗಿ ಮಾತ್ರ ಅವನ್ನು ಹಣದೊಂದಿಗೆ, ಮತ್ತು ಹಣವನ್ನು ವಸ್ತುಗಳೊಂದಿಗೆ ವಿನಿಮಯಮಾಡಿಕೊಳ್ಳುವವರು, ಅಂದರೆ, ಮಾರುವುದು ಮತ್ತು ಕೊಳ್ಳುವುದು ಎರಡನ್ನೂ ಒಬ್ಬರೇ ಮಾಡುವವರು ವ್ಯಾಪಾರಿಗಳು. ಅದೇ ವ್ಯಾಪಾರ. ಹೀಗೆ ವಿನಿಮಯಕ್ಕಾಗಿಯೇ ತಯಾರಿಸುವ ಉತ್ಪನ್ನಗಳನ್ನು ಸರಕುಗಳು ಎನ್ನುತ್ತಾರೆ. ಸರಕುಗಳ ತಯಾರಿಕೆಯಲ್ಲಿ ವ್ಯಾಪಾರ ಅಂತರ್ಗತವಾಗಿದೆ. ಆದ್ದರಿಂದ ಸರಕಿನ ತಯಾರಿಕೆ ಒಂದು ವ್ಯಾಪಾರೋದ್ಯಮ.


ಜೀವನಾಧಾರ ವಸ್ತು-ಸೇವೆಗಳನ್ನು ವಿನಿಮಯ ಮೌಲ್ಯಕ್ಕಾಗಿಯೇ, ಅಂದರೆ ವ್ಯಾಪಾರಕ್ಕಾಗಿಯೇ ಉತ್ಪಾದನೆ ಮಾಡುವವರು ಬಂಡವಳಿಗರು. ಬಂಡವಳಿಗರೆಂದರೆ ಸರಕುಗಳ ಉತ್ಪಾದನೆಗೆ ಬಂಡವಾಳವನ್ನು ತೊಡಗಿಸುವವರು. ಬಂಡವಾಳವೆಂದರೆ ಎಂದೋ ಸಂಚಯಮಾಡಿದ ಶ್ರಮದ ಮೌಲ್ಯ. ಆದ್ದರಿಂದ ಅದು ಸಂಚಿತ ಶ್ರಮ ಅಥವಾ ನಿರ್ಜೀವ ಶ್ರಮ. ಅದಕ್ಕೆ ಶ್ರಮಿಕರ ಜೀವಂತಶ್ರಮವನ್ನು ಖರೀದಿಸಿ ಸೇರಿಸದಿದ್ದರೆ ಯಾವ ಉತ್ಪಾದನೆಯೂ ಸಾಧ್ಯವಿಲ್ಲ. ಬಂಡವಳಿಗನಿಗೆ ಶ್ರಮಶಕ್ತಿಯನ್ನು ಮಾರುವವರೆಲ್ಲರೂ ಶ್ರಮಿಕರೆ. ಅವರು ತಮ್ಮ ಅಸ್ತಿತ್ವಕ್ಕಾಗಿ ಜೀವನಾಧಾರ ವಸ್ತು-ಸ್ಥಿತಿಗಳನ್ನು ಖರೀದಿಸಲು ತಮ್ಮಲ್ಲಿರುವ ಶ್ರಮಶಕ್ತಿಯನ್ನು ಬಂಡವಳಿಗನಿಗೆ ಮಾರುವುದು ಅನಿವಾರ್ಯ. ಅಂದರೆ, ಇಡೀ ವಿಶ್ವದ ವ್ಯಾಪಾರೋದ್ಯಮದಲ್ಲಿ ನಡೆಯುವ ಎಲ್ಲಬಗೆಯ ಸರಕು ಮತ್ತು ಹಣದ ನಡುವೆ ನಡೆಯುವ ವಿನಿಮಯಗಳಿಗೆ ಶ್ರಮಿಕರ ಶ್ರಮಶಕ್ತಿ ಮತ್ತು ಬಂಡವಳಿಗರ ಹಣದ ನಡುವೆ ನಡೆಯುವ ವಿನಿಮಯವೇ ಮೂಲಾಧಾರ.

ಬಹುತೇಕ ಸರಕುಗಳಿಗೆಉಪಯುಕ್ತ ಮೌಲ್ಯ ಮತ್ತು ವಿನಿಮಯ ಮೌಲ್ಯ ಎಂಬ ಎರಡು ಬಗೆಯ ಮೌಲ್ಯಗಳಿವೆ ಎಂಬುದನ್ನು ನೋಡಿದ್ದೇವೆ. ವಿನಿಮಯ ಮೌಲ್ಯಕ್ಕೆ ಆಧಾರ ಉಪಯುಕ್ತ ಮೌಲ್ಯ. ಅದಿಲ್ಲದ ಸರಕುಗಳನ್ನು ಯಾರೂ ಕೊಂಡುಕೊಳ್ಳುವುದಿಲ್ಲ. ಆದರೆ ಇದು ಎಲ್ಲ ಸರಕುಗಳ ವಿಷಯದಲ್ಲೂ ನಿಜವಲ್ಲ. ಕೆಲವು ಸರಕುಗಳಿಗೆ ಉಪಯುಕ್ತ ಮೌಲ್ಯ ಇಲ್ಲದೆ ವಿನಿಮಯ ಮೌಲ್ಯ ಮಾತ್ರ ಇರುತ್ತದೆ. ಉದಾಹರಣೆಗೆ ಅಲಂಕಾರದ ವಸ್ತುಗಳು. ಕಲಾಕೃತಿಗಳು, ಬ್ರಾಂಡ್‌ನೇಮ್ ಇತ್ಯಾದಿ. ಶೋಕೇಸಿನಲ್ಲಿಟ್ಟ ತೆಂಗಿನ ಚಿಪ್ಪು ಅಥವಾ ಕೋಣೆಯ ಮೂಲೆಯಲ್ಲಿಟ್ಟ ಪ್ಲಾಸ್ಟಿಕ್ ಹೂಜಿ, ಅದರೊಳಗೆ ಜೋಡಿಸಿದ ಕೃತಕಹೂಗಳ ವಿನಿಮಯ ಮೌಲ್ಯ ಸಾವಿರಾರು ರೂ. ಆಗಿರಬಹುದು. ವಿನಿಮಯದ ಮಾಧ್ಯಮವಾದ ಹಣಕ್ಕೆ ತನ್ನದೇ ಆದ ಉಪಯುಕ್ತ ಮೌಲ್ಯ ಇಲ್ಲ ಎಂಬುದನ್ನೂ ಈ ಮೊದಲೇ ನೋಡಿದ್ದೇವೆ. ಹಾಗಿದ್ದರೂ ವಿನಿಮಯ ಮೌಲ್ಯವಿರುವ ಎರಡು ಸರಕುಗಳ ನಡುವೆ ಹಣದ ಮೂಲಕ ನಡೆಯುವ ವಿನಿಮಯವು ಪರಸ್ಪರ ಸಮನಾದ ಮೌಲ್ಯಗಳ ನಡುವೆ ನಡೆಯುತ್ತದೆ.

ಸರಕಿನ ಮೌಲ್ಯವು ಹೇಗೆ ಉಂಟಾಗುತ್ತದೆ ಅಥವಾ ಎಲ್ಲಿಂದ ಬರುತ್ತದೆ ಎಂಬ ಬಗ್ಗೆ ಮಾರ್ಕ್ಸ್‌ಗಿಂತ ಹಿಂದೆ ಇದ್ದ ಮತ್ತು ಅವರ ಸಮಕಾಲೀನ ಅರ್ಥಶಾಸ್ತ್ರಜ್ಞರಲ್ಲಿ ಸ್ಪಷ್ಟತೆ ಇರಲಿಲ್ಲ. ಮಾರ್ಕ್ಸ್ ಅದನ್ನು ಸ್ಪಷ್ಟಪಡಿಸಿದರು. ಎಲ್ಲ ಸರಕುಗಳ ನಡುವೆ ಇರುವ ಸಮಾನ ಅಂಶ ಹಣವಲ್ಲ, ಮಾನವ ಶ್ರಮ ಮತ್ತು ಸರಕುಗಳನ್ನು ತಯಾರಿಸಲು ತೆಗೆದುಕೊಂಡ ಕಾಲ. ಇದನ್ನೇ ಸರಳವಾಗಿ ಶ್ರಮದಿನ ಎನ್ನುತ್ತಾರೆ. ತನ್ನ ಜೀವನಾಧಾರ ವಸ್ತು-ಸ್ಥಿತಿಗಳನ್ನು ಪಡೆಯುವುದಕ್ಕಾಗಿ ಶ್ರಮಿಕನು ತನ್ನ ಶ್ರಮಶಕ್ತಿಯನ್ನು ಬಂಡವಳಿಗನು ಒಂದು ದಿನದ ವೇತನವಾಗಿ ಕೊಡುವ ಹಣಕ್ಕೆ ವಿನಿಮಯ ಮಾಡಿಕೊಳ್ಳುತ್ತಾನೆ. ಅಂದರೆ ಶ್ರಮಿಕನು ಬಂಡವಳಿಗನಿಗೆ ತನ್ನ ಶ್ರಮಶಕ್ತಿಯನ್ನು ಮಾರುತ್ತಾನೆ. ಹೀಗಾಗಿ ಶ್ರಮಶಕ್ತಿ ಮತ್ತು ಹಣವನ್ನು ಸರಕುಗಳೆಂದು ಪರಿಗಣಿಸಿದರೆ ಅವುಗಳ ನಡುವೆ ನಡೆಯುವ ವಿನಿಮಯವು ಪರಸ್ಪರ ಸಮನಾದ ಮೌಲ್ಯಗಳ ನಡುವೆ ನಡೆಯುವ ವಿನಿಮಯವಾಗಿರುವುದಿಲ್ಲ. ಏಕೆಂದರೆ ಬಂಡವಳಿಗನು ಶ್ರಮಿಕನಿಗೆ ಕೊಡುವ ಒಂದು ದಿನದ ವೇತನವು ಶ್ರಮಿಕನು ಬಂಡವಳಿಗನಿಗೆ ಮಾರುವ ಶ್ರಮಶಕ್ತಿಯ ಒಂದು ಭಾಗಕ್ಕೆ ಮಾತ್ರ ಸಮನಾಗಿರುತ್ತದೆ. ಉಳಿದ ಭಾಗವು ವೇತನರಹಿತವಾದ ಬಿಟ್ಟಿ ದುಡಿಮೆಯಾಗಿರುತ್ತದೆ. ಉದಾಹರಣೆಗೆ 12 ಗಂಟೆ ಕೆಲಸಕ್ಕೆ ಬಂಡವಳಿಗನು ಕೊಡುವ 400 ರೂ ವೇತನದ ಮೌಲ್ಯವನ್ನು ಶ್ರಮಿಕನು ಮೊದಲ 6 ಗಂಟೆಯ ಶ್ರಮದಲ್ಲೇ ಹಿಂದಿರುಗಿಸಿರುತ್ತಾನೆ. ಉಳಿದ 6 ಗಂಟೆಯ ಶ್ರಮದ ಮೌಲ್ಯವು ಬಂಡವಳಿಗನಿಗೆ ಪುಕ್ಕಟೆಯಾಗಿ ದೊರೆಯುತ್ತದೆ. ಈ ಲೆಕ್ಕಾಚಾರಕ್ಕೆ ಆಧಾರ ಶ್ರಮಿಕನು ಬಂಡವಳಿಗನಿಗಾಗಿ ಶ್ರಮವನ್ನು ಖರ್ಚುಮಾಡುವ ಮುಂಚೆಯೇ ಅವನ ದೇಹದಲ್ಲಿ ಸಂಚಯವಾದ ಶ್ರಮಶಕ್ತಿಯು ಸಿದ್ಧವಾಗಿರುತ್ತದೆ. ಅದನ್ನು ಬಂಡವಳಿಗನಿಗಾಗಿ ಖರ್ಚುಮಾಡಿದಮೇಲೆ ಆ ಶ್ರಮಶಕ್ತಿಯನ್ನು ಮತ್ತೆ ಪಡೆಯಲು ಅವನು ಖರ್ಚುಮಾಡಬೇಕಾದ ಜೀವನಾಧಾರ ವಸ್ತು-ಸ್ಥಿತಿಗಳ ಮೌಲ್ಯವು ಬಂಡವಳಿಗನು ಅವನಿಗೆ ಕೊಡುವ ವೇತನದ ಮೌಲ್ಯಕ್ಕೆ ಸರಿಸುಮಾರಾಗಿ ಸಮನಾಗಿರುತ್ತದೆ. ಅಥವಾ ಅದಕ್ಕಿಂತ ಕಡಿಮೆಯಿರಲೂಬಹುದು. ಈ ಲೆಕ್ಕಾಚಾರದಂತೆ ಮೊದಲ 6 ಗಂಟೆಯ ಶ್ರಮವನ್ನು ಅಗತ್ಯ ಶ್ರಮವೆಂದೂ, ಎರಡನೆಯ 6 ಗಂಟೆಯ ಶ್ರಮವನ್ನು ಹೆಚ್ಚುವರಿ ಶ್ರಮವೆಂದೂ ಹೇಳಬಹುದು. ಅಂದರೆ ಶ್ರಮಿಕನು ತಾನು ಪಡೆಯುವುದಕ್ಕಿಂತ ಹೆಚ್ಚಿನದನ್ನು ಬಂಡವಳಿಗನಿಗೆ ಹಿಂದಿರುಗಿಸುತ್ತಾನೆ. ಹೀಗಾಗಿ, ಇದು ಸಮನಾದ ಮೌಲ್ಯಗಳ ನಡುವಿನ ವಿನಿಮಯವಾಗುವುದಿಲ್ಲ. ಬಂಡವಳಿಗನು ಮಾರುವ ಸರಕಿನ ಮೌಲ್ಯವು ಹೆಚ್ಚುವರಿ ಮೌಲ್ಯವನ್ನು ಒಳಗೊಂಡಿರುವುದರಿಂದ ಅದರೊಂದಿಗೆ ವಿನಿಮಯಗೊಳ್ಳುವ ಹಣದ ಮೌಲ್ಯವು ಹೆಚ್ಚುವರಿ ಮೌಲ್ಯವನ್ನು ಒಳಗೊಂಡಿರುತ್ತದೆ. ಇದು ಸರಕುಗಳ ನಡುವಿನ ಸಮನಾದ ಮೌಲ್ಯಗಳ ವಿನಿಮಯಕ್ಕೆ ಆಧಾರವಾದ ಶ್ರಮಮೌಲ್ಯ ಮತ್ತು ಹಣದ ಮೌಲ್ಯಗಳ ಅಸಮಾನವಾದ ವಿನಿಮಯದಲ್ಲಿನ ಗಮನಕ್ಕೆ ಬಾರದ ಅನ್ಯಾಯ. ಶೋಷಣೆ ಎಂದರೆ ಇದೇ. ಇದು ಬಂಡವಾಳಪದ್ಧತಿಗೆ ಮಾತ್ರ ಸೀಮಿತವಾದದ್ದಲ್ಲ. ಒಡೆಯ-ಗುಲಾಮ ಜಮೀನ್ದಾರ-ಗೇಣಿರೈತ, ಬಂಡವಳಿಗ-ಶ್ರಮಿಕ ಈ ಎಲ್ಲ ಶ್ರಮಸಂಬಂಧಗಳಲ್ಲೂ ಹಾಸುಹೊಕ್ಕಾಗಿರುವ, ಆದರೆ ಸುಲಭವಾಗಿ ಗುರುತಿಸಲಾಗದ ಮೂಲ ಅನ್ಯಾಯ.

ಮಾರ್ಕ್ಸ್ ತಮ್ಮ 'ಬಂಡವಾಳ' ಗ್ರಂಥದಲ್ಲಿ ಹೇಳಿರುವಂತೆ, ಹಿಂದಿನ ಸಮಾಜಗಳಲ್ಲಿನ ಕರಕುಶಲ ಕೈಗಾರಿಕೆಗಳ ಉತ್ಪಾದನಾ ಸಂಬಂಧಗಳಲ್ಲಿ ಉತ್ಪಾದನಾ ಸಾಧನಗಳು ಶ್ರಮಿಕರ ಕೈಲೇ ಇರುತ್ತಿದ್ದವು. ಕಾರ್ಖಾನೆಯ ಉತ್ಪಾದನಾ ಸಂಬಂಧಗಳಲ್ಲಿ ಇವು ಶ್ರಮಿಕರ ಕೈತಪ್ಪಿ ಬಂಡವಳಿಗರ ನಿಯಂತ್ರಣಕ್ಕೆ ಒಳಪಟ್ಟದ್ದರಿಂದ ಶೋಷಣೆಯು ಇನ್ನೂ ಗಟ್ಟಿಯಾಯಿತು ಮತ್ತು ವ್ಯಾಪಕವಾಯಿತು. ಶ್ರಮವಿಭಜನೆಯ ಕೇಂದ್ರೀಕೃತ ಶ್ರಮಸಂಬಂಧಗಳ ಉತ್ಪಾದನೆಯಲ್ಲಿ ಕುಶಲಕೈಗಾರಿಕೆಗಳು ಸಂಪೂರ್ಣವಾಗಿ ನಶಿಸಿ ಶ್ರಮಿಕರು ಬಂಡವಳಿಗರಮೇಲೆ ಮತ್ತಷ್ಟು ಅವಲಂಬಿತರಾಗಬೇಕಾಯಿತು. ಇಂಗ್ಲೆಂಡಿನಲ್ಲಿ ಕೃಷಿಕರ ಭೂಮಿಯನ್ನು ಕಿತ್ತುಕೊಂಡು, ಒಕ್ಕಲೆಬ್ಬಿಸಿ ಪಟ್ಟಣ ಪ್ರದೇಶಗಳಿಗೆ ವಲಸೆಹೋಗಿ

ಪುಟ 14 ಕ್ಕೆ



"ಸಂವಿಧಾನಕ್ಕೆ ಮೋಸ, ಕಾಶ್ಮೀರಕ್ಕೆ ವಿಶ್ವಾಸಘಾತ" ಹಾಸನದಲ್ಲಿ ಪುಸ್ತಕ ಬಿಡುಗಡೆ

ಕಾಶ್ಮೀರದ ಭಯೋತ್ಪಾದನೆಗೆ ನಿಜವಾದ ಕಾರಣ ಆರ್ಟಿಕಲ್ 370 ಅಲ್ಲ ಸಂಘಪರಿವಾರದ ನೇತೃತ್ವದಲ್ಲಿರುವ ಪ್ರಜಾಪರಿಷತ್ ಈ ಹಿಂದೆ ದೇಶವನ್ನ ಆಳಿದ ಕಾಂಗ್ರೆಸ್ ಸರ್ಕಾರ ಮತ್ತು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ಎಂದು ಸಿಪಿಐಎಂ ರಾಜ್ಯ ಸಮಿತಿ ಸದಸ್ಯ ಹಾಗೂ ಸಿಪಿಐಎಂ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಧರ್ಮೇಶ್ ತಿಳಿಸಿದರು. ಅವರು ಇತ್ತೀಚೆಗೆ ನಗರದ ಮಾನವ ಬಂಧುತ್ವ ಸಭಾಂಗಣದಲ್ಲಿ ಸಿಪಿಐಎಂ ಕೇಂದ್ರ ಸಮಿತಿ ಹೊರತಂದಿರುವ "ಸಂವಿಧಾನಕ್ಕೆ ಮೋಸ ಕಾಶ್ಮೀರಕ್ಕೆ ವಿಶ್ವಾಸಘಾತ" ಕನ್ನಡ ಪುಸ್ತಕ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಕಾಶ್ಮಿರದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಗರಿಗೆದರಿದ್ದು 1987ರ ನಂತರ 1987 ರವರೆಗೂ ಅಂದಿನ ಭಾರತ ಸರ್ಕಾರದ ಮೇಲೆ ಬಹಳ ಆಸೆಯ ಬೆಟ್ಟವನ್ನೇ ಹೊದ್ದು ಪಾಕಿಸ್ತಾನದ ಜೊತೆ, ರಾಜನ ಜೊತೆ ಹೊಡೆದಾಡಿ ಪ್ರಾಣ ತ್ಯಾಗ ಮಾಡಿ ಭಾರತದೊಳಗೆ ಸೇರಿಕೊಂಡ ಜಮ್ಮು ಕಾಶ್ಮಿರದ ಜನತೆಗೆ ಏನು ಭದ್ರತೆಯನ್ನ ಹಾಕಿ ಕೊಟ್ಟಿತು ಎಂದು ಪ್ರಶ್ನಿಸಿ ಅತಿ ಹೆಚ್ಚು ಬಾರಿ ರಾಷ್ಟ್ರಪತಿ ಆಡಳಿತ ಹೇರಿಸಿಕೊಂಡಿತು, ಕಾಶ್ಮೀರವನ್ನು ಭಾರತಕ್ಕೆ ಸೇರಿಸಲು ಫಣವಿಟ್ಟು ಹೋರಾಡಿದ ಜನ ನಾಯಕ ಶೇಖ್ ಅಬ್ದುಲ್ಲಾರನ್ನ 11 ವರ್ಷಗಳ ಕಾಲ ಜೈಲಿಗೆ ತಳ್ಳಿತು, ಚುನಾಯಿತ ಸರ್ಕಾರಗಳನ್ನ ಆಗಾಗ ಕಿತ್ತೆಸೆದು ಕೈಗೊಂಬೆ ರಾಜ್ಯಪಾಲರುಗಳನ್ನ ನೇಮಿಸಿ ಧರ್ಮ ನಿರಪೇಕ್ಷ ಕಾಶ್ಮೀರದ ಹಿಂದೂ ಮುಸ್ಲಿಮರ ನಡುವೆ ಜಗಮೋಹನ್ ಮೂಲಕ ಕಂದಕ ಸೃಷ್ಠಿ ಮಾಡಿತು, ಕಾಶ್ಮೀರಿ ಪಂಡಿತರನ್ನ ಒಕ್ಕಲೆಬ್ಬಿಸುವ ಕೆಲಸವನ್ನು ಸರಿಯಾಗಿ ನಿಭಾಯಿಸದೆ ಜಗಮೋಹನ್ ಕಾಶ್ಮೀರದಲ್ಲಿ ಉದ್ದೇಶಪೂರ್ವಕವಾಗಿ ಹಿಂದೂ-ಮುಸ್ಲಿಂರ ನಡುವೆ ಕಂದಕ ಸೃಷ್ಠಿ ಮಾಡಿದರು ಎಂದ ಅವರು ಅದೇ ಜಗಮೋಹನ್ ಈಗ ಬಿಜೆಪಿ ಸದಸ್ಯ ಎಂದು ತಿಳಿಸಿದ ಅವರು. ಈ ಜಗಮೋಹನರ ದುಷ್ಕೃತ್ಯದ ದುರ್ಲಾಭ ಪಡೆದ ಪಾಕಿಸ್ತಾನ, ಚಟುವಟಿಕೆಗೆ ಹೆಚ್ಚಲು ಶುರುಮಾಡಿದರು, ಸಂಘಪರಿವಾರ ಕಾಶ್ಮೀರಿ ಪಂಡಿತರನ್ನು ಕಾಶ್ಮೀರಿ ಮುಸ್ಲಿಮರ ವಿರುದ್ಧ ಕೋಮುವಾದಿ ಕಂದಕ ಸೃಷ್ಠಿ ಮಾಡಿತು ಭಾರತ ಸರ್ಕಾರ ಇದನ್ನು ನಿರ್ಲಕ್ಷ್ಯ ಮಾಡಿತು ಎಂದರು. ಭಾರತ ಸರ್ಕಾರದ ನಿರ್ಲಕ್ಷ ನೀತಿ, ದುರ್ಬಲಗೊಳಿಸಿದ 370ನೇ ವಿಧಿಯ ಕಾರಣ ಕಾಶ್ಮಿರದಲ್ಲಿ 1947 ರಿಂದ 1987ರವರೆಗೆ 40 ವರ್ಷಗಳ ಕಾಲ ಇಲ್ಲದ ಭಯೋತ್ಪಾದನೆ ಇದ್ದಕ್ಕಿದ್ದಂತೆ ಹುಟ್ಟಲು ಕಾಶ್ಮೀರಿಗಳಾಗಲಿ, ವಿಧಿ 370 ಆಗಲಿ ಕಾರಣ ಅಲ್ಲ ಎಂದರು

370ನೇ ವಿಧಿ ರದ್ದತಿಯನ್ನು ಸಂವಿಧಾನ ಬದ್ಧವಾಗಿ, ಅಥವ ಒಕ್ಕೂಟ ತತ್ವದ ಅನ್ವಯ, ಅಥವ 370 ವಿಧಿ ಜಾರಿಗೆ ತರುವಾಗ ಇದ್ದ ಒಪ್ಪಂದದನ್ವಯ ಪ್ರಜಾಸತ್ತಾತ್ಮಕವಾಗಿ ರದ್ದು ಮಾಡಲಾಗಿದೆಯ ಅಂದರೆ ಇಲ್ಲ. ಇಡಿ ಕಾಶ್ಮೀರದ ಜನತೆಯನ್ನ ಮೊಬೈಲ್, ಟಿವಿ, ಪತ್ರಿಕೆಯ ಸಂಪರ್ಕಗಳಿಂದ ಬಿಡುಗಡೆ ಮಾಡಿ ನೆಲಬಂಧನದಲ್ಲಿರಿಸಿ, ಕಾಶ್ಮೀರದ ಜನನಾಯಕರನ್ನ ಗೃಹಬಂಧನದಲ್ಲಿರಿಸಿ ಇಡಿ ಕಾಶ್ಮೀರ ಕಣಿವೆಯಲ್ಲಿ 46ಸಾವಿರ ಶಸ್ತ್ರ ಸಜ್ಜಿತ ಸೈನಿಕರನ್ನು ಸನ್ನದ್ಧಗೊಳಿಸಿ ರದ್ದುಪಡಿಸಲಾಗಿದೆ ಆನಂತರ ಯಾವ ಸಂಪರ್ಕವನ್ನೂ ಕಾಶ್ಮೀರದ ಜನತೆಯ ಜೊತೆ ಮಾಡದಂತೆ ದೇಶದ ಎಲ್ಲ ಸಂಘಟನೆಗಳ ಮತ್ತು ರಾಜಕೀಯ ನೇತಾರರಿಗೆ ದಿಗ್ಬಂಧನ ವಿಧಿಸಲಾಗಿದೆ. ಕಾಶ್ಮೀರದ ಕಡೆ ಹೊರಟ ಜಮ್ಮುಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫರೂಕ ಅಬ್ದುಲ್ಲಾ, ಕಾಂಗ್ರೇಸ್ ಮುಖಂಡ ರಾಹುಲ್ ಗಾಂದಿಯವರನ್ನ, ಸಿಪಿಐಎಂ ಮಹಾಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐನ ಡಿ.ರಾಜರವರನ್ನು ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಸಂಜೆವರೆಗೆ ಬಂಧಿಸಿ ವಾಪಸ್ಸು ಕಳಿಸಲಾಗಿದೆ. ಇಡಿ ಜಮ್ಮು ಮತ್ತು ಕಾಶ್ಮಿರದಲ್ಲಿ 144 ಸೆಕ್ಷನ್ ಜಾರಿಯಲ್ಲಿದೆ, ಸೈನಿಕರ ಸುಪರ್ದಿಯಲ್ಲಿ ಕಾಶ್ಮೀರ ಬಂಧಿಯಾಗಿದೆ ಎಂದರು.

ವಿಧಿ 370 ರದ್ದು ಮಾಡಲು ಬಿಜೆಪಿ ಸರ್ಕಾರ ಕೊಟ್ಟ ಕಾರಣ ವಿಧಿ 370 ಇದ್ದ ಕಾರಣಕ್ಕೆ ಜಮ್ಮು ಮತ್ತು ಕಾಶ್ಮೀರ ಅಭಿವೃದ್ಧಿ ಪಥದಿಂದ ಹಿಂದಿದೆ, ಮತ್ತು ಭಯೋತ್ಪಾದನೆ ಚಟುವಟಿಕೆಗೆ ಕಾರಣವಾಗಿದೆ ಎಂದು ಈ ಹಿಂದೆ ನೋಟ್ ಬ್ಯಾನ್ ಮಾಡುವಾಗ ಇದೇ ಮಾದರಿಯ ಭಯೋತ್ಪಾದಕತೆ, ಕಪ್ಪುಹಣ, ಖೋಟಾನೋಟು ಎಂಬ ಸಬೂಬು ಹೇಳಿದ್ದರು ದೇಶ ನಂಬಿ ಬಿಟ್ಟಿತ್ತು ಅದರ ವಾಸ್ತವ ಸತ್ಯ ಈಗ ಬಯಲಾಗಿದೆ ಈಗ ಇಂತಹದೇ ಹಸಿ ಸುಳ್ಳನ್ನ ಹೇಳಿದ್ದಾರೆ ಎಂದ ಅವರು. ಮಾನವ ಅಭಿವೃದ್ಧಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಮೋದಿಯ ಗುಜರಾತು, ಯೋಗಿಯ ಉತ್ತರಪ್ರದೇಶ, ನಿತೀಶ್‌ರ ಬಿಹಾರಗಳಿಗಿಂತಲೂ ಮೇಲಿದೆ ಭಾರತದ ಸೂಚಾಂಕ 0.64 ಇದ್ದರೆ ಕಾಶ್ಮೀರದ್ದು 0.684 ಇದೆ ಹಾಗೆಯೇ ಗುಜರಾತು, ಉತ್ತರಪ್ರದೇಶಗಳು ಕ್ರಮವಾಗಿ0.66 ಮತ್ತು 0.583 ಇದೆ ಎಂದ ಅವರು 2002ರಲ್ಲೇ ಕಾಶ್ಮೀರದಲ್ಲಿ ಶಿಕ್ಷಣ ಮೂಲಭೂತ ಹಕ್ಕಾಗಿತ್ತು ಹಾಗಾಗಿ 11-12ನೇ ತರಗತಿಗೆ ಸೇರುವ ಮಕ್ಕಳು ಭಾರತದ ಸರಾಸರಿ 56.6 ಶೇಕಡ ಇದ್ದರೆ ಕಾಶ್ಮೀರದ್ದು 58.6 ಇದೆ ಎಂದು ತಿಳಿಸಿದರು. ಬಡತನ ರೇಖೆ ಭಾರತದ್ದು 22% ಇದ್ದರೆ ಕಾಶ್ಮೀರದ್ದು 10.35% ಇದೆ ಗುಜರಾತು ಮತ್ತು ಉತ್ತರ ಪ್ರದೇಶ ಕ್ರಮವಾಗಿ 16.63 ಮತ್ತು 29.34 ಇದೆ ಎಮದು ತಿಳಿಸಿದ ಅವರು ಕಾಶ್ಮಿರದ ಸಮಸ್ಯೆಗೆ 370 ಎನ್ನುವುದು ಸುಳ್ಳು ಎಂದು ಇದು ತಿಳಿಸುತ್ತದೆ ಎಂದರು. ಕಾಶ್ಮೀರದಲ್ಲಿ ಪ್ರಜಾಸತ್ತೆ ನೆಲಗೊಂಡ ತಕ್ಷಣ ಅದರ ಮೊದಲ ಮುಖ್ಯ ಮಂತ್ರಿ ಆದ ತಕ್ಷಣ ಶೇಖ್ ಅಬ್ದುಲ್ಲಾ ಮಾಡಿದ ಮೊದಲ ಕೆಲಸ ಭೂಸುಧಾರಣೆ, ಜೀತ ಪದ್ದತಿ ವಿಮೋಚನೆ, ಆರೋಗ್ಯ, ವಸತಿ ಮತ್ತು ಶಿಕ್ಷಣ ಮೂಲಭೂತ ಸುಧಾರಣೆಗಳು. ಕಾಶ್ಮಿರ ಎಂದಿಗೂ ಭಾರತದ ಒಕ್ಕೂಟದಿಂದ ಬೇರೆ ಇರಲಿಲ್ಲ ಬದಲಾಗಿ ಭಾರತ ಸರ್ಕಾರವೇ ಅವರನ್ನು ಬೇರೆಯಾಗಿಯೇ ಇಟ್ಟಿತು ಅದರ ಫಲವೇ ಕಾಶ್ಮೀರದ ಜನಸರ್ಕಾರಗಳನ್ನ ಕಿತ್ತೆಸೆದು ರಾಷ್ಟ್ರಪತಿ ಆಳ್ವಿಕೆ ಹೇರಲಾರಬಿಸಿದ್ದು ಎಂದು ತಿಳಿಸಿದ ಅವರು. ಕಾಶ್ಮೀರದ ನೆಲವನ್ನು ಭಾರತದ ಕಾರ್ಪೊರೇಟರುಗಳಿಗೆ ಹಂಚಲು 35ಎ ವಿಧಿ ಅಡ್ಡವಾಗಿತ್ತು ಅದನ್ನು ತೆಗದು ತನ್ನ ಮಹಾಪೋಷಕರಿಗೆ ಹಂಚುವ ದುರುದ್ದೇಶದಿಂದ ಈ ವಿಧಿಯನ್ನು ತೆಗೆಯಲಾಗಿದೆ ಎಂದರು.

ವಾಸ್ತವವಾಗಿ ವಿಧಿ-370 ಕಾಶ್ಮಿರಕ್ಕೆ ಮಾತ್ರವೇ ಇಲ್ಲ ಸರಿ ಸುಮಾರು ಇದೇ ಮಾದರಿಯಲ್ಲಿ 371ಎ ಯಿಂದ ಜೆ ವರೆಗೂ ನಾಗಾಲ್ಯಾಂಡ್, ಮಿಝೋರಾಂ, ಸಿಕ್ಕೀಂ, ಅಸ್ಸಾಂ, ಮತ್ತು ಇತರೆ ಸಪ್ತಸುಂದರಿ ರಾಜ್ಯಗಳಿಗೂ ಅನ್ವಯಗೊಳಿಸಲಾಗಿದೆ. ಕರ್ನಾಟಕದ ಹೈದರಾಬಾದ್ ಕರ್ನಾಟಕಕ್ಕೂ 371ಜೆ ಅನ್ವಯಗೊಳಿಸಲಾಗಿದೆ, ಅದರಿಂದಾಗಿ ಹೈ-ಕ ಜನಕ್ಕೆ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಅವಕಾಶ ಕಲ್ಪಿಸಿಕೊಡಲು ಸಾಧ್ಯವಾಗಿದೆ. ಇದು ಪ್ರತ್ಯೇಕ ಸಂವಿಧಾನ ರಚಿಸಕೊಳ್ಳುವ ಅವಕಾಶ ಇಲ್ಲದಿರುವುದೊಂದನ್ನು ಹೊರತುಪಡಿಸಿ ಮಿಕ್ಕೆಲ್ಲಾ ಕಾಶ್ಮೀರದ ಸವಲತ್ತೇ ಆಗಿದೆ. ಇವೆಲ್ಲವನ್ನು ಏಕೆ ರದ್ದು ಮಾಡಲಿಲ್ಲ ಎಂದು ಪ್ರಶ್ನಿಸಿದರು.

ಭಾವನಾತ್ಮಕ ವಿಷಯ ಹಿಡಿದು ಜನರ ಮನಸಿನ ಮೇಲೆ ಹತೋಟಿ ಸಾಧಿಸಿ ಮಂಕು ಮೂಡಿಸುವ ಕಲೆಗಾಗರಿಕೆ ಸಂಘ ಪರಿವಾರಕ್ಕೆ ಕರತಲಾಮಲಕ ಮತ್ತದರ ಸಿದ್ಧಾಂತವೂ ಕೂಡ ಹಾಗಾಗಿ ವಿರೋಧ ಪಕ್ಷಗಳು ಕೂಡ ಮಂಕಾಗಿಬಿಡುತ್ತವೆ ಹಾಗಾಗಿ ಜನತೆ ಇವರ ಈ ಅಜೆಂಡಾವನ್ನು ಅರ್ಥಮಾಡಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮದ ಪ್ರಸ್ತಾವನೆ ಮಾಡಿದ ಸಿಪಿಐಎಂ ಸ್ಥಳೀಯ ಸಮಿತಿ ಕಾರ್ಯದರ್ಶಿ ಎಚ್.ಆರ್.ನವೀನ್‌ಕುಮಾರ್ ಮಾತನಾಡಿ ಕಾಶ್ಮೀರ ಎಂದೆಂದಿಗೂ ಭಾರತದ ಭಾಗವೇ ಆಗಿತ್ತು ಮತ್ತು ಮುಂದೆಯೂ ಆಗಿರುತ್ತದೆ ಇದನ್ನ ನಾವು ಮಾತ್ರವಲ್ಲ ಕಾಶ್ಮೀರಿ ಜನರು ಇಂದಲ್ಲ 1947ರಲ್ಲೇ ತೀರ್ಮಾನಿಸಿದ್ದಾರೆ. ಅವರ ಸಂವಿಧಾನ ಇದು ಪ್ರತ್ಯೇಕ ಸಂವಿಧಾನ ಅಲ್ಲ ಇದು ಭಾರತದ ಸಮಗ್ರ ಭಾಗ ಎಂದೇ ಘೋಷಿಸುತ್ತದೆ ಅದರಲ್ಲಿರುವ 144 ಕಲಮುಗಳು ನಮ್ಮ ಸಂವಿಧಾನದ ಕಲಮುಗಳ ಅಂಶಗಳನ್ನೇ ಒತ್ತಿ ಹೇಳುತ್ತವೆ ಎಂದರು.

ಇಂದು ಕಾಶ್ಮೀರದ ಮೇಲೆ ನಡೆದ ಈ ಧಾಳಿ. ಇದು ಸಂವಿಧಾನದ ಮೂಲ ಬೇರಿಗೆ ಕೊಟ್ಟ ದೊಡ್ಡ ಏಟು, ಇದು ನಾಳೇ ಕರ್ನಾಟಕ ಇರಬಹುದು, ತಮಿಳುನಾಡು ಇರಬಹುದು, ಕೇರಳ ಇರಬಹುದು ಬೇರಾವುದೇ ಮಾತು ಕೇಳದ ಸರ್ಕಾರಗಳ ರಾಜ್ಯಗಳನ್ನ ವಿಸಜಿಸಿಬಿಡಬಹುದಾದ ಅಂಶವನ್ನು ಕೊಟ್ಟಿದೆ 370ರ ಮಾದರಿಯಲ್ಲೇ ಇರುವ 371ಗಳಿಗೂ ಸಂಚಕಾರ ಬರಲಿದೆ, ಎಲ್ಲಾ ರಾಜ್ಯಗಳ ಸ್ವಾಯತ್ತತೆಯಲ್ಲೇ ಭಾರತದ ಗಣತಂತ್ರ ಉಸಿರಾಡುತ್ತಿದೆ. ನಮ್ಮದು ಭಾರತ ದೇಶವಲ್ಲ, ಭಾರತ ಒಕ್ಕೂಟ. ನಮ್ಮದು ಕೇಂದ್ರ ಸರ್ಕಾರವಲ್ಲ, ಕೇಂದ್ರೀಯ ಸರ್ಕಾರ. ಭಾರತ ಒಕ್ಕೂಟ ಅಂದರೆ ಗಣತಂತ್ರ ಎಂದು, ಕೇಂದ್ರೀಯ ಸರ್ಕಾರ ಎಂದರೆ ಸ್ವಾಯುತ್ತ ರಾಜ್ಯಾಡಳಿತಗಳ ಸಮಗ್ರತೆ ಎಂದು ವಿವರಿಸಿ ಈ ಒಕ್ಕೂಟ ತತ್ವಕ್ಕೆ ವಿಧಿ 370 ಮತ್ತು 35ಎ ರದ್ದು ಮಾಡಿ ಕೋಮುವಾದಿ ಬಿಜೆಪಿ ಸರ್ಕಾರ ಆತಂಕ ಒಡ್ಡಿದೆ ಭಾರತದ ಸಾರ್ವಭೌಮತೆ, ಸಂವಿಧಾನ ಮತ್ತು ಒಕ್ಕೂಟ ತತ್ವ ಉಳಿಸಲು ಎಲ್ಲಾ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಯೋಚಿಸಬೇಕಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸಿಪಿಐಎಂ ಜಿಲ್ಲಾ ಸಂಘಟನಾ ಸಮಿತಿ ಸದಸ್ಯ ಜಿ.ಪಿ.ಸತ್ಯನಾರಾಯಣ ವಹಿಸಿದ್ದರು, ಟಿಪ್ಪು ಸಂಘರ್ಷ ಸಮಿತಿಯ ಮುಬಾಷಿರ್ ಅಹ್ಮದ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹಾಂತಪ್ಪ ಮತ್ತಿತರರು ಹಾಜರಿದ್ದರು.

ಕೇಂದ್ರ ಸರಕಾರದ ಖಾಸಗಿಕರಣದ ನೀತಿ ವಿರೋಧಿಸಿ ಹೋರಾಟಕ್ಕೆ ಕರೆ





ರಾಮದುರ್ಗ: ಮೋದಿ ಸರಕಾರದ ತಪ್ಪು ಆರ್ಥಿಕ ನೀತಿಗಳಿಂದ, ಹೆಚ್ಚಿನ ತೆರಿಗೆ (ಜಿಎಸ್‌ಟಿ) ಹೇರಿದ್ದರಿಂದ ಇವತ್ತು ದೇಶದ ಸಣ್ಣ, ದೊಡ್ಡ ಕೈಗಾರಿಕೆಗಳು ಮುಚ್ಚಿ ಹೋಗಿದ್ದು, ಈಗಾಗಲೇ ಲಕ್ಷಾಂತರ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಚುನಾವಣೆಯಲ್ಲಿ ಘೋಷಿಸಿದ ಪ್ರಕಾರ ಕೇಂದ್ರದ ಬಿಜೆಪಿ ಸರಕಾರ 2 ಕೋಟಿ ಉದ್ಯೋಗ ನೀಡುವದಾಗಿ ವಾಗ್ದಾನ ನೀಡಿತ್ತು. ಉದ್ಯೋಗ ಸೃಷ್ಠಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ಇದರಿಂದ ದೇಶದಲ್ಲಿ ನಿರುದ್ಯೋಗ ಬೆಳೆಯುತ್ತಿರುವದು ಆತಂಕದ ವಿಷಯ ಎಂದು ಶ್ರೀ ವೆಂಕಟೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸಿಐಟಿಯುನ ನಾಲ್ಕನೇ ತಾಲೂಕಾ ಸಮ್ಮೇಳನವನ್ನು ಉದ್ಘಾಟಿಸಿ ವ್ಹಿ.ಪಿ. ಕುಲಕರ್ಣಿರವರು ಕೇಂದ್ರ ಸರಕಾರದ ನೀತಿಯನ್ನು ಖಂಡಿಸಿದರು.

ಈ ಹಿಂದೆ ನಿರಂತರ ಹೋರಾಟ ಮಾಡಿ ಕಾರ್ಮಿಕರು ಕೆಲವು ಕಾನೂನುಗಳ ಮೂಲಕ ಸೌಲಭ್ಯಗಳನ್ನು ಪಡೆದುಕೊಂಡಿದ್ದರು. ಎರಡನೇ ಅವಧಿಗೆ ಚುಕ್ಕಾಣಿ ಹಿಡಿದಿರುವ ನರೇಂದ್ರ ಮೋದಿ ಸರಕಾರ 44 ಕಾರ್ಮಿಕ ಕಾನೂನುಗಳನ್ನು 4 ಕೋಡ್‌ಗಳನ್ನಾಗಿ ತಿದ್ದುಪಡೆ ಮಾಡಿ ಕಾರ್ಮಿಕರಿಗೆ ಸಿಗುವ ಅಲ್ಪಸ್ವಲ್ಪ ಸೌಲಭ್ಯವನ್ನು ಕಸಿದುಕೊಳ್ಳುವ ಹೀನಾಯ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಕಾನೂನುಗಳನ್ನು ತಿದ್ದುಪಡೆ ಮಾಡಿ ಬಂಡವಾಳ ಶಾಹಿ ಮಾಲಿಕರ ಪರವಾಗಿ ಕಾನೂನುಗಳನ್ನು ತಂದು ಈ ದೇಶಕ್ಕೆ ಸಂಪತ್ತು ಸೃಷ್ಠಿಸುವ ಕಾರ್ಮಿಕರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿರುವ ಮೋದಿ ಸರಕಾರದ ನೀತಿ ಪ್ರತಿಭಟಿಸಿ ಎಲ್ಲ ದುಡಿಯುವ ಜನ ಹೋರಾಟಕ್ಕೆ ಸಜ್ಜಾಗಬೇಕೆಂದು ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿಐಟಿಯು ನ ಜಿಲ್ಲಾ ಕಾರ್ಯದರ್ಶಿ ಜಿ.ಎಂ. ಜೈನೆಖಾನ್ ರವರು ಕಾರ್ಮಿಕರಿಗೆ ಕರೆ ಕೊಟ್ಟರು.

ಸಮ್ಮೇಳನದ ಅಧ್ಯಕ್ಷತೆಯನ್ನು ಕಟ್ಟಡ ಕಾರ್ಮಿಕರ ಸಂಘದ ಮುಖಂಡರಾದ ನಾಗಪ್ಪ ಸಂಗೊಳ್ಳಿ ವಹಿಸಿಕೊಂಡು ಮಾತನಾಡಿದರು. ಅದೇ ರೀತಿ ಅಂಗನವಾಡಿ ನೌಕರ ಸಂಘದ ಸರಸ್ವತಿ ಮಾಳಶೆಟ್ಟಿ, ಅಕ್ಷರ ದಾಸೋಹ ನೌಕರ ಸಂಘದ ತುಳಸಮ್ಮ ಮಾಳದಕರ, ಪಂಚಾಯತ ನೌಕರ ಸಂಘದ ವೀರಭದ್ರ ಕಂಪ್ಲಿ, ಕಟ್ಟಡ ಕಾರ್ಮಿಕ ಸಂಘದ ಮಾರುತಿ ಮುದಗುರಿ ಮಾತನಾಡಿದರು. ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ ಕಾರ್ಮಿಕ ಸಂಘದ ಮುಖಂಡರಾದ ಕೃಷ್ಣ ಹೊಸೂರ ರವರು ಸ್ವಾಗತಿಸಿ, ವಂದಿಸಿದರು.

ಕೊನೆಯಲ್ಲಿ ಸಿಐಟಿಯುನ ನೂತನ ತಾಲೂಕಾ ಸಮಿತಿ ಆಯ್ಕೆ ಮಾಡಲಾಯಿತು.

ತಾಲೂಕಾ ಅಧ್ಯಕ್ಷರಾಗಿ ನಾಗಪ್ಪ ಸಂಗೊಳ್ಳಿ, ಕಾರ್ಯದರ್ಶಿಯಾಗಿ ವೀರಭದ್ರ ಕಂಪ್ಲಿ, ಖಜಾಂಚಿಯಾಗಿ ಕೃಷ್ಣ ಹೊಸೂರ ಹಾಗೂ 10 ಜನ ಪದಾಧಿಕಾರಿಗಳು 28 ಜನ ತಾಲೂಕಾ ಸಮಿತಿ ಸದಸ್ಯರು ಹೀಗೆ 41 ಜನರ ತಾಲೂಕಾ ಸಮಿತಿ ರಚಿಸಲಾಯಿತು.

ಆಧುನಿಕ ಭಾರತೀಯ ಒಕ್ಕೂಟದ ಬೇರುಗಳು



ನಮ್ಮ ರಾಜಕೀಯ ವ್ಯವಸ್ಥೆಯ ಒಕ್ಕೂಟ ರಚನೆಯು ಪ್ರದೇಶೀಯ-ಭಾಷಿಕ ಪ್ರಜ್ಞೆ ಮತ್ತು ಪ್ರದೇಶದ ಮಿತಿಗಳನ್ನು ಮೀರಿದ ಅಖಿಲ ಭಾರತ ಪ್ರಜ್ಞೆ-ಈ ಈ ಉಭಯ ಪ್ರಜ್ಞೆಗಳನ್ನು ಅಭಿವ್ಯಕ್ತಿಸುತ್ತದೆ. ಇವುಗಳ ನಡುವಿನ ಅನ್ಯೋನ್ಯತೆ ಇದರ ಮೂಲ ಅಂಶವಾಗಿದೆ. ಆದರೆ ಧರ್ಮ-ಆಧಾರಿತ 'ಅನಾದಿ' ಹಿಂದುತ್ವ ರಾಷ್ಟ್ರವಾದದಲ್ಲಿ ಈ ಅನ್ಯೋನ್ಯತೆಗೆ ಆಸ್ಪದವಿಲ್ಲ. ಆದ್ದರಿಂದ ಅದು ಮೂಲತಃ ಕೇಂದ್ರೀಕರಿಸುವಂತದ್ದೇ ಆಗಿದೆ. ಅದು ನಮ್ಮ ರಾಷ್ಟ್ರದ ಉಭಯ ಪ್ರಜ್ಞೆಗಳ ಸಾರಭೂತ ಅಂಗವಾಗಿರುವ ಪ್ರಾದೇಶಿಕ-ಭಾಷಿಕ ರಾಷ್ಟ್ರೀಯತೆಗಳೊಂದಿಗೆ ಒರಟಾಗಿ ವರ್ತಿಸುತ್ತಿದೆ. ಈಗಾಗಲೇ ಕಾಣುತ್ತಿರುವ ಈ ಅಂಶವು ಬರಲಿರುವ ದಿನಗಳಲ್ಲಿ ಇನ್ನಷ್ಟು ಹಾನಿಕಾರಕವಾಗಿ ಪರಿಣಮಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ವಸಾಹತು-ವಿರೋಧಿ ಹೋರಾಟವು ಭಾರತದ ಒಂದು ಅಖಂಡ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಿತು. ಅದಕ್ಕೂ ಮೊದಲಿದ್ದ ಪ್ರಾದೇಶಿಕ ಭಾಷೆ ಆಧಾರಿತ "ರಾಷ್ಟ್ರೀಯತೆ"ಯ ಪ್ರಜ್ಞೆಯ ಮೇಲೆ ಇಡೀ ಭಾರತ ಒಂದು ಎಂಬ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸಲಾಯಿತು. ಅಂದರೆ, ಕನ್ನಡ ಅಥವಾ ಬಂಗಾಳಿ ಅಥವಾ ತಮಿಳು ಪ್ರಜ್ಞೆಯ ಮೇಲೆ ಅಖಂಡ ಭಾರತದ ರಾಷ್ಟ್ರ ಪ್ರಜ್ಞೆ ಮೂಡಿ ಬಂತು. ವಸಾಹತು-ವಿರೋಧಿ ಹೋರಾಟದಲ್ಲಿ ಈ ಎರಡೂ ಪ್ರಜ್ಞೆಗಳೂ ಹುಲುಸಾಗಿ ಬೆಳೆದವು. ಪ್ರದೇಶೀಯ-ಭಾಷಿಕ ರಾಷ್ಟ್ರೀಯ ಪ್ರಜ್ಞೆಯ ಬೇರುಗಳು ಭಕ್ತಿ ಚಳುವಳಿಗಿಂತಲೂ ಹಿಂದೆಯೇ ಬೇರೂರಿದ್ದವು ಎಂಬುದಾಗಿ ಗುರುತಿಸಿರುವ ಕಾಂ. ಇಎಂಎಸ್ ನಂಬೂದಿರಿಪಾಡ್ ಅವರ ಅಭಿಪ್ರಾಯಗಳು ತುಸು ಸ್ವತಂತ್ರವಾಗಿ ಕಾಣುತ್ತವೆ; ಈ ಬಗ್ಗೆ ಚರ್ಚೆ ಇಲ್ಲಿ ಅಪ್ರಸ್ತುತ. ಪ್ರತಿಯೊಬ್ಬ ಭಾರತೀಯ ಈ ಎರಡೂ ಪ್ರಜ್ಞೆಗಳನ್ನೂ ಇಂದು ಮೈಗೂಡಿಸಿಕೊಂಡಿದ್ದಾರೆ ಎಂಬುದೇ ಇಲ್ಲಿ ಮುಖ್ಯವಾದ ಅಂಶ. ಈ ಎರಡೂ ರೀತಿಯ ಪ್ರಜ್ಞೆಗಳನ್ನೂ ಪೋಷಿಸಿಕೊಳ್ಳಬೇಕು ಮತ್ತು ಈ ಎರಡರ ನಡುವೆ ಒಂದು ಸೂಕ್ಷ್ಮ ಸಮತೋಲವನ್ನು ಕಾಪಾಡಿಕೊಳ್ಳಬೇಕು. ಏಕೆಂದರೆ, ಅವುಗಳಲ್ಲಿ ಒಂದು ಪ್ರಜ್ಞೆಯನ್ನು ಉಪೇಕ್ಷಿಸಿ ಇನ್ನೊಂದಕ್ಕೆ ಒತ್ತುಕೊಡುವ ಪ್ರವೃತ್ತಿಯು ದೇಶ ಒಡೆಯುವತ್ತ ಕೊಂಡೊಯ್ಯುತ್ತದೆ.

ನಮ್ಮ ರಾಜಕೀಯ ವ್ಯವಸ್ಥೆಯ ಒಕ್ಕೂಟ ರಚನೆಯು ಈ ಉಭಯ ಪ್ರಜ್ಞೆಗಳನ್ನು ಅಭಿವ್ಯಕ್ತಿಸುತ್ತದೆ. ಪ್ರದೇಶೀಯ-ಭಾಷಿಕ ಪ್ರಜ್ಞೆಯ ಕೆಳಗೆ ಇನ್ನೂ ಕೆಲವು ಪ್ರಜ್ಞೆಯ ಹಂತಗಳಿವೆ ಎಂಬುದು ಒಂದು ವಾಸ್ತವಾಂಶ. ಅವುಗಳಲ್ಲಿ ಸಾಮರಸ್ಯ ಮೂಡಿಸಲು ನಮ್ಮ ಸಮಾಜವು "ಸ್ವಾಯತ್ತ ಮಂಡಳಿ"ಯಂತಹ ಕೆಲವು ಏರ್ಪಾಟುಗಳನ್ನು ಕಲ್ಪಿಸಿದೆ. ಈ ಏರ್ಪಾಟುಗಳು ಸಮರ್ಪಕವಾಗಿರಬಹುದು ಅಥವಾ ಸಮರ್ಪಕವಾಗಿಲ್ಲದೆಯೂ ಇರಬಹುದು. ಆದರೆ, ಮೂಲಭೂತ ಅಂಶವೆಂದರೆ, ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ನಡುವೆ ಪರಸ್ಪರ ಹೊಂದಾಣಿಕೆ ಅವಶ್ಯವೇ ವಿನಃ, ಈಗಿರುವ ಕೇಂದ್ರೀಕರಣದ ಪ್ರವೃತ್ತಿಯಲ್ಲ.

ನಮ್ಮ ವಸಾಹತು-ವಿರೋಧಿ ರಾಷ್ಟ್ರವಾದದ ಸ್ವಭಾವದಿಂದಾಗಿಯೇ ನಾವು ಪರಸ್ಪರ ಸಹಾನುಭೂತಿ ಮತ್ತು ಹೊಂದಾಣಿಕೆಯ ಭಾವನೆಗಳನ್ನು ಆವಾಹಿಸಿಕೊಂಡಿದ್ದೇವೆ. ಮತ ಧರ್ಮಾಧಾರಿತ ರಾಷ್ಟ್ರೀಯತೆಯಂತಹ ಯಾವುದೇ ರಾಷ್ಟ್ರೀಯತೆಯು ಇಂತಹ ಸಹಾನುಭೂತಿ ಮತ್ತು ಹೊಂದಾಣಿಕೆಯ ಭಾವನೆಗಳಿಗೆ ಆಧಾರ ಒದಗಿಸಲಾರದು. ಹಾಗಾಗಿ, ಹಿಂದುತ್ವದ ನಮೂನೆಯಲ್ಲಿ ನಮ್ಮ ರಾಜಕೀಯ ವ್ಯವಸ್ಥೆಯನ್ನು ಮರು-ರೂಪಿಸುವ ಕ್ರಮವು ಅನಿವಾರ್ಯವಾಗಿ ದೇಶ ಒಡೆಯುವತ್ತ ಕೊಂಡೊಯ್ಯುತ್ತದೆ. ಈ ಅಂಶವನ್ನು ಹಿಂದುತ್ವವು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹರಿಯಬಿಟ್ಟಿರುವ ದಬ್ಬಾಳಿಕೆಯೊಂದಿಗೆ ತಕ್ಷಣದಲ್ಲಿ ಗುರುತಿಸಬಹುದು. ಆದರೆ, ಹಿಂದುತ್ವದ ಕೋಮು ವಿಭಜನೆಯ ಬೆಂಕಿ ಹಚ್ಚುವ ಹುಚ್ಚು ಅದರಾಚೆಗೂ ಅಂಗೀಕಾರ್ಹತೆ ಪಡೆಯುತ್ತದೆ. ಯಾವುದೇ ರೀತಿಯ ಕೇಂದ್ರೀಕರಣವು ಪ್ರಾಂತೀಯ ದಂಗೆಗಳನ್ನು ಅನಿವಾರ್ಯವಾಗಿ ಹುಟ್ಟುಹಾಕುತ್ತದೆ.

ಹಿಂದುತ್ವ "ರಾಷ್ಟ್ರವಾದ"ವು (ಹಿಂದೂ)"ರಾಷ್ಟ್ರ" ಎಂಬುದರ ಪರಿಕಲ್ಪನೆ ಮೊದಲೇ ಇತ್ತು, ಆದ್ದರಿಂದ ಕೇಂದ್ರ ಮತ್ತು ರಾಜ್ಯಗಳ ನಡುವೆ ಯಾವುದೇ ಹೊಂದಾಣಿಕೆಯ ಅಗತ್ಯವಿಲ್ಲ ಎಂದು ಭಾವಿಸುತ್ತದೆ; ಇಂತಹ ಹೊಂದಾಣಿಕೆಯ ಬೇಡಿಕೆ ಕೆಲವು "ಪ್ರಾದೇಶಿಕ ಭ್ರಷ್ಟ ಗಣ್ಯ"ರಿಂದ ಮಾತ್ರವೇ ತಮ್ಮ ಕಿಸೆ ತುಂಬಿಕೊಳ್ಳುವ ಸಲುವಾಗಿ ಬರಬಹುದು. ಆದ್ದರಿಂದ, ಅಂಥಹವರ ಜೊತೆಯಲ್ಲಿ "ರಾಷ್ಟ್ರದ ಹಿತ" ದೃಷ್ಟಿಯಲ್ಲಿ ಒರಟಾಗಿರಬೇಕು ಎಂಬುದು ಅವರ ನಿಲುವು. ಹಾಗಾಗಿ, ಅದು ಮೂಲತಃ ಕೇಂದ್ರೀಕರಿಸುವಂತದ್ದಾಗಿದೆ; ಇಂತಹ ಕೇಂದ್ರೀಕರಣದ ಪ್ರತಿ ಹೆಜ್ಜೆಯೂ ಕೊನೆಯಲ್ಲಿ ದೇಶವನ್ನು ವಿಭಜನೆಯತ್ತ ಅಥವಾ ಅಂತಹ ವಿಭಜನೆಯನ್ನು ತಪ್ಪಿಸಲು ನಿರಂಕುಶಾಧಿಕಾರದತ್ತ ತಳ್ಳುತ್ತದೆ.

ಇಂತಹ ನಿರಂಕುಶಾಧಿಕಾರವು ಒಂದು ಸ್ವ-ಸಮರ್ಥನೆಯ ವಿದ್ಯಮಾನವಾಗುತ್ತದೆ: "ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಹೇಗಿದೆ ನೋಡಿ, 'ಭಯೋತ್ಪಾದಕರು' ಎಸಗಿದ ಹಿಂಸಾತ್ಮಕ ಘಟನೆಗಳು ಎಷ್ಟಿವೆ ನೀವೇ ನೋಡಿ; ಈ ಪರಿಸ್ಥಿತಿಯಲ್ಲಿ ನಾಗರಿಕ ಹಕ್ಕುಗಳ ಸ್ಥಗಿತ ಮತ್ತು ನಿರ್ಬಂಧಗಳ ಜಾರಿ ಖಂಡಿತವಾಗಿಯೂ ಸಮರ್ಥನೀಯ"! (ವರದಿಗಳ ಪ್ರಕಾರ, ಈ ರೀತಿಯ ಸಮರ್ಥನೆಗಳು ಸುಪ್ರೀಂ ಕೋರ್ಟ್‌ಅನ್ನೂ ಪ್ರಭಾವಿಸಿವೆ).

ಜಮ್ಮು ಮತ್ತು ಕಾಶ್ಮೀರದ ಸಂರ್ಭದಲ್ಲಿ ಇಂತಹ ಕೇಂದ್ರೀಕರಣದ ಫಲವಾಗಿ ಅಲ್ಲಿನ ಜನತೆಯ ಮೇಲೆ ಹಾನಿಕಾರಕ ಪರಿಣಾಮಗಳು ಉಂಟಾಗಿರುವುದು ಈಗಾಗಲೇ ಸ್ಪಷ್ಟವಾಗಿದೆ. ಒಂದು ಅಸಾಧಾರಣ ಪರಿಸ್ಥಿತಿಯಲ್ಲಿ ಜಮ್ಮು ಮತ್ತು ಕಾಶ್ಮೀರವು ಭಾರತದೊಂದಿಗೆ ವಿಲೀನಗೊಂಡ ಸನ್ನಿವೇಶವನ್ನು ಪರಿಗಣಿಸಿ, ಸಹಾನುಭೂತಿ ಮತ್ತು ಹೊಂದಾಣಿಕೆಯ ಪ್ರತೀಕವಾಗಿ 370ನೇ ಮತ್ತು 35ಎ ವಿಧಿಗಳು ಸಂವಿಧಾನದಲ್ಲಿ ಅಭಿವ್ಯಕ್ತಿಗೊಂಡವು: ಒಬ್ಬ ಹಿಂದೂ ರಾಜನ ಆಳ್ವಿಕೆಯಲ್ಲಿದ್ದ ಒಂದು ಮುಸ್ಲಿಂ ಬಾಹುಳ್ಯದ ರಾಜ್ಯವು, ಪಾಕಿಸ್ತಾನದೊಂದಿಗೆ ವಿಲೀನವಾಗುವುದರ ಬದಲು, ಭಾರತದೊಂದಿಗೆ ವಿಲೀನವಾಯಿತು, ಈ ವಿಶೇಷ ವಿಧಿಗಳ ಆಧಾರದಲ್ಲಿ. ಇದ್ದಕ್ಕಿದ್ದಂತಯೇ ಮತ್ತು ಏಕಪಕ್ಷೀಯವಾಗಿ ಈ ವಿಧಿಗಳನ್ನು ರದ್ದುಗೊಳಿಸಿದ ಕ್ರಮವು, ಹಿಂದುತ್ವದ ಕಟ್ಟಾ ಅನುಯಾಯಿಗಳು ಈ ಕ್ರಮವನ್ನು ಭಾರತದ ಉದ್ದಗಲಕ್ಕೂ ಎಷ್ಟೇ ಬಲವಾಗಿ ಕೊಂಡಾಡಲಿ ಚಿಂತೆಯಿಲ್ಲ, ಜಮ್ಮು ಮತ್ತು ಕಾಶ್ಮೀರದ ಜನತೆಗೆ ಕೊಟ್ಟ ಹೊಂದಾಣಿಕೆಯ ವಾಗ್ದಾನದ ಉಲ್ಲಂಘನೆಯನ್ನು ಸೂಚಿಸುತ್ತದೆ ಮತ್ತು ಅದು ಇಡೀ ಭಾರತ ದೇಶದ ಬುನಾದಿಗೆ ಹಾಕಿದ ಹೊಡೆತವೂ ಆಗುತ್ತದೆ.

ಮತ ಧರ್ಮವು ರಾಷ್ಟ್ರೀಯತೆಗೆ ಆಧಾರವಾಗಲಾರದು. ರಾಷ್ಟ್ರ ಎಂಬುದು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎಂಬುದು ಮತ ಧರ್ಮದ ಭಾವನೆ. ಆದರೆ ಜನತೆಯ ಮನಸ್ಸಿನಲ್ಲಿ ಅನ್ಯೋನ್ಯತೆಯ ಭಾವನೆಗಳು ತುಂಬಿದ್ದರಿಂದಲೇ ದೀರ್ಘಕಾಲದ ವಸಾಹತು ಆಳ್ವಿಕೆಯಿಂದ ಬಿಡಿಸಿಕೊಂಡು ಭಾರತವು ಒಂದು ಆಧುನಿಕ ರಾಷ್ಟ್ರವಾಗಿ ಮೂಡಿಬರಲು ಸಾಧ್ಯವಾಯಿತು, ಆದರೆ, ಇದಕ್ಕೆ ಮತ ಧರ್ಮ ಆಧಾರಿತ ರಾಷ್ಟ್ರವಾದದಲ್ಲಿ ಆಸ್ಪದವಿಲ್ಲ. ಅನಾದಿಕಾಲದ ಅಸ್ತಿತ್ವದ ಹೆಸರಿನಲ್ಲಿ ಮತ ಧರ್ಮವೇ ರಾಷ್ಟ್ರೀಯತೆಗೆ ಆಧಾರವಾಗಲಾರದು ಎಂಬ ಅಂಶಕ್ಕೆ ಪಾಕಿಸ್ತಾನದ ವಿಭಜನೆ ಸಾಕ್ಷಿಯಾಗಿದೆ. ಭಾಷೆಯ ಆಧಾರದ ಮೇಲೆ ಪಾಕಿಸ್ತಾನವು ಒಡೆದು ಹೋಳಾಯಿತು. ಅದರ ಪೂರ್ವ ಭಾಗವು ಒಂದು ಸ್ವತಂತ್ರ ದೇಶವಾಗಿ (ಬಾಂಗ್ಲಾದೇಶ) ಉದಯವಾಗಲು ಭಾಷಾ ಚಳುವಳಿಯೇ ಒಂದು ಆರಂಭ ಬಿಂದುವಾಗಿತ್ತು. ಹಿಂದುತ್ವ ರಾಷ್ಟ್ರವಾದವು ಭಾರತವನ್ನು ಪಾಕಿಸ್ತಾನ ಅನುಸರಿಸಿದ ಹಾದಿಗೆ ತಳ್ಳುತ್ತದೆ. ಕಾಶ್ಮೀರಿಗಳ ತೇಜೋವಧೆಯನ್ನು ಸಂಭ್ರಮಿಸುತ್ತಿರುವವರಿಗೆ ಸರ್ಕಾರದ ಈ ತೀರ್ಮಾನಕ್ಕೆ ಪಶ್ಚಾತ್ತಾಪ ಪಡಬೇಕಾದ ದಿನವೂ ಬರುತ್ತದೆ.

ಕಾಶ್ಮೀರದ ಜನತೆಗೆ ಹೇಳಲಾರದಷ್ಟು ಹಾನಿ ಉಂಟುಮಾಡಿಯೂ ತೃಪ್ತವಾಗದ ಮೋದಿ ಸರ್ಕಾರವು ಈಗ ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ ಭಾಷೆಯನ್ನು ಹೇರಲು ಮುಂದಾಗಿದೆ. ಇದು, ಬೇರೆ ಬೇರೆ ಪ್ರಾದೇಶಿಕ-ಭಾಷಿಕ ರಾಷ್ಟ್ರೀಯತೆಗಳ ಆಕಾಂಕ್ಷೆಗಳನ್ನು ಮೂಲೆಗೊತ್ತುವ ಮೋದಿ ಸರ್ಕಾರದ ಇನ್ನೊಂದು ಭಯಾನಕ ಕ್ರಮ. ದೇಶವನ್ನು ಒಂದುಗೂಡಿಸುವ ಹೆಸರಿನಲ್ಲಿ ದೇಶವನ್ನು ಚೂರು ಚೂರು ಮಾಡುವ ಇನ್ನೊಂದು ನಡೆ. ಈ ಒಡೆಯುವ ಪ್ರವೃತ್ತಿಗೆ ಎದುರಾಗಿ ಅನಿವಾರ್ಯವಾಗಿ ಕೆಲವು ದಮನಕಾರಿ ಕ್ರಮಗಳು ಉಗ್ರವಾಗಿ ಹೊರ ಬರುತ್ತವೆ. ಎಲ್ಲರ ಮಾನವ ಹಕ್ಕುಗಳು ಮತ್ತು ನಾಗರಿಕ ಹಕ್ಕುಗಳು ಮತ್ತಷ್ಟು ನಿರ್ಬಂಧಕ್ಕೊಳಗಾಗುತ್ತವೆ.

ಪ್ರಾದೇಶಿಕ-ಭಾಷಿಕ ರಾಷ್ಟ್ರೀಯತೆಗಳ ಆಕಾಂಕ್ಷೆಗಳನ್ನು ತುಳಿದುಹಾಕುವ ಈ ಪ್ರವೃತ್ತಿಯು ನಮ್ಮ ರಾಜ್ಯಗಳ ಒಕ್ಕೂಟದ ಏರ್ಪಾಡಿನ ಒಳಗಡೆ ಅಧಿಕಾರದ ಕೇಂದ್ರೀಕರಣವು ಬಲಗೊಳ್ಳುವ ರೂಪು ಪಡೆಯುತ್ತದೆ. ಈ ಕೇಂದ್ರೀಕರಣವು ಉದ್ಭವವಾಗಲು ಹಿಂದುತ್ವ ಮಾತ್ರವೇ ಕಾರಣವಲ್ಲ. ಆರ್ಥಿಕ ರೂಪದಲ್ಲಿ ಅದು ಕಾರ್ಪೋರೇಟ್-ಹಣಕಾಸು ಕುಳಗಳ ಹಕ್ಕೊತ್ತಾಯಗಳಿಗೆ ತಕ್ಕಂತಿರುತ್ತದೆ. ಕೇಂದ್ರೀಕರಣದ ಇನ್ನೊಂದು ವಿಸ್ಮಯಕಾರಿ ಕ್ರಮವೆಂದರೆ, ಜಿಎಸ್‌ಟಿಯ ಜಾರಿ. ಜಿಎಸ್‌ಟಿ ಜಾರಿಯ ಮೂಲಕ ತೆರಿಗೆಗಳ ಕೇಂದ್ರೀಕರಣದಿಂದಾಗಿ ರಾಜ್ಯಗಳು ತಮಗೆ ಸರಿ ಎನಿಸುವಷ್ಟು ಸರಕು ತೆರಿಗೆ ವಿಧಿಸುವ ಹಕ್ಕುಗಳನ್ನು ಕಳೆದುಕೊಂಡಿವೆ. ತೆರಿಗೆ ದರದಲ್ಲಿ ತುಸು ಹೆಚ್ಚು ಕಡಿಮೆ ಮಾಡಬೇಕೆಂದರೂ ಸಹ ರಾಜ್ಯಗಳು ಈಗ ತೆರಿಗೆ ವಿಧಿಸುವ ಹಕ್ಕು ಹೊಂದಿರುವ ಜಿಎಸ್‌ಟಿ ಮಂಡಳಿಯ ಎದುರು ಮಂಡಿಯೂರಿ ದೈನ್ಯತೆಯಿಂದ ಬೇಡಿಕೊಳ್ಳಬೇಕಾಗಿದೆ. ಅಪಾರ ನಿರೀಕ್ಷೆಗಳೊಂದಿಗೆ ತೆರಿಗೆಗಳ ಕೇಂದ್ರೀಕರಣವನ್ನು ಆಗ ಒಪ್ಪಿಕೊಂಡಿದ್ದ ರಾಜ್ಯಗಳು, ಎಂತಹ ಘೋರ ತಪ್ಪು ಮಾಡಿದೆವು ಎಂಬುದನ್ನು ಈಗ ಅರಿತುಕೊಳ್ಳುತ್ತಿವೆ. "ಒಂದು ದೇಶ – ಒಂದು ಭಾಷೆ" ಎಂಬ ಪರಿಕಲ್ಪನೆ ನಮ್ಮ ಬಹುತ್ವದ ದೇಶಕ್ಕೆ ಎಷ್ಟು ಅಪಾಯಕಾರಿಯೋ, "ಒಂದು ದೇಶ – ಒಂದು ತೆರಿಗೆ" ಎಂದು ಬಿಂಬಿಸಿದ ಜಿಎಸ್‌ಟಿಯೂ ಅಷ್ಟೇ ಅಪಾಯಕಾರಿಯಾಗಿದೆ.

ಈಗ ದೇಶದ ಮುಂದಿರುವ ತೊಂದರೆಗಳಿಗೆ ಜಿಎಸ್‌ಟಿಯೇ ಕಾರಣವಲ್ಲ, ಅದನ್ನು ಜಾರಿಮಾಡಿದ ತರಾತುರಿಯೇ ಕಾರಣ ಎಂಬ ಒಂದು ಅಭಿಪ್ರಾಯ ಸಾಮಾನ್ಯವಾಗಿದೆ. ಇದು ನಿಜವಲ್ಲ. ಜಿಎಸ್‌ಟಿಯಿಂದ ಉದ್ಭವವಾದ ಅರ್ಥವ್ಯವಸ್ಥೆಯ ಸಂಕಟಗಳಿಗೆ ಜಿಎಸ್‌ಟಿಯೇ ಕಾರಣ. ಆ ಕಾರಣವೂ ಸಹ ಸರಳವಾಗಿಯೇ ಇದೆ: ನಮ್ಮ ಅರ್ಥವ್ಯವಸ್ಥೆಯಲ್ಲಿ ದೊಡ್ಡ ಕೈಗಾರಿಕೆಗಳು ತಮ್ಮ ಕಚ್ಚಾ ವಸ್ತುಗಳನ್ನು ಸಣ್ಣ ಕೈಗಾರಿಕೆ ಮತ್ತು ಕಿರು ಉತ್ಪಾದನಾ ವಲಯಗಳಿಂದ ಕೊಳ್ಳುವುದು ಸಾಮಾನ್ಯ (ಈ ವಲಯಗಳಲ್ಲಿ ಕೂಲಿ ಕಡಿಮೆ ಇರುವ ಕಾರಣದಿಂದಾಗಿ). ದೊಡ್ಡ ಕೈಗಾರಿಕೆಗಳು ತೆರಿಗೆ ರೀಫಂಡ್ (ವಾಪಸ್) ಪಡೆಯಬೇಕಾದರೆ ಅವರ ಪೂರೈಕೆದಾರರಾದ ಸಣ್ಣ ಕೈಗಾರಿಕೆ ಮತ್ತು ಕಿರು ಉತ್ಪಾದಕರು ತೆರಿಗೆ ವಿವರಗಳನ್ನು ಸಲ್ಲಿಸುವಂತೆ ನೋಡಿಕೊಳ್ಳಬೇಕಾಗುತ್ತದೆ.

ಇದು ಎರಡು ಅಂಶಗಳನ್ನು ಸೂಚಿಸುತ್ತದೆ: ಮೊದಲನೆಯದು, ಸಣ್ಣ ಕೈಗಾರಿಕಾ ವಲಯದ ಖರ್ಚುಗಳ ಹೊರೆ ಮೊದಲಿಗಿಂತ ಹೆಚ್ಚಿದೆ. ವಾಸ್ತವಿಕವಾಗಿ, ಜಿಎಸ್‌ಟಿ ವಿವರ ಸಲ್ಲಿಸಲು ತಗಲುವ ವೆಚ್ಚವೇ, ದೊಡ್ಡ ಕೈಗಾರಿಕೆಗಳಿಗೆ ಹೋಲಿಸಿದರೆ, ಸಣ್ಣ ಕೈಗಾರಿಕೆಗಳಿಗೆ ಭಾರೀ ಹೊರೆಯಾಗುತ್ತದೆ. ಎರಡನೆಯದು, ಕೆಲವು ಸಣ್ಣ ಸಣ್ಣ ಘಟಕಗಳು ಮೊದಲು ತೆರಿಗೆ ಕೊಡುತ್ತಿರಲಿಲ್ಲ. ಈಗ ಅವು ತೆರಿಗೆ ಕೊಡಲೇಬೇಕು. ಮೇಲಾಗಿ, ಈಗ ಯಾವುದೇ ಸರಕಿಗೆ ದೇಶಾದ್ಯಂತ ಒಂದೇ ಪ್ರಮಾಣದ ತೆರಿಗೆ ಇದೆ, ಮೊದಲು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ತೆರಿಗೆ ದರವಿತ್ತು. ಹಾಗಾಗಿ ಮೊದಲು ತೆರಿಗೆ ಕೊಡದಿದ್ದ ಘಟಕಗಳು ಈಗ ಭಾರಿ ತೆರಿಗೆ ಕೊಡಬೇಕಾಗಿದೆ.

ತೆರಿಗೆ ಭಾರದಿಂದಾಗಿ ಅನೇಕ ಸಣ್ಣ ಸಣ್ಣ ಘಟಕಗಳು ತಮ್ಮ ವ್ಯವಹಾರವನ್ನೇ ನಿಲ್ಲಿಸಿವೆ. ಈ ಕ್ರಿಯೆ ಸಂಭವಿಸಿದಾಗ ಅರ್ಥವ್ಯವಸ್ಥೆಯಲ್ಲಿ ಹಿಂಜರಿತವಾಗುತ್ತದೆ. ನವ ಉದಾರವಾದದ ವೈರುಧ್ಯಗಳಿಂದಾಗಿ ಜಾಗತಿಕ ಅರ್ಥವ್ಯವಸ್ಥೆಯು ಮೊದಲೇ ನಿಧಾನ ಗತಿಗೆ ಒಳಗಾಗಿರುವುದರಿಂದಾಗಿ ಭಾರತದ ಅರ್ಥವ್ಯವಸ್ಥೆಯ ಹಿಂಜರಿತದ ತೀವ್ರತೆ ಹೆಚ್ಚುತ್ತದೆ. ಹಿಂಜರಿತದ ಪ್ರವೃತ್ತಿಗಳು ಒಂದರಮೇಲೊಂದರಂತೆ ಅರ್ಥವ್ಯವಸ್ಥೆಯನ್ನು ಕಾಡುವುದರಿಂದಾಗಿ ತೆರಿಗೆ ಆದಾಯದ ಸಂಗ್ರಹ(ಜಿಎಸ್‌ಟಿಯ ಮೂಲಕ) ಇಳಿಯುತ್ತದೆ. ನಾವೀಗ ಇದನ್ನು ಕಣ್ಣಾರೆ ಕಾಣುತ್ತಿದ್ದೇವೆ.

ಅರ್ಥವ್ಯವಸ್ಥೆಯ ಹಿಂಜರಿತಕ್ಕೆ, ಮತ್ತೊಮ್ಮೆ ಹೇಳುವುದಾದರೆ, ಜಿಎಸ್‌ಟಿಯನ್ನು ಅಡ್ಡಾದಿಡ್ಡಿಯಾಗಿ ಅಥವಾ ಆತುರಾತುರವಾಗಿ ಜಾರಿ ಮಾಡಿದ್ದು ಕಾರಣವಲ್ಲ. ಈ ರೀತಿಯ ವಿವರಣೆಯು ನವ ಉದಾರದ ಒಂದು ಕಟ್ಟೆ ಪುರಾಣ. ಹಿಂಜರಿತ ಉಂಟಾಗಲು ಜಿಎಸ್‌ಟಿಯೇ ಕಾರಣ. ಕಿರು ಉತ್ಪಾದಕರನ್ನು ಹೊರತುಪಡಿಸಿ ಅರ್ಥವ್ಯವಸ್ಥೆಯ ಕೇವಲ ಒಂದು ವಿಭಾಗದಿಂದ (ದೊಡ್ಡ ಉದ್ದಿಮೆಗಳಿಂದ) ಸಂಗ್ರಹಿಸುತ್ತಿದ್ದ ತೆರಿಗೆಯ ಮೊತ್ತವನ್ನು ಈಗ ಕಿರು ಉತ್ಪಾದಕರೂ ಸೇರಿದಂತೆ ಅರ್ಥವ್ಯವಸ್ಥೆಯ ಎಲ್ಲಾ ವಿಭಾಗಗಳಿಂದಲೂ ಸಂಗ್ರಹಿಸಲು ಪ್ರಯತ್ನಿಸಲಾಗುತ್ತಿದೆ. ಹಾಗಾಗಿ, ಹಿಂದೆಂದೂ ಕಾಣದ ಮಟ್ಟದಲ್ಲಿ ಕಿರು ಉತ್ಪಾದಕರನ್ನು ಹಿಂಡುತ್ತಿರುವುದು ಆಶ್ಚರ್ಯವೇನಲ್ಲ.

ಜಿಎಸ್‌ಟಿಯು ರಾಷ್ಟ್ರೀಯ ಮಾರುಕಟ್ಟೆಯನ್ನು ಒಗ್ಗೂಡಿಸುತ್ತದೆ ಎನ್ನುವ (ಬಂಡವಾಳಶಾಹಿ ಜಗತ್ತಿನ ಅತಿ ಬಲಶಾಲಿ ಅರ್ಥವ್ಯವಸ್ಥೆ ಎನಿಸಿದ ಅಮೇರಿಕಾದಲ್ಲಿ ಮಾರುಕಟ್ಟೆ ಒಗ್ಗೂಡಿಯೇ ಇಲ್ಲ ಎಂಬಂತೆ) ಹುಸಿ ವಾದಗಳ ಮೂಲಕ ಮಾರಾಟಮಾಡಿದ ಅಂಶದ ಅದರ ನಿಜ ಬಣ್ಣ ಈಗ ಬಯಲಾಗಿದೆ: ದೊಡ್ಡ ದೊಡ್ಡ ಉದ್ದಿಮೆಗಳು ಹೊರುತ್ತಿದ್ದ ಸರಕು ತೆರಿಗೆಯ ಭಾರದ ಒಂದು ಭಾಗವನ್ನು ಈಗ ಕಿರು ಉತ್ಪಾದಕರೂ ಸೇರಿದಂತೆ ಸಣ್ಣ ಕೈಗಾರಿಕೆಗಳ ಹೆಗಲಿಗೆ ಹೊರಿಸಲಾಗುತ್ತಿದೆ.

ಭಾರತದ ಒಕ್ಕೂಟದ ಮೇಲಿನ ಹಲ್ಲೆಯು ಎರಡು ಮೂಲಗಳಿಂದ ಬರುತ್ತದೆ: ಒಂದು ಕಡೆಯಲ್ಲಿ ಹಿಂದುತ್ವದ ಶಕ್ತಿಗಳಿಂದ ಇನ್ನೊಂದೆಡೆಯಲ್ಲಿ ಕಾರ್ಪೋರೇಟ್-ಹಣಕಾಸು ಕುಳಗಳಿಂದ. ದೇಶವನ್ನು ಸಧ್ಯದಲ್ಲಿ ಆಳುತ್ತಿರುವ ಮೈತ್ರಿಕೂಟದಲ್ಲಿ ಈ ಎರಡೂ ಶಕ್ತಿಗಳೂ ವಹಿಸುತ್ತಿರುವ ನಿರ್ಣಾಯಕ ಪಾತ್ರದಿಂದಾಗಿ ಕೇಂದ್ರೀಕರಣದ ಪ್ರವೃತ್ತಿಯು ಸಹಿಸಲಾರದಷ್ಟು ಅಗಾಧವಾಗಿದೆ. ಅದು ನಮ್ಮ ರಾಷ್ಟ್ರದ ಉಭಯ ಪ್ರಜ್ಞೆಗಳ ಸಾರಭೂತ ಅಂಗವಾಗಿರುವ ಪ್ರಾದೇಶಿಕ-ಭಾಷಿಕ ರಾಷ್ಟ್ರೀಯತೆಗಳೊಂದಿಗೆ ಒರಟಾಗಿ ವರ್ತಿಸುತ್ತಿದೆ. ಈ ಅಂಶವು ಬರಲಿರುವ ದಿನಗಳಲ್ಲಿ ಹಾನಿಕಾರಕವಾಗಿ ಪರಿಣಮಿಸುತ್ತದೆ.

ಹಿಂದಿನ ಸರ್ಕಾರಗಳ ಎಪ್ಪತ್ತು ವರ್ಷಗಳಲ್ಲಿ ಮಾಡಲಾಗದ್ದನ್ನು ತಾವು ಎಪ್ಪತ್ತೇ ದಿನಗಳಲ್ಲಿ ಮಾಡಿದ್ದೇವೆ ಎಂದು ಬಿಜೆಪಿ ಬೆನ್ನು ತಟ್ಟಿಕೊಳ್ಳುತ್ತದೆ. ಅದು ನಿಜ. ಈ ಎಪ್ಪತ್ತು ವರ್ಷಗಳಲ್ಲಿ ದೇಶವು ಪಿಂಗಾಣಿ-ಗಾಜು ಅಂಗಡಿಯೊಳಗೆ ಗೂಳಿಗಳು ನುಗ್ಗಲು ಬಿಟ್ಟಿರಲಿಲ್ಲ; ಗೂಳಿಗಳು ಈಗ ಬಾಲ ನಿಮಿರಿಸಿಕೊಂಡು ಪಿಂಗಾಣಿ-ಗಾಜು ಅಂಗಡಿಯೊಳಗೆ ಹುಚ್ಚಾಬಟ್ಟೆ ಓಡಾಡುತ್ತಿವೆ.

ನೆರೆ ಸಂತ್ರಸ್ಥರಿಗೆ ಸಮಗ್ರ ಪ್ಯಾಕೇಜ್ ಜಾರಿಗೆ

ಕೊಡಗು ಜಿಲ್ಲಾ ಸಿ.ಐ.ಟಿ.ಯು ಸಮ್ಮೇಳನ ಆಗ್ರಹ





ಕೊಡಗು ಜಿಲ್ಲೆ ಸಿಐಟಿಯುನ 4ನೇ ಜಿಲ್ಲಾ ಸಮ್ಮೇಳನ ವಿರಾಜಪೇಟೆಯ ಹಳೆಯ ಗೋಲ್ಡ್ ಕಾಯಿನ್ ಸಭಾಂಗಣದಲ್ಲಿ ಸೆಪ್ಟೆಂಬರ್ 22 ರಂದು ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ರಾಜ್ಯ ಕಾರ್ಯದರ್ಶಿ ಕೆ ಮಹಾಂತೇಶ್ ಮಾತನಾಡಿ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಒಂದು ಕಡೆ ದೇಶದ ಉತ್ತರದ ತುದಿಯಲ್ಲಿರುವ ಕಾಶ್ಮೀರದ ಜನರನ್ನು ಗೃಹ ಬಂಧನದಲ್ಲಿಟ್ಟು ಅವರ ಹಕ್ಕುಗಳನ್ನು ಮೊಟಕುಗೊಳಿಸಿದ್ದರೆ ಮತ್ತೊಂದಡೆ ದಕ್ಷಿಣದ ಕಾಶ್ಮೀರವೆಂದೇ ಹೆಸರು ಮಾಡಿದ ಕೊಡಗಿನ ನೆರೆ ಸಂತ್ರಸ್ಥರಿಗೆ ಆರ್ಥಿಕ ನೆರವು ನೀಡದೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು. ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಈ ನೀತಿಯಿಂದಾಗಿ ಎರಡು ರಾಜ್ಯಗಳಲ್ಲಿ ಇಂತಹ ವ್ಯವಸ್ಥೆಗೆ ಬಲಿ ಪಶುವಾಗಿರುವವರು ದುಡಿಯುವ ಜನ ಮಾತ್ರವೇ. ಕಾರ್ಮಿಕ ಕಾನೂನು ತಿದ್ದುಪಡಿಗಳ ಮೂಲಕ ಶ್ರಮಿಜೀವಿಗಳು ಇದುವರೆಗೂ ಪಡೆಯಬಹುದಾಗಿದ್ದ ಕನಿಷ್ಟ ವೇತನ, ಭವಿಷ್ಯನಿಧಿ, ಕಲ್ಯಾಣದಂತಹ ಸೌಲಭ್ಯಗಗಳಿಂದ ಕಾರ್ಮಿಕರನ್ನು ವಂಚಿತರನ್ನಾಗಿಸುವ ಹುನ್ನಾರ ನಡೆದಿದೆ. ಸಮಾಜದಲ್ಲಿ ಸಂಪತ್ತಿನ ಸೃಷ್ಠಿಕರ್ತರಾದ ಕಾರ್ಮಿಕರ ಉದ್ದಾರವಾಗದೆ ದೇಶದ ಅಭಿವೃದ್ಧಿ ಅಸಾಧ್ಯ. ಜಾಗತಿಕ ಬಂಡವಾಳ ಶಾಹಿಗಳು ದೇಶದ ಕಾರ್ಮಿಕ ವರ್ಗವನ್ನು ಶೋಷಿಸುವ ದಮನಕಾರಿ ನೀತಿಗಳನ್ನು ಅನುಸರಿಸುತ್ತಿದ್ದಾರೆ. ಇದರ ವಿರುದ್ದ ದುಡಿಯುವ ಜನರು ತಮ್ಮ ಸ್ವಾತಂತ್ರ್ಯ ಹಾಗೂ ಹಕ್ಕುಗಳಿಗಾಗಿ ಹೋರಾಡುವುದು ಇವತ್ತು ಹಿದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ ಎಂದು ಅವರು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮತ್ತೋರ್ವ ರಾಜ್ಯ ಕಾರ್ಯದರ್ಶಿ ಧರ್ಮೇಶ್ ಮಾತನಾಡಿ ಕೊಡಗು ಜಿಲ್ಲೆಯ ಕಾರ್ಮಿಕ ಚಳವಳಿಗಳಿಗೆ ಆರು ದಶಕಗಳ ಇತಿಹಾಸವಿದೆ. ಇಲ್ಲಿ ತೋಟ ಕಾರ್ಮಿಕರು ತಮ್ಮ ಮೇಲೆ ನಡೆಯುತ್ತಿದ್ದ ಶೋಷಣೆ ವಿರುದ್ದ ಪ್ರಬಲ ಚಳವಳಿ ನಡೆಸಿ ಗೆಲುವು ಸಾಧಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ತೋಟ ಕಾರ್ಮಿಕರ ಜೊತೆ, ಕಟ್ಟಡ ನಿರ್ಮಾಣ ಕಾರ್ಮಿಕರು, ಗ್ರಾಮ ಪಂಚಾಯ್ತಿ ನೌಕರರು, ಸ್ಕೀಂ ನೌಕರರು, ವಿವಿಧ ಗುತ್ತಿಗೆ ಆಧಾರಿತ ಕಾರ್ಮಿಕರು ನಮ್ಮ ಜೊತೆ ಸೇರಿರುವುದು ಸಂಘಟನೆಗೆ ಬಲ ಬಂದಿದೆ. ಅವರೆಲ್ಲರನ್ನು ಒಳಗೊಂಡು ಭವಿಷ್ಯದಲ್ಲಿ ಒಂದು ಪ್ರಬಲ ಕಾರ್ಮಿಕ ಚಳವಳಿಯನ್ನು ಬೆಳೆಸುವ ತೀರ್ಮಾನವನ್ನು ಈ ಸಮ್ಮೇಳನ ಕೊಗೊಳ್ಳಬೇಕು ಎಂದು ಕರೆ ನೀಡಿದರು. ಮಾರ್ಗದರ್ಶನ ಮಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ಐ.ಆರ್. ದುರ್ಗಾ ಪ್ರಸಾದ್ ವಹಿಸಿದ್ದರು ವೇದಿಕೆಯಲ್ಲಿ ಉಪಾಧ್ಯಕ್ಷರಾದ ಎ. ಮಹದೇವ್, ಎನ್.ಡಿ. ಕುಟ್ಟಪ್ಪ, ಸಹ ಕಾರ್ಯದರ್ಶಿಯಾದ ಪಿ.ಆರ್. ಭರತ್, ಖಜಾಂಜಿ ಎ.ಸಿ. ಸಾಬು ಮತ್ತು ಪ್ರಧಾನ ಕಾರ್ಯದರ್ಶಿ ಹೆಚ್.ಬಿ. ರಮೇಶ್ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ವರದಿ ಮಂಡನೆ ಬಳಿಕ ವಿವಿಧ ವಿಭಾಗಗಳನ್ನು ಪ್ರತಿನಿಧಿಸಿ 10 ಸಂಗಾತಿಗಳು ಮಾತನಾಡಿದರು. ನೆರೆ ಸಂತ್ರಸ್ಥರಿಗೆ ಸಮಗ್ರ ಪ್ಯಾಕೇಜ್ ಜಾರಿ, ಕನಿಷ್ಟ ಕೂಲಿ ಹಾಗೂ ಗುತ್ತಿಗೆ ಕಾರ್ಮಿಕರಿಗೆ ಕೆಲಸ ಖಾಯಂ ಸೇರಿ ಹಲವು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ಜಿಲ್ಲಾ ಪದಾಧಿಕಾರಿಗಳು

ಅಧ್ಯಕ್ಷರು: ಎ. ಮಹದೇವ್

ಪ್ರಧಾನ ಕಾರ್ಯದರ್ಶಿ: ಎ.ಸಿ. ಸಾಬು

ಖಜಾಂಜಿ: ಹೆಚ್.ಬಿ.ರಮೇಶ್

ಉಪಾಧ್ಯಕ್ಷರು: ಡಾ. ಐ.ಆರ್. ದುರ್ಗಾ ಪ್ರಸಾದ್, ಎನ್.ಡಿ. ಕುಟ್ಟಪ್ಪ, ಪಿ.ಆರ್.ಭರತ್, ನಾಗೇಶ್

ಸಹಕಾರ್ಯದರ್ಶಿ: ಶಾಜಿ ರಮೇಶ್, ಶ್ರೀಮತಿ. ಜಾನಕಿ, ರಾಚಪ್ಪಾಜಿ, ಶ್ರೀಮತಿ ಮಂಜುಳ (ಎರಡು ಸ್ಥಾನ ಖಾಲಿ)

ವರದಿ : ಹೆಚ್.ಬಿ.ರಮೇಶ್

ನೆಲ ಬೊಮ್ಮನಹಳ್ಳಿಯ ರೈತ ಬಾಲಪ್ಪನ ಆತ್ಮಹತ್ಯೆ.... ಪುಟ 16 ರಿಂದ

ದ ಸಾಲ– 57,000 ರೂ.

2) ಭಾರತ ಫೈನಾನ್ಸ್ ಕೂಡ್ಲಿಗಿಯಲ್ಲಿ ವಾರದ ಕಂತು +ಬಡ್ಡಿಯಂತೆ ಮಾಡಿದ ಸಾಲ– 13,700 ಮತ್ತು 34,333 ರೂ.
3) ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್ ಬೆಂಗಳೂರು, ಕೂಡ್ಲಿಗಿ ಶಾಖೆ ಯಿಂದ ತಿಂಗಳ ಕಂತುಗಳ ಸಾಲ –35,000 ರೂ
4) ಗ್ರಾಮದಲ್ಲಿ ಮಾಡಲಾದ ಕೈ ಸಾಲದ ಮೊತ್ತ– 2.5 ಲಕ್ಷ ರೂಗಳಾಗಿದೆ. ಒಟ್ಟು ಸಾಲ – ಸಂಸ್ಥೆಗಳದ್ದು + ಖಾಸಗೀಯದ್ದು 1.40 ಲಕ್ಷ ರೂ. + 2.5 ಲಕ್ಷ ರೂ. ಒಟ್ಟು – 3.95 ಲಕ್ಷ ರೂ. ವಾರದ ಕಂತು ಮತ್ತು ತಿಂಗಳ ಕಂತು ಅವುಗಳ ಬಡ್ಡಿಗೆ ಪ್ರತಿ ತಿಂಗಳು ಕಟ್ಟ ಬೇಕಾದ ಮೊತ್ತ ಕನಿಷ್ಠ – 3050 + 1,750 = 4,800 ರೂ.

ತಾಯಿಯ ಆರೋಗ್ಯಕ್ಕೆ ಇದುವರೆಗೆ 60–70 ಸಾವಿರ ಖರ್ಚು ಮಾಡಲಾಗಿದೆ ಮುಂದೆ ಹಣದ ಅಡಚಣೆಯಿಂದ ಶೂಶ್ರೃಷೆಯನ್ನು ನಿಲ್ಲಿಸಲಾಗಿದೆ. ಮಕ್ಕಳ ಸಂಕಷ್ಟವನ್ನು ನೋಡಿದ ತಾಯಿ ತನಗಾವ ಶೂಶ್ರೃಷೆ ಬೇಡ ಸಾಯುವವಳು ತಾನೆಂದು ಮತ್ತಷ್ಟು ಸಾಲ ಮಾಡಿ ಶೂಶ್ರೃಷೆಯನ್ನು ಮಾಡಿಸಲು ಒಪ್ಪದೆ ತಿರಸ್ಕರಿಸಿ, ಮನೆಯಲ್ಲುಳಿದಿದ್ದಾಳೆ.

ಶೂಶ್ರೃಷೆ ಕೊಡಿಸಲಾಗದೇ ತಾಯಿಯನ್ನು ಕಣ್ಣೆದುರೆ ಸಾಯಲು ಬಿಡಬೇಕಾದ ನತದೃಷ್ಠ ಪರಿಸ್ಥಿತಿ ಬಾಲಪ್ಪನದು. ನಾಲ್ಕು ಜನರು ಬೆಂಗಳೂರು ನಲ್ಲಿ ದುಡಿಯುವವರೆಗೆ ಒಟ್ಟು ಆದಾಯ ಮಾಸಿಕ 30 ಸಾವಿರ ರೂ. ಮನೆ ಬಾಡಿಗೆ 6,000 ರೂ ತಗೆದರೇ ಉಳಿದಿದ್ದು 24,000 ರೂಗಳು ಮಾತ್ರ ಬ್ಯಾಂಕ್ ಹಾಗೂ ಖಾಸಗೀ ಸಾಲವನ್ನು ಬೆಳೆಯಲು ಬಿಟ್ಟರೂ, ಕಟ್ಟಲೇ ಬೇಕಾದ ಫೈನಾನ್ಸ ಕಂಪನಿಗಳಿಗೆ ನೀಡುವ ತಿಂಗಳ ಸಾಲ ಮತ್ತು ಬಡ್ಡಿ ಬಾಬತ್ತು – ಸುಮಾರು 4,800 ರೂ ಆಗಿತ್ತು. ಉಳಿದ ಆದಾಯದಲ್ಲಿ ಈ 05 ಸಾವಿರ ಕಡಿಗೊಂಡರೇ ತಿಂಗಳ ಆದಾಯ ಕೇವಲ– 19,000 ರೂ. ಬೆಂಗಳೂರು ಮತ್ತು ಗ್ರಾಮದಲ್ಲಿರುವ ಕುಟುಂಬದ ಸದಸ್ಯರ ಸಂಖ್ಯೆ ಒಟ್ಟು 12 ಜನ ಪ್ರತಿದಿನದ ತಲಾ ಆದಾಯವು ಆಗ ಕೇವಲ–55 ರೂ. ಮಾತ್ರವೇ ಬೆಂಗಳೂರು ನಂತಹ ಪ್ರದೇಶದಲ್ಲಿ ತಲಾ ಆದಾಯದಲ್ಲಿ ಸಾರಿಗೆ ವೆಚ್ಚ ಶಿಕ್ಷಣದ ಮತ್ತಿತರೇ ವೆಚ್ಚಗಳನ್ನು ಕಳೆದು ಅವರ ಆದಾಯ 30 ರೂ ಮಾತ್ರವೇ ಇದರಲ್ಲಿ ಜೀವನ ನಿರ್ವಹಣೆ ಸಾದ್ಯವೆ?

ಪರಿಸ್ಥಿತಿ ಹೀಗಿರುವಾಗಲೇ ಪೂಜಾರಿ ಬಾಲಪ್ಪನ ಕುಟುಂಬದ ಒಬ್ಬರು ಮದುವೆಯಾಗಿ ಹೊರ ನಡೆದರೇ, ಮತ್ತೊಬ್ಬರು ತಾತ್ಕಾಲಿಕವಾಗಿ ಅಪಘಾತದ ತೊಂದರೆಯಲ್ಲಿದ್ದಾರೆ. ಹೀಗಾಗಿ ಶೇ 40 ರಷ್ಟು ಆದಾಯ ಕಡಿತ ಗೊಂಡಿದ್ದರೆ ವೆಚ್ಚ ಹೆಚ್ಚಳ ಗೊಂಡಿದೆ. ಹೀಗಾಗಿ ತಲಾ ಆದಾಯ ಮತ್ತಷ್ಠು ಕಡಿತಗೊಳ್ಳಲಿದೆ.

ಹೀಗಾಗಿ, ಖಾಸಗೀ ಸಾಲ ಬ್ಯಾಂಕ್ ಸಾಲ ಹಾಗೂ ಫೈನಾನ್ಸ್ ಸಾಲದ ಕಂತು ಮತ್ತು ಬಡ್ಡಿ ತೀರಿಸುವುದು ಮತ್ತು ಆರೋಗ್ಯ ಶಿಕ್ಷಣ ಮತ್ತು ಬದುಕು ಖರೀದಿಸುವುದು ಮತ್ತು ಮರ್ಯಾದೆಯಿಂದ ಬದುಕುವುದು ಹೇಗೆ? ಸಾಲದ ಬಾಧೆಯಿಂದ ಮುಕ್ತ ನಾಗುವುದು ಹೇಗೆ?

ಪೂಜಾರಿ ಬಾಲಪ್ಪ ಮತ್ತು ಆತನ ಸಹೋದರ ಸಾಲದಿಂದ ಮುಕ್ತಿ ಹೊಂದಲು ಕುಟುಂಬವನ್ನು ಮುನ್ನಡೆಸಲು ಮೊದಲು ಆಯ್ಕೆ ಮಾಡಿಕೊಂಡುದು ವ್ಯವಸಾಯವನ್ನು, ಆದ್ದರಿಂದಲೇ ನೀರಾವರಿಗೊಳಪಡಿಸಲು ಯತ್ನಿಸಿದರು ಮತ್ತು ಅದು ನೆರವೇರದಾದಾಗ ಕೈ ಬೀಸಿ ಕರೆದ ಬೆಂಗಳೂರು ಕಡೆ ನಡೆದರು. ಇದರಿಂದ ತಿಂಗಳ ಆದಾಯ 30,000 ಕ್ಕೂ ಹೆಚ್ಚು ಮಾಡಿಕೊಂಡರೂ ಸಾದ್ಯವಾಗಲಿಲ್ಲ. ಕಾರಣ ಜೀವನ ವೆಚ್ಚ ಗಣನೀಯವಾಗಿ ಏರಿಕೆಯಾಗಿ ಬಿಟ್ಟಿದೆ.

ಪರಿಣಾಮವಾಗಿ, ಕುಟುಂಬದ ಯಜಮಾನ ನಾಗಿದ್ದ ಪೂಜಾರಿ ಬಾಲಪ್ಪ ತನ್ನ ತಮ್ಮನಿಗೇಕೆ ಸಾಲದ ಬಾದೆಯೆಂದು ತಾನೇ ಅದರಿಂದ ಮುಕ್ತಿ ಹೊಂದಲು ಆಯ್ಕೆ ಮಾಡಿಕೊಂಡ ದಾರಿ ದೇಶದ ಬಹುತೇಕ ಸಾಲಬಾಧಿತ ರೈತರೆಲ್ಲಾ ಬಲವಂತವಾಗಿ ಆಯ್ಕೆ ಮಾಡಿಕೊಂಡ ದಾರಿಯೇ ಆಗಿದ್ದು ಅತ್ಯಂತ ನೋವಿನ ಸಂಗತಿಯಾಗಿದೆ.

ಎಲ್ಲ ಕುಟುಂಬದ ಸದಸ್ಯರೊಂದಿಗೆ ಗ್ರಾಮಕ್ಕೆ ಭೇಟಿ ನೀಡಿದ್ದ ಪೂಜಾರಿ ಬಾಲಪ್ಪ ಧೃಡವಾದ ನಿರ್ಧಾರದೊಂದಿಗೆ ದಿನಾಂಕ 06 ಸೆಪ್ಟೆಂಬರ್ 19 ರಂದು ಬೆಳಿಗ್ಗೆ 8.00 ಗಂಟೆಗೆ ತನ್ನ ಪ್ರೀತಿಯ ಜಮೀನಿನೆಡೆಗೆ ನಡೆದು ನೇಣಿನ ಕುಣಿಕೆಗೆ ಶಿರ ಒಡ್ಡಿ ಇಹ ತ್ಯಜಿಸಿದ.

ಮಾರ್ಕ್ಸ್‌ವಾದ ಮತ್ತು ಡಿಜಿಟಲ್ ವರ್ತಮಾನ...... ಪುಟ 11 ರಿಂದ

ಅನಿವಾರ್ಯವಾಗಿ ಔದ್ಯಮಿಕ ಶ್ರಮಿಕರಾಗಿ ಬದುಕುವಂತಾಯಿತು. ಒಂದೊಂದು ಯಂತ್ರವು ಆವಿಷ್ಕಾರಗೊಂಡಾಗಲೂ ಬಂಡವಾಳವಾದೀ ಶ್ರಮಸಂಬಂಧದಲ್ಲಿ ಶ್ರಮಿಕರ ಹೆಚ್ಚುವರಿ ದುಡಿಮೆಯ ಅವಧಿ ಹೆಚ್ಚುತ್ತಾಹೋಗಿದ್ದಲ್ಲದೆ ಯಂತ್ರಗಳ ಬಳಕೆಯಿಂದಾಗಿ ಕೆಲಸಕಳೆದುಕೊಂಡ ಶ್ರಮಿಕರ ಪಡೆಯು ಬೆಳೆಯುತ್ತಾ ಹೋಯಿತು. ಯಂತ್ರಗಳಿಂದಾಗಿ ತಮ್ಮ ಕೆಲಸದ ಭಾರ ಹೆಚ್ಚಾಯಿತೆಂದು ಯಂತ್ರಗಳೊಂದಿಗೆ ಕೆಲಸಮಾಡುವ ಶ್ರಮಿಕರು ಗೋಳಾಡಿದರೆ, ಯಂತ್ರಗಳಿಂದಾಗಿಯೇ ಇದ್ದ ಕೆಲಸ ಹೋಯಿತೆಂದು ನಿರುದ್ಯೋಗಿ ಶ್ರಮಿಕರು ಯಂತ್ರದ್ವೇಷವನ್ನು ಬೆಳೆಸಿಕೊಂಡರು. ತೊಂದರೆ ಯಂತ್ರಗಳದ್ದಲ್ಲ, ಬಂಡವಾಳವಾದೀ ಶ್ರಮಸಂಬಂಧಗಳದ್ದೆಂದು ಶ್ರಮಿಕರಿಗೆ ಅರ್ಥವಾಗಲು ಬಹಳ ಕಾಲ ಬೇಕಾಯಿತು. ಸ್ವಯಂಚಾಲಿತ ಯ ಾಂತ್ರೀಕೃತಉತ್ಪಾದನೆಯಉತ್ಪನ್ನಗಳು ವಸಾಹತು ರಾಜಕೀಯದಬಂಡವಾಳವಾದೀ ಉತ್ಪಾದನಾ ಸಂಬಂಧಗಳಿಂದಾಗಿದೇಶೀಯವಾಗಿ ನಿರುದ್ಯೋಗಿ ಶ್ರಮಿಕರ ಪಡೆ ನಿರಂತರವಾಗಿ ಹೆಚ್ಚುತ್ತಲೇ ಹೋಯಿತು. ಈಗ ಇದೆಲ್ಲಾ ಹಳೆಯ ಕತೆ. ಆದರೆ, ಯಂತ್ರಗಳನ್ನು ದೂರಮಾಡಿದರೆ ಸಾಮಾನ್ಯಜನರ ಕಷ್ಟಗಳು ತಾನೇತಾನಾಗಿ ಕಡಿಮೆಯಾಗುತ್ತದೆಂದು ನಂಬುವ ಎಷ್ಟೋ ಮಂದಿ ಸಾಮಾಜಿಕ ಚಿಂತಕರು ಈಗಲೂ ನಮ್ಮ ನಡುವೆ ಇದ್ದಾರೆ.

ಬೆರಳೆಣಿಕೆಯ ಶ್ರೀಮಂತರ ಬಂಡವಾಳವಾದೀ ಉತ್ಪಾದನೆಯ ಶ್ರಮಸಂಬಂಧಗಳಲ್ಲಿ ಶ್ರಮಿಕರ ಕಷ್ಟಗಳು ಹೆಚ್ಚುತ್ತಾ ಹೋಗಿದ್ದುಒಂದು ಮುಖವಾದರೆ, ಬಂಡವಾಳವಾದದ ಶ್ರಮಸಂಬಂಧಗಳಿಂದಾಗಿಯೇ ಆರ್ಥಿಕ ಬಿಕ್ಕಟ್ಟುಗಳು ಹೆಚ್ಚುತ್ತಾ ಹೋಗಿದ್ದು, ಅವನ್ನು ಪರಿಹರಿಸಲು ತೆಗೆದುಕೊಂಡ ಕ್ರಮಗಳಿಂದಾಗಿಯೇ ಮತ್ತಷ್ಟು ಸಂಕಷ್ಟಗಳು ದೇಶ ದೇಶಗಳ ಆರ್ಥಿಕ ಸಂಕಷ್ಟಗಳು ಈಗಲೂ ಹೆಚ್ಚುತ್ತಿರುವುದು ಬಂಡವಾಳವಾದೀ ಶ್ರಮಸಂಬಂಧಗಳ ಮತ್ತೊಂದು ಮುಖ. ಕಳೆದ 30 ವರ್ಷಗಳಲ್ಲಿ ಜಗತ್ತನಾದ್ಯಂತ ಹರಡಿದ ನವ–ಉದಾರವಾದಿ ಆರ್ಥಿಕ ಮತ್ತು ಅದರ ಫಲವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಉತ್ಪಾದನಾ ಶ್ರಮಸಂಬಂಧಗಳಲ್ಲಿ ಕಂಪ್ಯೂಟರೀಕರಣದ ಆರ್ಥಿಕನೀತಿಯು ಶ್ರಮಿಕರ ನಿರುದ್ಯೋಗಪಡೆಯನ್ನು ಅಗಾಧವಾಗಿ ಹೆಚ್ಚಿಸಿದ್ದಲ್ಲದೆ ಜನಸಾಮಾನ್ಯರಿಗೆ ಸ್ವಯಂನಿರ್ವಹಣೆಯ ಹೆಸರಿನಲ್ಲಿ ವೇತನರಹಿತ ಕೆಲಸಗಳನ್ನು ಅಂಟಿಸಿತು. ಬಂಡವಳಿಗರ ಆರ್ಥಿಕ ಸಂಕಷ್ಟಗಳನ್ನು ಕೆಲಮಟ್ಟಿಗೆ ಹಗುರಗೊಳಿಸಿ ಅವರ ಹೆಚ್ಚುವರಿ ಆದಾಯದಲ್ಲಿ ಕಡಿತವಾಗದಂತೆ ನೋಡಿಕೊಳ್ಳಲು ಸಹಾಯಮಾಡಿತು. ಕಡಿಮೆ ವೇತನದ ಶ್ರಮದ ಮಹಿಳೀಕರಣ, ನಿದ್ರೆ ಮತ್ತು ವಿಶ್ರಾಂತಿಯ ಸಮಯದಲ್ಲೂ ಕೆಲಸಮಾಡಬೇಕಾದ ಹೊರಗುತ್ತಿಗೆ ಕೆಲಸಗಳು, ಪ್ರಾಜೆಕ್ಟಿನ ಹೆಸರಿನಲ್ಲಿ ಯುವಜನರು ದೀರ್ಘಕಾಲ ಕೆಲಸಮಾಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿದ ಸಾಫ್ಟ್‌ವೇರ್ ಉದ್ಯಮ, ನವ ಉದಾರವಾದನೀತಿಯ ನೇರ ಫಲಿತಗಳಾಗಿವೆ.

ಜೀವನದ ಎಲ್ಲ ರಂಗಗಳನ್ನು ಆವರಿಸಿರುವ ಡಿಜಿಟಲೀಕರಿಸಿದ ಬಂಡವಾಳವಾದೀ ಕಾರ್ಯಚಟುವಟಿಕೆಯು,ವರ್ತಮಾನದಲ್ಲಿ, ಸ್ಮಾರ್ಟ್‌ಫೋನ್, ಅಂತರ್ಜಾಲ, ಸಾಮಾಜಿಕ ಜಾಲತಾಣಗಳ ಬಿಟ್ಟಿ ಸೌಲಭ್ಯಗಳ ಹೆಸರಿನಲ್ಲಿ ಲಿಂಗ, ವಯಸ್ಸು, ಶಿಕ್ಷಣ, ಬುದ್ಧಿವಂತಿಕೆ, ತಿಳುವಳಿಕೆಗಳ ವ್ಯತ್ಯಾಸಗಳನ್ನು ದಾಟಿ ಜಾಗತಿಕ ಮಟ್ಟದಲ್ಲಿ ವೇತನರಹಿತ ದುಡಿಮೆಗೆ ಜನರನ್ನು ತೊಡಗಿಸಿದೆ. ಕಛೇರಿ–ಮನೆಗಳೆಂಬ ಬೇಧವಿಲ್ಲದೆ, ಕೆಲಸದ ಕಾಲ ಮತ್ತು ವಿಶ್ರಾಂತಿಕಾಲಗಳ ನಡುವೆ ಇದ್ದ ಗೆರೆಯನ್ನು ಅಳಿಸಿಹಾಕಿ 24 ಗಂಟೆಯೂ ಬಿಟ್ಟಿ ದುಡಿಮೆಗೆ ಜನರನ್ನು, ಅದರಲ್ಲೂ ಯವಜನರನ್ನು ತೊಡಗಿಸುವ ಶ್ರಮಸಂಬಂಧಗಳು ಮಾರ್ಕ್ಸ್ ಹೇಳಿದ ಹೆಚ್ಚುವರಿ ಶ್ರಮದಿಂದ ಹುಟ್ಟುವ ಮಿಗುತಾಯ ಮೌಲ್ಯದ ಹೊಸರೂಪಗಳ ಬಗ್ಗೆ ತಳಮಟ್ಟದಿಂದ ಯೋಚಿಸುವಂತೆ ಮಾಡುತ್ತಿವೆ.ಸಾಮುದಾಯಿಕವಾದ ಮತ್ತು ಸಾಮಾಜಿಕವಾದ ಜೀವನದ ಪ್ರತಿಯೊಂದು ಅಂಗವನ್ನೂ ಖಾಸಗಿ ಉತ್ಪಾದನೆಯ ಬಂಡವಾಳವನ್ನಾಗಿಸುವ ದೈತ್ಯ ಡಿಜಿಟಲ್ ಉದ್ಯಮಗಳು, ದೇಶೀಯ ಕಾನೂನುಗಳ ನಿರ್ಬಂಧಗಳಿಗೆ ಒಳಪಡದ ರೀತಿಗಳಲ್ಲಿ, ಗೂಢಚಾರಿಕೆ, ಸರ್ವೇಕ್ಷಣೆ, ಉಸ್ತುವಾರಿಕೆ ಮತ್ತು ಮಾಹಿತಿ ಸಂಗ್ರಹದ ಮೂಲಕ,ಸರಕುಗಳನ್ನು ಮಾರುವುದು ಮಾತ್ರವಲ್ಲ, ಸರ್ಕಾರಗಳನ್ನು ಚುನಾಯಿಸುವ ಜನರ ಮನಸ್ಸನ್ನೇ ಬಂಡವಳಿಗರ ಇಚ್ಚೆಗೆ ಒಗ್ಗುವಂತೆ ನಿಯಂತ್ರಿಸುವಷ್ಟು ಪ್ರಬಲವಾಗಿವೆ. ಜನರೇ ಸ್ವಯಂಪ್ರೇರಿತರಾಗಿ ಎಂಬಂತೆ ಸಾಮಾಜಿಕ ಜಾಲತಾಣಗಳ ಭಂಡಾರಗಳೊಳಕ್ಕೆ ತಂದು ಸುರಿಯುವವ್ಯೆಯಕ್ತಿಕ ವಿವರಗಳು, ಕುಟುಂಬದ ಸದಸ್ಯರ ವಿವರಗಳು, ನೈತಿಕ, ಸಾಂಸ್ಕೃತಿಕ ಆಯ್ಕೆಗಳು, ರಾಜಕೀಯ ಅಭಿಪ್ರಾಯಗಳು ಎಲ್ಲವನ್ನೂ ಸಂಸ್ಕರಿಸಿ ಸರಕನ್ನಾಗಿಸಿ ತಮ್ಮ ಆಳುವ ವರ್ಗದ ಗಿರಾಕಿಗಳಿಗೆ ಮಾರುವ ಮಾಹಿತಿ ಉದ್ಯಮಗಳಾಗಿವೆ. ಇಂಥ ಸೂಕ್ಷ್ಮ ಸನ್ನಿವೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಜವಾಬ್ದಾರಿ ಎಂದಿಗಿಂತ ಹೆಚ್ಚು ಗುರುತರವಾಗಿದೆ. ಶ್ರಮಿಕರ ಪರವಾದ ಸರ್ಕಾರವನ್ನು ಕೇಂದ್ರ ಮತ್ತು ರಾಜ್ಯಗಳಲ್ಲಿ ಸ್ಥಾಪಿಸಲು ಏನೇನು ಅಗತ್ಯವೋ ಅದೆಲ್ಲವನ್ನೂ ಮಾಡಬೇಕಾಗಿರುವುದು ಇಂದಿನ ತುರ್ತು. ಶ್ರಮಿಕರ ರಾಜ್ಯಸ್ಥಾಪನೆಗಾಗಿ ಎಲ್ಲ ಎಡಪಕ್ಷಗಳ ಐಕ್ಯತೆ ಅಪೇಕ್ಷಣೀಯ ಮತ್ತು ಅನಿವಾರ್ಯ.

‘ಟ್ರಂಪ್ ಹಸ್ತಕ್ಷೇಪ ನಿಲ್ಲಿಸು’ ವಿಶ್ವಸಂಸ್ಥೆಯಲ್ಲಿ 1.2 ಕೋಟಿ ವೆನೆಜುವೆಲನ್ನರ ಮಾರ್ದನಿ



ಜಗದ ಸುತ್ತ

ನಾಗರಾಜ ನಂಜುಂಡಯ್ಯ

ನಮ್ಮ ದೇಶದ ಆಂತರಿಕ ವ್ಯವಹಾರಗಳಲ್ಲಿ "ಸಾಮ್ರಾಜ್ಯಶಾಹಿ ಯುಎಸ್ ನ ಹಸ್ತಕ್ಷೇಪ ಸಲ್ಲದು" ಎಂಬ ಆಕ್ರೋಶಭರಿತ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ "ಟ್ರಂಪ್ ನೋ ಮೋರ್" (ಟಂಪ್ ಹಸ್ತಕ್ಷೇಪ ನಿಲ್ಲಿಸು) ಎಂಬ ಅರ್ಜಿಗೆ ವೆನೆಜುವೆಲಾದ 1.2 ಕೋಟಿ ಜನ ಸಹಿ ಹಾಕಿದ್ದಾರೆ.

ವಿಶ್ವಸಂಸ್ಥೆ (ಯು.ಎನ್.) ಯ, ಸಾಮಾನ್ಯ ಸಭೆಯಲ್ಲಿ ಈ ಅರ್ಜಿಯನ್ನು ಯುಎನ್. ಮಹಾ ಕಾರ್ಯದರ್ಶಿ ಆಂಟೋನಿಯೋ ಗುಟೆರೆಸ್ ರವರಿಗೆ ಸಲ್ಲಿಸಲಾಗುವುದು ಎಂದು ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮಡುರೊ ತಿಳಿಸಿದ್ದಾರೆ. ಆದರೆ ಮಡುರೊ ಈ ಸಭೆಯಲ್ಲಿ ಭಾಗವಹಿಸುತ್ತಿಲ್ಲ, ಇವರ ಸ್ಥಾನದಲ್ಲಿ ವೆನೆಜುವೆಲಾ ದ ಉಪಾಧ್ಯಕ್ಷ ಡೆಲ್ಸಿ ರೊಡ್ರಿಗಸ್ ಮತ್ತು ವಿದೇಶಾಂಗ ಸಚಿವ ಜಾರ್ಜ್ ಅರೆಜಾ ರವರು ರಾಷ್ಟ್ರವನ್ನು ಪ್ರತಿನಿಧಿಸಲಿದ್ದಾರೆ ಎನ್ನಲಾಗಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ನಮ್ಮ ಭಾರತ ದೇಶದ ಪ್ರಧಾನ ಮಂತ್ರಿಗಳು ಕೂಡಾ ಮಾತನಾಡಲಿದ್ದಾರೆ. ಇದನ್ನು ವೆನೆಜುವೆಲಾ ಮಡೊರೊ ರೊಂದಿಗೆ ಹೋಲಿಸಿ ನೋಡಿದಾಗ ಎಷ್ಟೊಂದು ವ್ಯತ್ಯಾಸವನ್ನು ಗಮನಿಸಬಹುದು ನೋಡಿ. ಈಗಾಗಲೇ ‘ಹೌಡಿ ಮೋದಿ’ ಎಂಬ ಕಾರ್ಯಕ್ರಮದಲ್ಲಿ ಟ್ರಂಪ್ ನೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದಾರೆ. ಯು.ಎಸ್ ನ ಎಲ್ಲಾ ಬಗೆಯ ಬಲವಂತದ ಧೋರಣೆ ಗಳನ್ನು ಚಾಚೂ ತಪ್ಪದೆ ಉತ್ಸುಕತೆಯಿಂದ ಜಾರಿ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದ ನಮ್ಮ ಆರ್ಥಿಕತೆ ಹಾಳಾಗಿ ನೆಲ ಕಚ್ಚುವ ಸಂಭವವಿದೆ. ಆದಾಗ್ಯೂ, ಟ್ರಂಪ್ ನನ್ನು "ಆತ್ಮೀಯ ಸ್ನೇಹಿತ" ನೆಂದು ಪರಿಗಣಿಸಿ ಅಪ್ಪಿಕೊಳ್ಳುತ್ತಾರೆ. ಆದರೆ ವೆನೆಜುವೆಲಾ ಟ್ರಂಪ್ ನ ಹಸ್ತಕ್ಷೇಪ ದ ನೀತಿಗಳನ್ನು ಬಹಿರಂಗಪಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.

ಯು.ಎಸ್ ನಲ್ಲಿ ಹೆಚ್ಚುತ್ತಿರುವ ಜನಾಂಗೀಯ ದ್ವೇಷದ ಅಪರಾಧಗಳು ಮತ್ತು ಅದರ ಭಾಗವಾಗಿ ವಲಸಿಗರ ಮೇಲೆ ದಾಳಿಗಳು, ಭಾರತೀಯರ ಮೇಲೆ ಹೇರಿರುವ ಎಚ್1 ಬಿ ವೀಸಾ ದಿಗ್ಬಂಧನಗಳು, ಅಥವಾ ಭಾರತದ ಸರಕುಗಳ ಮೇಲಿನ ಸುಂಕದ ಏರಿಕೆ, ಅಥವಾ ಅಗ್ಗದ ಮೂಲ (ಇರಾನ್) ದಿಂದ ತೈಲ ಖರೀದಿ ಯನ್ನು ನಿಲ್ಲಿಸಲು ಬಲಾತ್ಕಾರ. ಇದು ಮೋದಿ ಮತ್ತು ಅವರ ಅನುಯಾಯಿಗಳ ಹುಸಿ ದೇಶಭಕ್ತಿಯ ಪರಿ; ಹೇಗಿದೆ ನೋಡಿ ? ಹಾಗೆಯೇ ವೆನೆಜುವೆಲಾ ದೇಶದ ಮಡುರೊ ಮತ್ತು ಜನಸ್ತೋಮದ ರಾಷ್ಟ್ರಪ್ರೇಮದ ನಡುವಿನ ವ್ಯತ್ಯಾಸವನ್ನು ಗಮನಿಸಿ. ಯಾವುದು ನೈಜ ದೇಶ ಪ್ರೇಮ ? ಯಾವುದು ಹುಸಿ ದೇಶಪ್ರೇಮ?

ವೆನೆಜುವೆಲಾದ ಅದ್ಯಕ್ಷರಾಗಿ ಹ್ಯೂಗೋ ಚಾವೆಜ್ ಆಯ್ಕೆಯಾದಾಗಿನಿಂದ, ಯು. ಎಸ್ ವಿವಿಧ ವಿಧಾನಗಳಿಂದ ದೇಶವನ್ನು ಅಸ್ಥಿರಗೊಳಿಸಲು ಪ್ರಯತ್ನಿಸಿದೆ. ಆದರೆ, ಅದು ಸಫಲವಾಗಲಿಲ್ಲ? ಏಕೆಂದರೆ, ಅಲ್ಲಿನ ಬಹುಸಂಖ್ಯಾತ ಜನಸ್ತೋಮ ಬೊಲಿವಿಯೀರಿಯನ್ ಕ್ರಾಂತಿಯನ್ನು ಮುಂದುವರಿಸುವ ದೃಢಸಂಕಲ್ಪವನ್ನು ಮೈಗೂಡಿಸಿಕೊಂಡಿದ್ದಾರೆ. ಚಾವೆಜ್ ಹಾಕಿಕೊಟ್ಟ ಹಾದಿಯೇ ಇವರ ದೃಢಸಂಕಲ್ಪಕ್ಕೆ ಮೂಲ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಆರಂಭದಲ್ಲಿ ಚಾವೆಜ್ ರ, ಮತ್ತು ಇದೀಗ ಮಡುರೊ ನೇತೃತ್ವದ ಸರ್ಕಾರ ವನ್ನು ಉರುಳಿಸಲು, ಯುಎಸ್ ಅನೇಕ ತಂತ್ರಗಳನ್ನು ಬಳಸಿಕೊಂಡು ಬಂದಿದೆ. ಅವುಗಳೆಂದರೆ, ವಿರೋಧ ಪಕ್ಷಗಳು ಮತ್ತು ಇನ್ನಿತರೆ ಬಂಡು ಗುಂಪು ಕೋರರಿಗೆ ಧನ ಸಹಾಯ ಮಾಡುವುದು, ಪ್ಯಾರ ಮಿಲಿಟರಿ ಗುಂಪುಗಳಲ್ಲಿ ನುಸುಳಿ ಹಿಂಸಾತ್ಮಕ ಕೃತ್ಯಗಳಿಗೆ ಕುಮುಕ್ಕು ಕೊಡುವುದು, ಮಿಲಿಟರಿ ಸಾಮರ್ಥ್ಯವನ್ನು ಸಡಿಲಗೊಳಿಸುವ ತಂತ್ರಗಳನ್ನು ರೂಪಿಸುವುದು, ದಂಗೆಗಳನ್ನು ನಡೆಸಲು ಪ್ರೋತ್ಸಾಹಿಸುವುದು, ಆರ್ಥಿಕ ನಿರ್ಬಂಧಗಳನ್ನು ಹೇರುವುದು, ಮತ್ತು ಆರ್ಥಿಕ ಸಮರವನ್ನು ಸಾರುವುದು. ವಿದ್ಯುಚ್ಛಕ್ತಿ ಉತ್ಪಾದನ ಸ್ಥಾವರಗಳನ್ನು ಹಾಳುಗೆಡವಿ, ವೆನೆಜುವೆಲಾ ದೇಶವನ್ನು ಕಗ್ಗತ್ತಲೆಯಲಿ ಮುಳುಗಿಸಿ, ಜನರನ್ನು ಮಡುರೊ ವಿರುದ್ದ ಎತ್ತಿ ಕಟ್ಟುವುದು. ಹೀಗೆ ಹತ್ತು ಹಲವು ಬಗೆಗಳ ತಂತ್ರಗಾರಿಕೆಯ ಮೂಲಕ, ಒಟ್ಟಾರೆಯಾಗಿ, ಇಡೀ ವೆನೆಜುವೆಲಾದಲ್ಲಿ ಉಸಿರುಗಟ್ಟಿಸುವಂತ ವಾತಾವರಣವನ್ನು ಸೃಷ್ಟಿಸುವುದು. ಇವೆಲ್ಲಾ ಅಮೆರಿಕದ ಹಸ್ತಕ್ಷೇಪ ದ ತಂತ್ರ ಗಳು.

ಇದೀಗ ಯುಎಸ್ ತನ್ನ ಹೊಸ ಬಗೆಯ ಹಸ್ತಕ್ಷೇಪದ ಭಾಗವಾಗಿ, ತನ್ನ ಶಸ್ತ್ರಾಗಾರದಿಂದ ಬಿಡುಗಡೆ ಮಾಡಿರುವ ಇತ್ತೀಚಿನ ಆಯುಧವೆಂದರೆ, ಇಂಟರ್-ಅಮೆರಿಕನ್ ಟ್ರೀಟಿ ಆಫ್ ರೆಸಿಪ್ರೋಕಲ್ ಅಸಿಸ್ಟೆಂಟ್ (ಟಿಐಎಆರ್) ಅನ್ನು ಅನ್ವಯಿಸಿ ಬೆದರಿಕೆಯನ್ನು ಒಡ್ಡುವುದು.

ಟೈಯಾರ್ (ಟಿಐಎಆರ್) ಹಿನ್ನೆಲೆ

ಟಿಐಎಆರ್ ಒಂದು ವಸಾಹತುಶಾಹಿ ಯುಗದ ಒಪ್ಪಂದ. ಇದಕ್ಕೆ 1947 ರಲ್ಲಿ ಸಹಿ ಹಾಕಲು ಯುಎಸ್, ಲ್ಯಾಟಿನ್ ಅಮೆರಿಕದ ವಿವಿಧ ದೇಶಗಳನ್ನು ಒತ್ತಾಯಿಸಿತು. ಈ ಪ್ರದೇಶದಲ್ಲಿನ ಯಾವುದಾದರೂ ದೇಶಕ್ಕೆ ಹೊರಗಿನ ಯಾವುದೇ ಶಕ್ತಿಗಳಿಂದ ಬೆದರಿಕೆ ಇದೆ ಎಂದಾದರೆ, ಅಂತಹ ದೇಶಗಳಿಗೆ ಮಿಲಿಟರಿ ಸಹಾಯವನ್ನು ಟಿಐಎಆರ್ ಖಾತ್ರಿ ಪಡಿಸುತ್ತದೆ. ಸೈದ್ಧಾಂತಿಕ ಕಾರಣಗಳಿಗಾಗಿ ಯುಎಸ್ ನಡೆಸಿದ ಮಿಲಿಟರಿ ಹಸ್ತಕ್ಷೇಪಗಳನ್ನು ‘ನ್ಯಾಯಸಮ್ಮತ’ಗೊಳಿಸಿಲು ಶೀತಲ ಸಮರದ ಅವಧಿಯಲ್ಲಿ ಈ ಒಪ್ಪಂದಕ್ಕೆ ಒತ್ತಾಯಪೂರ್ವಕವಾಗಿ ಸಹಿ ಹಾಕಿಸಲಾಯಿತು.

ಈ ಒಪ್ಪಂದದ ಪ್ರಕಾರ, ಪ್ರಮುಖವಾಗಿ “ಅಮೆರಿಕನ್ ದೇಶಗಳ ವಿರುದ್ದ ಯಾವುದೇ ದೇಶವು ನಡೆಸುವ ಸಶಸ್ತ್ರ ದಾಳಿಯನ್ನು, ಎಲ್ಲಾ ಅಮೆರಿಕನ್ ದೇಶಗಳ ವಿರುದ್ಧದ ದಾಳಿ ಎಂದು ಪರಿಗಣಿಸಲಾಗುತ್ತದೆ." ಆದ್ದರಿಂದ, ಹೀಗೆ ಒಪ್ಪಂದಕ್ಕೆ ಬಂದ ಪ್ರತಿಯೊಂದು ದೇಶ ಅಥವಾ ಪಕ್ಷಗಳು, ನ್ಯಾಯಸಮ್ಮತ ವ್ಯಕ್ತಿ ಅಥವಾ ಸಾಮೂಹಿಕ ರಕ್ಷಣೆಯ ಅವರ ಹಕ್ಕನ್ನು ಚಲಾಯಿಸುವಲ್ಲಿ ದಾಳಿಯನ್ನು ನಿಭಾಯಿಸಲು ಸಹಾಯ ಮಾಡುತ್ತವೆ. ಈ ಒಪ್ಪಂದ ಕುಖ್ಯಾತ "ಮನ್ರೋ ಸಿದ್ಧಾಂತ" ದ ಮತ್ತೊಂದು ಅಭಿವ್ಯಕ್ತಿ ರೂಪವಾಗಿದೆ. ಆದ ಕಾರಣ, ಈ ಪ್ರದೇಶದ ಯಾವುದೇ ದೇಶದಲ್ಲಿ ಮಧ್ಯೆ ಪ್ರವೇಶಿಸಲು ಯುಎಸ್ ಗೆ ಮುಕ್ತ ಅವಕಾಶವನ್ನು ಈ ಒಪ್ಪಂದ ಕಲ್ಪಿಸಿಕೊಡುತ್ತದೆ.

ಈ ಒಪ್ಪಂದದ ಅಡಿಯಲ್ಲಿ, ಯುಎಸ್, ಇದೀಗ ವೆನೆಜುವೆಲಾಕ್ಕೆ ಬೆದರಿಕೆ ಒಡ್ಡುತ್ತಿದೆ. ಅದೇನೆಂದರೆ, "ವೆನೆಜುವೆಲಾ ತನ್ನ ಸಶಸ್ತ್ರ ಗುಂಪುಗಳಿಗೆ ಕೊಲಂಬಿಯಾ ನೆಲದಲ್ಲಿ ತರಬೇತಿ ಕೊಟ್ಟು, ತನ್ನ ವಿರುದ್ಧ ಸಂಚು ರೂಪಿಸುತ್ತಿದೆ’ ಎಂದು ಕೊಲಂಬಿಯಾ ಇತ್ತೀಚೆಗೆ ಅಮೆರಿಕನ್ ದೇಶಗಳ ಸಂಘಟನೆ (ಒಎಎಸ್) ಸಭೆಯಲ್ಲಿ ವೆನೆಜುವೆಲಾ ವಿರುದ್ಧ ದೂರು ನೀಡಿದೆ. ಈ ಹಿನ್ನೆಲೆಯಲ್ಲಿ ಟಿಐಎಆರ್ ಒಪ್ಪಂದದ ಅಡಿಯಲ್ಲಿ ಬೆದರಿಕೆ ಒಡ್ಡಲು ಯುಎಸ್ ಪ್ರಯತ್ನಿಸುತ್ತಿದೆ.

ಇದೇ ಸೆಪ್ಟೆಂಬರ್ 11ರಂದು ನಡೆದ ಒ.ಎ.ಎಸ್ ಸಭೆಯಲ್ಲಿ, ವೆನೆಜುವೆಲಾ ವನ್ನು ಈ ಪ್ರದೇಶದ ಭದ್ರತೆಗೆ ಅಪಾಯ "ತಂದೊಡ್ಡುವ ದೇಶ" ವೆಂದು ನಿರ್ಧರಿಸಿದೆ. ಪ್ರಾಸಂಗಿಕವಾಗಿ, ಇಲ್ಲಿ ನೆನಪಿಡಬೇಕಾದ್ದು ಏನೆಂದರೆ, ಇದೇ ದಿನ 1971 ರಲ್ಲಿ, ಚಿಲಿಯಲ್ಲಿ, ಯುಎಸ್ ಮಿಲಿಟರಿ ಹಸ್ತಕ್ಷೇಪ ನಡೆಸಿತ್ತು. ಅಂದೇ, ಸಾಲ್ವಡಾರ್ ಅಲೆಂಡಾ ಅವರ ಜನಪ್ರಿಯ ಪ್ರಜಾಸತ್ತಾತ್ಮಕ ಸರಕಾರ ವನ್ನು ಕಿತ್ತು ಹಾಕಿತ್ತು. ಈ ಹಸ್ತಕ್ಷೇಪಕ್ಕೆ ಅಮೆರಿಕಾಕ್ಕೆ ಯಾವುದೇ ಶಿಕ್ಷೆ ಇಲ್ಲವೇ? ಎಂದು ವೆನೆಜುವೆಲಾದ ಜನರು ಇದೀಗ ಪ್ರಶಿಸಲಾರಂಭಿಸಿದ್ದಾರೆ. ಇದು ಯುಎಸ್ ಗೆ ಕಿರಿಕಿರಿ ತಂದಿದೆ ಕೂಡ.

ಒ.ಎ.ಎಸ್ ನ ಸಭೆಯಲ್ಲಿ ಕೊಲಂಬಿಯಾ ನೀಡಿರುವ ದೂರಿಗೆ ಯಾವುದೇ ಸಾಕ್ಷಿಗಳು ಅಥವಾ ಪುರಾವೆಗಳು ಇಲ್ಲವೆಂದು ವೆನೆಜುವೆಲಾ ಪ್ರತಿಪಾದಿಸಿದೆ. ಏಕೆಂದರೆ, ಅದರ ನೆಲದಲ್ಲಿ ವೆನೆಜುವೆಲಾ ಯಾವುದೇ ಸಶಸ್ತ್ರ ಪಡೆಗಳಿಗೆ ಕೊಲಂಬಿಯಾ ವಿರುದ್ದ ತರಬೇತಿ ನೀಡುತ್ತಿಲ್ಲ. ಬದಲಿಗೆ ವೆನೆಜುವೆಲಾ ಮತ್ತು ಕೊಲಂಬಿಯಾ ಗಡಿಯುದ್ದಕ್ಕೂ, ಕಳೆದ ಒಂದು ವರ್ಷದಿಂದ ಸುಮಾರು 44 ಅಕ್ರಮಣಕಾರಿ ದಾಳಿಗಳನ್ನು ಕೊಲಂಬಿಯಾವೇ ನಡೆಸಿದೆ. ಇದಕ್ಕೆ ಯು.ಎಸ್ ನ ಬೆಂಬಲವಿಲ್ಲ ವೆಂದು ಹೇಳಲಾಗದು. ಇದಕ್ಕೆ ಸಾಕ್ಷಿಗಳನ್ನು ವೆನೆಜುವೆಲಾ ಒದಗಿಸಲು ಸಿದ್ದವಿದೆ. ಒಮ್ಮೆ ಮಡೊರೊ ತನ್ನ ಮಿಲಿಟರಿ ಕ್ಯಾಂಪ್ ನಲ್ಲಿ ಮಾತನಾಡುತ್ತಿದ್ದಾಗ, ಕೊಲಂಬಿಯಾ ಒಳಸಂಚು ನಡೆಸಿ, ಮಡುರೊ ರನ್ನು ಕೊಲ್ಲಲು ಪ್ರಯತ್ನಿಸಿದನ್ನು ಇಲ್ಲಿ ನೆನಪಿಸಿಕೊಳ್ಳ ಬೇಕು. ಇಂತಹ ಘಟನೆಗಳನ್ನು ತಡೆಗಟ್ಟುವ ಬದಲಿಗೆ ಕೊಲಂಬಿಯಾವು, ಯುಎಸ್ ನ ಬಂಟನಂತೆ ವರ್ತಿಸುತ್ತಿದೆ ಎಂದು ವೆನೆಜುವೆಲಾದ ವಿದೇಶಾಂಗ ಸಚಿವರಾದ ಜಾರ್ಜ್ ಅರೆಜಾ ರವರು ಒ.ಎ.ಎಸ್ ನಿರ್ಧಾರಕ್ಕೆ ಪ್ರತಿಕ್ರಿಯೆ ವ್ಯಕ್ತ ಪಡಿಸಿದ್ದಾರೆ.

ಚವೇಝ್ ಬೆಳೆಸಿದ ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆ

ಪ್ರಗತಿಪರ ಸರ್ಕಾರಗಳಾದ ವೆನೆಜುವೆಲಾ, ಬೊಲಿವಿಯಾ, ಈಕ್ವೆಡಾರ್ ಮತ್ತು ನಿಕರಾಗುವಾ ದೇಶಗಳು, ಇನ್ನೂ ಮುಂದೆ ಅಮೆರಿಕ ಹೇರಿದ ಟಿಐಎಆರ್ ಅನ್ನು ನಾವುಗಳು ಮನ್ನಿಸುವುದಿಲ್ಲ ಮತ್ತು ಈ ಒಪ್ಪಂದದಿಂದ ಹಿಂದೆ ಸರಿದಿದ್ದೇವೆ ಎಂದು 2013 ರಲ್ಲಿಯೇ ಘೋಷಿಸಿದ್ದೇವೆ ಎಂದಿದ್ದಾರೆ. ಆದರೆ, ಇದೀಗ ವೆನೆಜುವೆಲಾದ ಸ್ವಯಂ-ಘೋಷಿತ ಅಧ್ಯಕ್ಷ ಜುವಾನ್ ಗೈಡೊ , ಟಿಐಎಆರ್ ಒಪ್ಪಂದವನ್ನು ಒಪ್ಪಿಕೊಂಡು ಸೇರಿಕೊಂಡಿದ್ದೇನೆ ಎಂದಿದ್ದಾನೆ. ಇದಕ್ಕೆ ಅಮೆರಿಕದ ಪ್ರೇರಣೆ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ.

ವೆನೆಜುವೆಲಾದ ವಿದೇಶಾಂಗ ಸಚಿವ ಜಾರ್ಜ್ ಅರೆಜಾ ರವರು ಒ.ಎ.ಎಸ್ ನಿರ್ಧಾರಕ್ಕೆ ಪ್ರತಿಕ್ರಿಯೆ ನೀಡುತ್ತಾ, "ಯು.ಎಸ್ ಸೈನ್ಯದಿಂದ ಆಕ್ರಮಣಕ್ಕೆ ಒಳಗಾದ ದೇಶಗಳು ಮತ್ತು ಟಿಐಎಆರ್ ಅನ್ವಯಿಕ ದಿಂದ ಜನರನ್ನು ಹತ್ಯೆಗೈದ ದೇಶಗಳು, ಪ್ರಸಕ್ತ ಸಹೋದರ ರಾಷ್ಟ್ರದ ವಿರುದ್ಧದ ಅಪರಾಧವನ್ನು ಅನುಮೋದಿಸುತ್ತವೆ" ಎಂದಿದ್ದಾರೆ. ಅದೇರೀತಿ ವೆನೆಜುವೆಲಾ ದ ಅದ್ಯಕ್ಷ ನಿಕೊಲಸ್ ಮಡುರೊ ರವರು ಒ.ಎ.ಎಸ್ ನ ನಿರ್ಧಾರವನ್ನು ಪ್ರಶ್ನಿಸಿದ್ದಾರೆ. "ವೆನೆಜುವೆಲಾ ಕ್ಕೆ ಸಂಬಂಧಿಸಿದಂತೆ ಟಿಐಎಆರ್ ಅನ್ನು ಅನ್ವಯಿಸುವ ಯಾವುದೇ, ಉದ್ದೇಶವು ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ದಕ್ಕೆ ತರುವ ಪ್ರತಿಕೂಲ ಕಾರ್ಯವೆಂದು ಪರಿಗಣಿಸಲಾಗುತ್ತದೆ ಮತ್ತು ಇದು ನಮ್ಮ ಪ್ರದೇಶ, ನಮ್ಮ ಜನರು ಮತ್ತು ರಾಷ್ಟ್ರದ ಶಾಂತಿ ಕದಕುವ ಹಾಗೂ ಅಂತರರಾಷ್ಟ್ರೀಯ ಕಾನೂನಿನ ವಿರುದ್ದದ ಆಕ್ರಮಣವಾಗಿದೆ" ಎಂದಿದ್ದಾರೆ. ವೆನೆಜುವೆಲಾದ ಸಶಸ್ತ್ರ ಪಡೆಗಳು ಸಲ್ಲಿಸಿರುವ ಮನವಿಯನ್ನು ಯು.ಎಸ್ ಕಡೆಗಣಿಸಿದೆ. ಯಾವುದೇ ಶಕ್ತಿಯು ವೆನೆಜುವೆಲಾ ಭೂಪ್ರದೇಶ ಮತ್ತು ಸರ್ಕಾರವನ್ನು ಅಸ್ಥಿರಗೊಳಿಸಲು ಮಾಡುವ ಎಷ್ಟೇ ಪ್ರಬಲ ಪ್ರಯತ್ನಗಳನ್ನು ನಡೆಸಿದರೂ ಸಹಾ, ವೆನೆಜುವೆಲಾ ಸಶಸ್ತ್ರ ಪಡೆಗಳು ವೆನೆಜುವೆಲಾವನ್ನು ರಕ್ಷಣೆ ಮಾಡುತ್ತವೆ. ಅವುಗಳಲ್ಲಿ ಯು.ಎಸ್ ನ ಎಲ್ಲ ತರದ ತಂತ್ರಗಳನ್ನು ಬಗ್ಗು ಬಡಿಯುತ್ತೇವೆ ಎಂಬ ವಿಶ್ವಾಸವನ್ನು ಮಡುರೊ ವ್ಯಕ್ತ ಪಡಿಸಿದ್ದಾರೆ.

ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆಯನ್ನು ವೆನೆಜುವೆಲಾ ಜನರಲ್ಲಿ ಚಾವೆಜ್ ಬಿತ್ತಿದ್ದಾರೆ. ಯು. ಎಸ್ ನ ಗೊಡ್ಡು ಬೆದರಿಕೆಗಳನ್ನು ಅರಿತುಕೊಳ್ಳಲು ಅದು ಇಂದಿಗೂ ಸಹಕಾರಿಯಾಗಿದೆ. ಮಡುರೊ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ನಡೆಸುತ್ತಿದ್ದಾರೆ. ಅದರ ಫಲವಾಗಿ "ಟ್ರಂಪ್ ನೋ ಮೋರ್" ಎಂಬ ಖಂಡನಾರ್ಹ ಪತ್ರಕ್ಕೆ ಭಾರಿ ಬೆಂಬಲ ವ್ಯಕ್ತವಾಗಿದೆ. ಇದು ಯು.ಎಸ್ ನ ಹಸ್ತಕ್ಷೇಪ ನೀತಿಗಳನ್ನು ಬಹಿರಂಗ ಪಡಿಸುವ ಸಲುವಾಗಿ ಜನರನ್ನು ಸಜ್ಜುಗೊಳಿಸಲಾಗಿದೆ. ಹೀಗೆ ಸಜ್ಜುಗೊಂಡಿರುವ ಜನಸ್ತೋಮ ಯಾವುದೇ ಸಾಮ್ರಾಜ್ಯ ಶಾಹಿ ಆಕ್ರಮಣವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂಬುದನ್ನು ವೆನೆಜುವೆಲಾ ದ ಬೊಲಿವಿಯೀರಿಯನ್ ಕ್ರಾಂತಿಯ ಪ್ರೇರಿತ ಜನರು ಜಗತ್ತಿಗೆ ತೋರಿಸಿ ಕೊಡುತ್ತಿದ್ದಾರೆ. ಭಾರತದ ನಮ್ಮ ಜನರಿಗೂ ಇದು ಸ್ಪೂರ್ತಿ ತುಂಬುವಂತಾಗಲಿ.



JANASHAKTHI KANNADA VARA PATRIKE September 30- October 6 , 2019 Price: Rs. 10/- Date of Publication: 27 September 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ನೆಲ ಬೊಮ್ಮನಹಳ್ಳಿಯ ರೈತ ಬಾಲಪ್ಪನ ಆತ್ಮಹತ್ಯೆ ವೃತ್ತಾಂತ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಳಾದ ಯು. ಬಸವರಾಜ ಮತ್ತು ಸಂಡೂರು ತಾಲೂಕಾ ಸಂಚಾಲಕರಾದ ಯು. ತಿಪ್ಪೇ ಸ್ವಾಮಿ ಇವರಿರುವ ನಿಯೋಗ ದಿನಾಂಕ 19.09.2019 ರಂದು ನೆಲ ಬೊಮ್ಮನಹಳ್ಳಿಗೆ ಭೇಟಿ ನೀಡಿ ಆತ್ಮಹತ್ಯೆ ಮಾಡಿಕೊಂಡ ರೈತ ಬಾಲಪ್ಪನವರ ಕುಟುಂಬಕ್ಕೆ ಸಾಂತ್ವಾನ ಹೇಳಿತಲ್ಲದೇ ಆ ಕುಟುಂಬದ ವಿವರಗಳನ್ನು ಪಡೆಯಿತು.

ಅದೇ ರೀತಿ ಗ್ರಾಮದ ಪ್ರಮುಖ ರೈತರ ಸಭೆ ನಡೆಸಿ ಆತ್ಮಹತ್ಯೆಗಳು ಪರಿಹಾರವಲ್ಲ ಸಾಲದ ಬಾಧೆಗೆ ಕೇರಳ ಮಾದರಿಯಲ್ಲಿ ಋಣಮುಕ್ತ ಕಾಯ್ದೆ ಜಾರಿಗಾಗಿ ಮತ್ತು ಡಾ. ಎಂ.ಎಸ್ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸೇರಿಸಿದ ಬೆಂಬಲ ಬೆಲೆಯ ಕಾಯ್ದೆಗಾಗಿ ಒಗ್ಗೂಡಿ ಹೋರಾಡುವುದೊಂದೆ ಪರಿಹಾರವಾಗಿದೆ. ನಿಮ್ಮ ಜೊತೆ ರೈತ ಸಂಘವಿದೆಯೆಂದು ತಿಳಿಸಿ ಧೈರ್ಯ ತುಂಬಲಾಯಿತು.

ಮಾತ್ರವಲ್ಲಾ ಆತ್ಮಹತ್ಯೆ ಮಾಡಿಕೊಂಡ ರೈತ ಬಾಲಪ್ಪನಿಗೆ ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ಪ್ರತಿಭಟನೆಯನ್ನು ಸಂಘಟಿಸಲು ಸಭೆ ನಿರ್ಧರಿಸಿದೆ.

ಹಿಂದುಳಿದ ಗೊಲ್ಲ ಜನ ಸಮುದಾಯಕ್ಕೆ ಸೇರಿದ ಪೂಜಾರಿ ಸಣ್ಣ ಬಾಲಪ್ಪ 75 ವರ್ಷ ಮತ್ತು ಕರಿಯಮ್ಮ 65 ವರ್ಷ ದಂಪತಿಗಳು ಬಳ್ಳಾರಿ ಜಿಲ್ಲೆ ಕೂಡ್ಲೀಗಿ ತಾಲೂಕು ಗುಡೇಕೋಟೆ ಹೋಬಳಿಯ ನೆಲ ಬೊಮ್ಮನಹಳ್ಳಿಗೆ ಸೇರಿದ ಬಡ ರೈತ ಕುಟುಂಬದವರಾಗಿದ್ದಾರೆ. ಇವರಿಗೆ ಮೂವ್ವರು ಮಕ್ಕಳಿದ್ದಾರೆ. ದಿವಂಗತ ಪೂಜಾರಿ ಬಾಲಪ್ಪ 48 ವರ್ಷ, ಪೂಜಾರಿ ಈರಪ್ಪ 46 ವರ್ಷ, ಪೂಜಾರಿ ವೀರ ಬಾಲಪ್ಪ 44 ವರ್ಷ ಎಲ್ಲರಿಗೂ ಮದುವೆಯಾಗಿದೆ.

ಪೂಜಾರಿ ಸಣ್ಣ ಬಾಲಪ್ಪ ಮತ್ತು ಕರಿಯಮ್ಮ ಕಳೆದ 15 ವರ್ಷಗಳ ಹಿಂದೆಯೇ ತಮಗಿದ್ದ ಒಟ್ಟು 08 ಎಕರೆ ಮಳೆ ಆಧಾರಿತ ಕೃಷಿ ಭೂಮಿಯನ್ನು ಮಕ್ಕಳಿಗೆ ತಲಾ ಎರಡು ಎಕರೆಯಂತೆ ಪಾಲು ವಿಭಾಗ ಮಾಡಿಕೊಟ್ಟಿದ್ದಾರೆ. ತಮಗೆ (ಗಂಡ – ಹೆಂಡತಿ) ಅಂದರೆ ಯಜಮಾನರ ನಿರ್ವಹಣೆಗೆಂದು ತಲಾ ಒಂದು ಎಕರೆ ಭೂಮಿ ಉಳಿಸಿಕೊಂಡಿದ್ದಾರೆ. ಮೂರನೆ ಮಗ ವೀರ ಬಾಲಪ್ಪ ತಾನು ಪ್ರತ್ಯೇಕ ಮನೆ ಮಾಡಿ ಜೀವಿಸುತ್ತಿದ್ದಾನೆ. ತಂದೆಯನ್ನು ತಾನು ನೋಡಿಕೊಳ್ಳುವುದಾಗಿ ಆತನ ಪಾಲಿನ ಒಂದು ಎಕರೆ ಜಮೀನನ್ನು ಪಡೆದಿದ್ದಾನೆ. ಉಳಿದಿಬ್ಬರು ಹಿರಿಯ ಮಗ ಪೂಜಾರಿ ಬಾಲಪ್ಪನ ಯಜಮಾನತ್ವದಲ್ಲಿ ತಮ್ಮ ಕುಟುಂಬ ಗಳೊಂದಿಗೆ ತಾಯಿಯನ್ನು ಸೇರಿಸಿಕೊಂಡು ಅವರ ಪಾಲಿನ ಒಂದು ಎಕರೆ ಜಮೀನನ್ನು ಪಡೆದುಕೊಂಡು ಜಂಟಿ ಕಟುಂಬವಾಗಿ ಜೀವನ ನಿರ್ವಹಿಸುತ್ತಿದ್ದಾರೆ.

ನೆಲ ಬೊಮ್ಮನಹಳ್ಳಿ 300 ವಸತಿಗಳನ್ನು ಹೊಂದಿದ ಪುಟ್ಟ ಗ್ರಾಮ. ಸುಮಾರು 250 ವಸತಿಗಳನ್ನು ಗೊಲ್ಲ ಸಮುದಾಯದವರೇ ಹೊಂದಿದ್ದಾರೆ. ಲಿಂಗಾಯಿತ ಸಮುದಾಯದ 10 ಹಾಗೂ ಪರಿಶಿಷ್ಠ ಸಮುದಾಯದ 36 ವಸತಿಗಳಿವೆ. ಶೇ 50 ಕುಟುಂಬಗಳು ತಲಾ ಸರಾಸರಿ ಕನಿಷ್ಠ ಮೂರು ಎಕರೆಗಳಷ್ಟು ಜಮೀನನ್ನು ಹೊಂದಿವೆ. ಈ ಎಲ್ಲಾ ಕುಟುಂಬಗಳು ಗ್ರಾಮದ ಒಟ್ಟಾರೇ ಒಂದು ಸಾವಿರ ಎಕರೆಯಷ್ಟು ಪ್ರದೇಶದ ಮಳೆ ಆಧಾರಿತ ಕೃಷಿ ಭೂಮಿಯನ್ನೇ ನಂಬಿದ ಕುಟುಂಬಗಳಾಗಿವೆ.

ಉತ್ತಮ ಕೃಷಿ ಭೂಮಿ ಹೊಂದಿದ ನೀರಾವರಿ ಈ ಗ್ರಾಮ ರಾಜ್ಯದ ಬಹುತೇಕ ಮಳೆ ಆಧಾರಿತ ಗ್ರಾಮಗಳಂತೆಯೇ ನಿರಂತರವಾಗಿ ಬರಗಾಲಗಳಿಂದ ತತ್ತರಿಸಿದ ಗ್ರಾಮವಾಗಿದೆ.

ಕಳೆದ ಏಳೆಂಟು ವರ್ಷಗಳ ಹಿಂದೆ ಗ್ರಾಮದೊಳಗೆ ಹೊಸ ಸನ್ನಿವೇಶ ನಿರ್ಮಾಣವಾಯಿತು. ಗ್ರಾಮದ ಬಹುತೇಕ ರೈತರು ಸಾಲ ಎತ್ತಿ ಕೊಳವೆ ಭಾವಿ ಕೊರೆಸಿ ಜಮೀನುಗಳನ್ನು ನೀರಾವರಿಗೊಳಪಡಿಸಲು ಕ್ರಮವಹಿಸಿದರು.

ಹಲವರು ಹಲವು ಕೊಳವೆ ಬಾವಿಗಳನ್ನು ಕೊರೆಸಿ ನೀರಾವರಿಗೊಳಪಡಿಸಲು ಮುಂದಾದರು.

ಈ ಬೆಳವಣಿಗೆಗಳ ಭಾಗವಾಗಿ ಇದನ್ನೆಲ್ಲಾ ಕುತೂಹಲದಿಂದ ಗಮನಿಸುತ್ತಿದ್ದ ಪೂಜಾರಿ ಬಾಲಪ್ಪ ತನ್ನ ಹಾಗೂ ತನ್ನ ತಮ್ಮನ ಕುಟುಂಬದ ಒಟ್ಟು 12 ಸದಸ್ಯರ ಹೊಟ್ಟೆ ಪಾಡಿಗಾಗಿ ತಮ್ಮಪಾಲಿನ ಒಟ್ಟು ಐದು ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ನೀರಾವರಿ ಮಾಡಿಕೊಂಡು ಬರದ ಬಾಧೆಯಿಂದ ವಲಸೆ ಹೋಗದೇ ಗ್ರಾಮದಲ್ಲಿಯೇ ಉಳಿಯಲು ನಿರ್ಧರಿಸಿ ಕೊಳವೆ ಬಾವಿ ಕೊರೆಸಲು ಕಳೆದ ಐದು ವರ್ಷಗಳ ಹಿಂದೆಯೇ ಮುಂದಾಗಿದ್ದ.

ಮೊದಲ ಬಾವಿ ನೀರು ದೊರಕಿಸಿಕೊಳ್ಳುವಲ್ಲಿ ವಿಫಲವಾಗಿ, ಲಕ್ಷಾಂತರ ರೂಗಳ ಸಾಲ ಮಾಡಿಕೊಂಡ. ಇದರೊಂದಿಗೆ ಬೆಳೆ ಸಾಲ ಮತ್ತು ಬದುಕಿದ ಸಾಲಗಳು ಬೆನ್ನಿಗೇರಿದ್ದವು. ಆದರೂ ಸಹೋದರರಿಬ್ಬರು ಛಲ ಬಿಡದೇ ಮತ್ತೊಂದು ಕೊಳವೆ ಭಾವಿಗೆ ಕ್ರಮವಹಿಸಿದರು. ಅದು ನೀರನ್ನೇನು ತೋರಿತು ಆದರೇ ಒಂದೆರಡು ತಿಂಗಳಲ್ಲಿಯೇ ಬತ್ತಿ ಹೋಯಿತು. ಇದರಿಂದ ಸುಸ್ತಾದ ಸಹೋದರರು ವ್ಯವಸಾಯದ ಆಸೆಯನ್ನು ಕೈ ಬಿಟ್ಟರು.

ಈ ನಡುವೆ ತಾಯಿಯ ಆರೋಗ್ಯ ಕೈ ಕೊಟ್ಟಿತು. ಅವರಿಗೆ ಕ್ಯಾನ್ಸರ್ ಎಂದು ತಿಳಿಯಿತು. ಅದೇ ರೀತಿ, ಪೂಜಾರಿ ಬಾಲಪ್ಪನ ಮೊದಲ ಮಗಳು ಮದುವೆ ವಯಸ್ಸಿಗೆ ಬಂದಳು. ಊರಲ್ಲಿ ಕೆಲಸವಿಲ್ಲ. ತುಂಬು ಸಂಸಾರದ ಹೊರೆ, ಸಾಲದ ಋಣಭಾರ ಚಿಂತೆಗೀಡು ಮಾಡಿದವು. ಆದರೇನು ದುಡಿಯಲು ಸಿದ್ದರಿರುವ ಕೈಗಳು ಇದ್ದವು. ಇನ್ನೂ ಯೋಚಿಸುತ್ತಾ, ಚಿಂತಿಸುತ್ತಾ ಕುಳಿತರೇ ಆಗದೆಂದು ಭಾವಿಸಿದ ಸಹೋದರರಿಬ್ಬರು ಗ್ರಾಮವನ್ನು ತೊರದು ಹೊಸ ಬದುಕನ್ನು ಹರಸಿ ಕೈ ಬೀಸಿ ಕರೆದ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದ್ದರು.

ಸಹೋದರರಿಬ್ಬರನ್ನು ಗಾರೆಯ ಕೆಲಸದಲ್ಲಿ ತೊಡಗಿಸಿಕೊಂಡ ಬೆಂಗಳೂರು, ಒಂದೇ ವರ್ಷದಲ್ಲಿ ಬದುಕಿಸುವ ಭರವಸೆ ನೀಡಿತು.

ಅದೇ ಭರವಸೆಯಲ್ಲಿ ಮೊದಲೆರಡು ಮಕ್ಕಳನ್ನು ವಿದ್ಯಾಭ್ಯಾಸ ಬಿಡಿಸಿ ಬೆಂಗಳೂರಿಗೆ ಕರೆಸಿಕೊಂಡ. ಮೊದಲ ಮಗಳು ಗಾರ್ಮೆಂಟ್ ಕೆಲಸಕ್ಕೆ ಸೇರಿಕೊಂಡಳು. ಎರಡನೇ ಮಗನು 10 ನೇ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ ಬೆಂಗಳೂರು ಸೇರಿಕೊಂಡ. ಈ ನಡುವೆ ತಮ್ಮ ಸೆಕ್ಯೂರಿಟಿ ಗಾರ್ಡ ಆಗಿ ಸೇರಿಕೊಂಡ. ಇದರಿಂದ ಮತ್ತಷ್ಟು ಭರವಸೆ ಹೊಂದಿದ ಸಹೋದರಿರಬ್ಬರು ಯೋಚಿಸಿ, ನೆಲ ಬೊಮ್ಮನಹಳ್ಳಿ ಗ್ರಾಮದಲ್ಲಿ ತಾಯಿ ಮತ್ತು ತಮ್ಮನ ಹೆಂಡತಿ ಇಬ್ಬರನ್ನು ಬಿಟ್ಟು ಉಳಿದ ತಮ್ಮ ಕುಟುಂಬದ ಸದಸ್ಯರನ್ನೆಲ್ಲಾ ಬೆಂಗಳೂರಿಗೆ ಕರೆಸಿಕೊಂಡಿದ್ದರು. ಮಾಗಡಿ ರಸ್ತೆಯ ದೊಡ್ಡ ಗೊಲ್ಲರ ಹಟ್ಟಿಯಲ್ಲಿ ತಿಂಗಳಿಗೆ ಆರು ಸಾವಿರ ರೂಗಳ ಮನೆಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡ ಒಟ್ಟು 10 ಜನರ ಕುಟುಂಬ ಬೆಂಗಳೂರು ಸೇರಿಯಾಯಿತು. ಮಕ್ಕಳೈದು ಅಲ್ಲಿಯೇ ಶಾಲಾ ಕಾಲೇಜು ಸೇರಿಯಾಯಿತು.

ಅಬ್ಬಾ ಗ್ರಾಮದಲ್ಲೇನಿತ್ತು!

ಐದಾರು ಜನ ದುಡಿಯಲು ಸಿದ್ದವಿದ್ದರೂ ದುಡಿಮೆಯಿಲ್ಲ. ಆದಾಯವೆಂಬುದು ಮರೆತು ಹೋಗಿ ಹೊಟ್ಟೆ ಬೆನ್ನಿಗಂಟಿ ಸಾಲದ ಶೂಲ ಬೆನ್ನು ಹತ್ತಿತ್ತು. ಬಂಗಾರದಂತಹ ಬೆಂಗಳೂರು ಕರೆದು ಬದುಕು ನೀಡಿತೆಂದು ಸಹೋದರರಿಬ್ಬರು ಬೆಂಗಳೂರನ್ನು ನೆನಸಿಕೊಳ್ಳುತ್ತಿದ್ದರು.

ಹೆಚ್ಚು ಕಡಿಮೆ ನಾಲ್ಕು ಜನರ ದುಡಿಮೆಯಿಂದ ತಿಂಗಳಿಗೆ ಮುವತ್ತು ಸಾವಿರ ರೂಗಳ ನಗದನ್ನು ನೋಡುತ್ತಿದ್ದರು. ಗ್ರಾಮದಲ್ಲಿದ್ದಾಗ ಅಷ್ಟೊಂದು ಹಣವನ್ನು ಆದಾಯವಾಗಿ ನೋಡಿರಲಿಲ್ಲ. ಸಾಲವಾಗಿ ಮಾತ್ರವೇ ತಂದು ನೋಡಿದ್ದ.

ಈ ಭರವಸೆ ಮತ್ತು ಆದಾಯದಿಂದ ತಾಯಿಯ ಆರೋಗ್ಯ ಸುಧಾರಿಸಲು ಕಿದ್ವಾಯಿ ಆಸ್ಪತ್ರೆ ಕಡೆ ಮುಖ ಮಾಡಿದರು. ಅದೇ ಸಂದರ್ಭದಲ್ಲಿ ಮೊದಲ ಮಗಳಿಗೆ ಬೆಂಗಳೂರಿನ ಕೆಲಸದ ಸ್ಥಳದಲ್ಲಿ ಅನುರೂಪನಾದ ತುಮಕೂರಿನ ವರನು ಸಿಕ್ಕಾಯಿತು. 23 ವಯಸ್ಸಾಗುತ್ತಿರುವ ಮಗಳನ್ನು ಇನ್ನೆಷ್ಟು ದಿನ ಮನೆಯಲ್ಲಿಟ್ಟುಕೊಳ್ಳುವುದು. ಮದುವೆಗೆಂದು ಮೂರು ಲಕ್ಷ ಖರ್ಚು ಮಾಡಲಾಯಿತು.

ಹೊಸ ಬದುಕಿನ ಹುರುಪಿನಲ್ಲಿ ಪೂಜಾರಿ ಬಾಲಪ್ಪನಿಗೆ ಒಟ್ಟು ವ್ಯವಹಾರವು ಸ್ವಲ್ಪ ಮಟ್ಟಿಗೆ ಅಂದಾಜಿಗೂ ಸಿಕ್ಕರೂ, ಅದರ ಶಳ ಅರಿಯಲಾಗಲಿಲ್ಲ.

ಈ ನಡುವೆ ಮಗಳು ಗಂಡನ ಮನೆ ಸೇರಿದ್ದರಿಂದ ಅವಳ ಆದಾಯವೂ ಇಲ್ಲವಾಗಿತ್ತು ಮಾತ್ರವಲ್ಲಾ,ವಾಡಿಕೆಯಂತೆ ಅವಳ ಮೊದಲ ಹೆರಿಗೆ ಮತ್ತು ಸೀಮಂತದ ಖರ್ಚು ಮೈ ಮೇಲೇರಿತು. ಅದೇ ಸಂದರ್ಭದಲ್ಲಿ ದುಡಿಯುತ್ತಿದ್ದ ಎರಡನೇ ಮಗ ಅಪಘಾತಕ್ಕೀಡಾಗಿ ಕೈ ಮುರಿದುಕೊಂಡು ಮನೆಯಲ್ಲಿ ಉಳಿಯುವಂತಾಯಿತು. ಆತನ ದುಡಿಮೆಯು ನಿಂತು ಹೋಯಿತಲ್ಲದೇ ಅಸ್ಪತ್ರೆ ವೆಚ್ಚವು ಹೊರೆಯಾಯಿತು.

ಪೂಜಾರಿ ಬಾಲಪ್ಪನ ಸಾಲ

1) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಾಕನಡಕು

ಪುಟ 14 ಕ್ಕೆ



ಬಿಬಿಎಂಬಿ ಕೇಂದ್ರ ಕಛೇರಿ ಆವರಣದಲ್ಲಿ ತಮ್ಮ ಸೇವೆ ಕಾಯಂ ಮಾಡುವಂತೆ ಆಗ್ರಹಿಸಿ ಮಂಗಳವಾರ ಪ್ರತಿಭಟನೆ ನಡೆಸಿದ ಗುತ್ತಿಗೆ ಪೌರ ಕಾರ್ಮಿಕರು ಆಯುಕ್ತ ಬಿ.ಎಚ್. ಅನಿಲ್‌ಕುಮಾರ್ ಹಾಗೂ ವಿಶೇಷ ಆಯುಕ್ತ ಡಿ. ರಂದೀಪ್ ಅವರಿಗೆ ಮನವಿ ಸಲ್ಲಿಸಿದರು.



ಮೋಟಾರು ವಾಹನ ತಿದ್ದುಪಡಿ ಕಾಯ್ದೆ ವಿರೋಧಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**